ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ–06 • ಸಂಚಿಕೆ–05 • ಫೆಬ್ರವರಿ 2023




Downloaded From:www.kpscvaani.com



ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇಮಕವಾಗಿರುವ ಪೌರಕಾರ್ಮಿಕರಿಗೆ ನೇಮಕಾತಿ ಆದೇಶ ಪತ್ರವನ್ನು ಬೆಳಗಾವಿಯಲ್ಲಿ ಮುಖ್ಯಮಂತ್ರಿ ಅವರು ವಿತರಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಗೋವಿಂದ ಕಾರಜೋಳ, ಎಂ.ಟಿ.ಬಿ.ನಾಗರಾಜ್, ಶಶಿಕಲಾ ಜೊಲ್ಲೆ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಜನವರಿ 11 ರಂದು ಸ್ಮಶಾನ ಕಾರ್ಮಿಕರ ಸಮಸ್ಯೆಯನ್ನು ವಿಚಾರಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಅವರೊಂದಿಗೆ ಉಪಹಾರವನ್ನು ಸೇವಿಸುತ್ತಿರುವುದು. ಈ ಸಂದರ್ಭದಲ್ಲಿ ಸಚಿವರುಗಳಾದ ಗೋವಿಂದ ಕಾರಜೋಳ, ಕೋಟಾ ಶ್ರೀನಿವಾಸ ಪೂಜಾರಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From:www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-05 • ಫೆಬ್ರವರಿ 2023


06 ಅವಳಿ ನಗರದಲ್ಲಿ ಮೇಳೈಸಿದ 26ನೇ ರಾಷ್ಟ್ರೀಯ ಯುವಜನೋತ್ಸವ
• ಮಂಜುನಾಥ ಪುಣ್ಯವಂತಪ್ಪ ಸುಳ್ಳೊಳ್ಳಿ

12 ಹಕ್ಕು ಪತ್ರ ವಿತರಣೆಯಲ್ಲಿ ದಾಖಲೆ ಬರೆದ ಕರ್ನಾಟಕ
• ಬಿ. ವಿ. ತುಕಾರಾಂ ರಾವ್

16 ಕರ್ತವ್ಯ ಪಥ್‌ನಲ್ಲಿ ರಾಜ್ಯದ ನಾರಿ ಶಕ್ತಿ ಪ್ರದರ್ಶನ





18 ವಿಶ್ವದ ಚಿತ್ತ ರಾಜ್ಯದ ಉದ್ಯಮದತ್ತ
• ಚಂದ್ರಮುಖಿ

23 ಸ್ವಚ್ಛ ಗ್ರಾಮೀಣ ಕರ್ನಾಟಕಕ್ಕೆ ಸಂಕಲ್ಪ
• ಯಗಟಿ ಮೋಹನ್





28 ಡಾ ವಿಷ್ಣುವರ್ಧನ್ ಸ್ಮಾರಕ : ಅಭಿಮಾನಿಗಳ ಪಾಲಿನ ನಾಕ !
• ಡಿ.ಪಿ.ಮುರಳೀಧರ್

32 ಸುಶಿಕ್ಷಿತ ಸಮಾಜ ನಿರ್ಮಾಣ ಸರ್ಕಾರದ ಆದ್ಯತೆ
• ಮಂಜುನಾಥ್ ನಾಯ್ಕ್

37 ಅಲ್ಲಮನ ವಾರಸುದಾರ ಶ್ರೀ ಸಿದ್ದೇಶ್ವರ ಶ್ರೀ
• ಜೆ.ಬಿ.ಸಾಲಕ್ಕಿ

41 ನೇಕಾರರ ಶ್ರೇಯೋಭಿವೃದ್ಧಿಗಾಗಿ ಸರ್ಕಾರದ ಕ್ರಮಗಳು
• ಬಿ.ಜೆ. ಪೂರ್ಣಿಮ

44 ಆರ್.ವಿ. ದೇಶಪಾಂಡೆ ಅವರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ
• ಹೆಚ್. ಹರ್ಷಿತಾ





46 ಅದ್ದೂರಿಯಾಗಿ ಜರುಗಿದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
• ಬಿ. ವಿ. ತುಕಾರಾಂ ರಾವ್

50 ಪದಬಂಧ-39



ಪ್ರಧಾನ ಸಂಪಾದಕರು
ಡಾ|| ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಮನಸ್ಸು ಮಾಡಿದರೆ ಸಾಧನೆಗೆ ಅಸಾಧ್ಯವಾದುದು ಯಾವುದು ಇಲ್ಲ ಎಂಬುದನ್ನು ಸ್ನಾತಕೋತ್ತರ ಪದವಿಧರೆಯಾದ ಶ್ವೇತಾ ಈಶ್ವರ್ ಅವರು ಮಾಡಿ ತೋರಿಸಿದ್ದಾರೆ. ಅವರ ಕುರಿತು ಪ್ರಕಟವಾಗಿರುವ 'ಕುರಿ ಸಾಕಾಣಿಕೆಯಲ್ಲಿ ಬದುಕು ಕಂಡುಕೊಂಡ ಮಹಿಳೆ' ಎಂಬ ಲೇಖನ ಕೆಲಸ ಇಲ್ಲ ಎಂದು ಕೈಚೆಲ್ಲಿ ಕುಳಿತ ಯುವಕರಿಗೆ ದಾರಿದೀಪದಂತೆ ಇದೆ.

ಬಿಸಿಲ ನಾಡಾದ ವಿಜಯನಗರದ ಹೂವಿನಹಡಗಲಿ ತಾಲೂಕಿನ ಕೊಂಬಳಿ ಗ್ರಾಮದಲ್ಲಿ ಮಲೆನಾಡಿನ ದೇಸೀ ಬೆಳೆಯಾದ ಕಾಫಿ ಬೆಳೆದ ರೈತ ಸಿದ್ದಲಿಂಗ ಬಸಪ್ಪ ಅವರ ಯಶೋಗಾಥೆಯನ್ನು ಓದಿದರೆ ಸಾಧಿಸುವ ಛಲ ಹೊಂದಿದ್ದರೆ, ಏನನ್ನಾದರೂ ಸಾಧಿಸಬಹುದು ಎಂಬುದನ್ನು ತಿಳಿಸುತ್ತದೆ. ಒಟ್ಟಿನಲ್ಲಿ ಜನವರಿ ಸಂಚಿಕೆಯಲ್ಲಿ ಉತ್ತಮ ಲೇಖನಗಳು ಮೂಡಿ ಬಂದಿದೆ. ಆದರೂ ಪ್ರವಾಸ ತಾಣಗಳನ್ನು ಪರಿಚಯಿಸುವ ಒಂದು ಲೇಖನ ಪ್ರತಿ ತಿಂಗಳು ಇದ್ದರೆ ಅರ್ಥಪೂರ್ಣವಾಗುತ್ತಿತ್ತು ಎಂಬುದು ನನ್ನ ಅನಿಸಿಕೆ.

**–ಸುಮಂತ ತುಪ್ಪದ, ಹಾನಗಲ್**

* * *

ಪತ್ರಿಕೆಯಲ್ಲಿ ನಿಮ್ಹಾನ್ಸ್ ಆಸ್ಪತ್ರೆಯ ನರವಿಜ್ಞಾನ ವಿಭಾಗದ ಪ್ರೊಫೆಸರ್ ಡಾ. ಎಂ. ನೇತ್ರಾವತಿ ಅವರು ಮೆದುಳು ಸೋಂಕು ನಿವಾರಣೆ ಕುರಿತು ಬರೆದಿರುವ ಲೇಖನ ಉಪಯುಕ್ತ ಮಾಹಿತಿಯನ್ನು ನೀಡಿದೆ. ನಾವು ಬಹಳಷ್ಟು ಜನರು ಎಲ್ಲಾ ಕಾಯಿಲೆಗಳ ಮೇಲೆ ಎಚ್ಚರಿಕೆಯನ್ನು ಹೊಂದಿರುತ್ತೇವೆ. ಆದರೆ ಮೆದುಳು ಸೋಂಕು ಕುರಿತು ಬಹಳಷ್ಟು ಜನರಿಗೆ ಅರಿವೇ ಇಲ್ಲವೆಂದರೆ ತಪ್ಪಾಗಲಾರದು. ಮೆದುಳು ಸೋಂಕನ್ನು ನಿರ್ಲಕ್ಷ್ಯಿಸಿದರೆ ಮರಣಕ್ಕೂ ಕಾರಣವಾಗಬಹುದೆಂಬುದನ್ನು ಈ ಲೇಖನದಿಂದ ತಿಳಿದುಕೊಳ್ಳಲು ಸಾಧ್ಯವಾಯಿತು. ಆರೋಗ್ಯಕ್ಕೆ ಸಂಬಂಧಿಸಿದಂತಹ ಇಂತಹ ಲೇಖನಗಳು ಖಂಡಿತವಾಗಿ ಹೆಚ್ಚು ಉಪಯುಕ್ತವಾಗುತ್ತವೆ.


**–ರಾಧಾ ಮಹೇಶ್ವರ್, ಹುಕ್ಕೇರಿ**

* * *

ಕಾರಾಗೃಹಗಳು ಎಂದರೆ ಅಪರಾಧಿಗಳನ್ನು ಎಸಗಿರುವವರನ್ನು ಬಂಧಿಸಿಡುವ ಜಾಗ ಎಂದು ತಿಳಿದಿದ್ದೆವು. ಆದರೆ ಕಾರಾಗೃಹದ ಒಳಗೆ ಖೈದಿಗಳನ್ನು ವಿವಿಧ ಚಟುವಟಿಕೆಯಲ್ಲಿ ತೊಡಗಿಸುವ ಜೊತೆಗೆ ಅವರ ಮನ ಪರಿವರ್ತನೆಗೆ ಕಾರ್ಯಕ್ರಮಗಳನ್ನು ಏರ್ಪಡಿಸಿರುವುದು, ಖೈದಿಗಳ ಆರೋಗ್ಯ ಕಾಯ್ದುಕೊಳ್ಳಲು ಸುಸಜ್ಜಿತ ಆಸ್ಪತ್ರೆ, ಜ್ಞಾನಾರ್ಜನೆಗೆ ವಾಚನಾಲಯ, ಗ್ರಂಥಾಲಯ ಇವೇ ಮುಂತಾದ ಸೌಲಭ್ಯಗಳು ಇರುವ ಕುರಿತು ತಿಳಿದು ಆಶ್ಚರ್ಯವಾಯಿತು.

ಬೆಳಗಾವಿಯ ಹಿಂಡಲಗಾ ಕಾರಾಗೃಹವು ಶತಮಾನೋತ್ಸವ ಆಚರಿಸಿಕೊಳ್ಳಲು ಸಿದ್ಧವಾಗಿರುವ ಹಿನ್ನೆಲೆಯಲ್ಲಿ ಪ್ರಕಟಿಸಲಾಗಿರುವ ಲೇಖನದಲ್ಲಿ ಕಾರಾಗೃಹದ ಚರಿತ್ರೆಯ ಜೊತೆಗೆ ಅಪರಾಧಕ್ಕೆ ಸಂಬಂಧಿಸಿದಂತೆ ಆರೋಪಿ ಅಂದರೆ ಯಾರು ?, ಖೈದಿ ಯಾರು ? ಬೇಲ್ ಅಂದರೆ ಏನು ?, ಪೆರೋಲ್ ಅಂದರೆ ಏನು ? ಎಂಬಂತಹ ಎಲ್ಲಾ ಮಾಹಿತಿಯನ್ನು ಡಿ.ಪಿ.ಮುರಳೀಧರ್ ಅವರು ಕೂಲಂಕುಶವಾಗಿ ತಿಳಿಸಿಕೊಟ್ಟಿದ್ದಾರೆ. ಜ್ಞಾನರ್ಜನೆಗೆ ಉತ್ತಮ ಮಾಹಿತಿ.

**–ಅರುಣ್ ಕುಮಾರ್, ಸಾಲಿಗ್ರಾಮ**




ವಾರ್ತಾ ಜನಪದ ಪತ್ರಿಕೆಯ ಜನವರಿ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಸರ್ವರ ಕ್ಷೇಮಾಭಿವೃದ್ಧಿಗಾಗಿ ಆರೋಗ್ಯ ಸೇವೆ: ಸರ್ಕಾರದ ಸಂಕಲ್ಪ' ಲೇಖನ ಸರ್ಕಾರವು ಆರೋಗ್ಯ ಇಲಾಖೆಯಲ್ಲಿ ಸಾಧಿಸಿರುವ ಸಾಧನೆಯನ್ನು ಚೆನ್ನಾಗಿ ಪ್ರತಿಬಿಂಬಿಸಿದೆ. ಅತ್ಯಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಭಾರತದಂತಹ ದೇಶದಲ್ಲಿ ಕೋವಿಡ್ ಸವಾಲನ್ನು ನಿಭಾಯಿಸುವುದು ಅಷ್ಟು ಸುಲಭವಾಗಿರಲಿಲ್ಲ. ಅಂತಹ ಸವಾಲನ್ನು ನಮ್ಮ ರಾಜ್ಯ ಸರ್ಕಾರವು ಚನ್ನಾಗಿ ನಿಭಾಯಿಸಿದೆ.

ಸರ್ಕಾರವು ಕೋವಿಡ್ ಬಾಧಿತ 2.87 ಲಕ್ಷ ಜನರಿಗೆ ಉಚಿತ ಚಿಕಿತ್ಸೆ ನೀಡಿರುವುದು ಸಾಧನೆಯೇ ಸರಿ. ಜಿಲ್ಲಾಸ್ಪತ್ರೆಗಳಲ್ಲಿ ಐಸಿಯು ಬೆಡ್‌ಗಳ ಸಂಖ್ಯೆಯನ್ನು ಹೆಚ್ಚಿಸಿರುವುದು, ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಆರಂಭಿಸಲು ನಿರ್ಧಾರ, 2025 ಕ್ಕೆ ಕರ್ನಾಟಕವನ್ನು ಕ್ಷಯ ಮುಕ್ತಗೊಳಿಸುವ ಗುರಿ, ಮಾತೃಪ್ರಧಾನ ಆರೋಗ್ಯ ರಕ್ಷಣೆಗೆ ಆದ್ಯತೆ ಇವೇ ಮುಂತಾದ ವಿಚಾರಗಳು ಆರೋಗ್ಯ ಕ್ಷೇತ್ರದಲ್ಲಿ ರಾಜ್ಯ ಸರ್ಕಾರವು ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡಿದೆ ಎಂಬುದನ್ನು ತಿಳಿಸುತ್ತದೆ.

**–ಸಂಗಮೇಶ ಪಾಟೀಲ, ದಾವಣಗೆರೆ**

* * *

ರಾಜ್ಯ ಸರ್ಕಾರವು ನಗರದಲ್ಲಿ ವಾಸಿಸುವ ಬಡವರು ಮತ್ತು ಮಧ್ಯಮ ವರ್ಗದ ಜನಸಾಮಾನ್ಯರ ಆರೋಗ್ಯ ಕಾಪಾಡುವ ಸಲುವಾಗಿ 'ನಮ್ಮ ಕ್ಲಿನಿಕ್' ಸ್ಥಾಪಿಸುತ್ತಿರುವುದು ಅತ್ಯಂತ ಸಂತೋಷದಾಯಕವಾದುದು. ಸಣ್ಣಪುಟ್ಟ ಕಾಯಿಲೆಗಳಿಗೂ ನಗರವಾಸಿಗರು ಖಾಸಗಿ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಪಡೆಯಬೇಕಾಗಿತ್ತು. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದುಬಾರಿ ಹಣ ತೆತ್ತಬೇಕಾಗದ್ದರಿಂದ ಬಹಳಷ್ಟು ಜನರು ಚಿಕಿತ್ಸೆಯಿಂದ ವಂಚಿತರಾಗುತಿದ್ದರು. ಆದರೆ ಈಗ ನಮ್ಮ ಕ್ಲಿನಿಕ್ ಸ್ಥಾಪಿಸುತ್ತಿರುವುದರಿಂದ ನಗರದಲ್ಲಿ ವಾಸಿಸುತ್ತಿರುವ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹೆಚ್ಚು ಅನುಕೂಲವಾಗಲಿದೆ.

**–ಎಂ.ಕೆ. ರಂಜನಿ, ಮೈಸೂರು**

ಕಾಫಿ ತೋಟ ಎಂದರೆ ನಮಗೆ ಮಲ್ನಾಡ್ ಪ್ರದೇಶವಾದ ಚಿಕ್ಕಮಗಳೂರು ಜಿಲ್ಲೆ ನೆನಪಿಗೆ ಬರುತ್ತದೆ. ಆದರೆ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಕೊಂಬಳಿ ಗ್ರಾಮದ ರೈತ ಸಿದ್ಧಲಿಂಗಪ್ಪ ಬಸಪ್ಪ ಅವರು ಕಾಫಿ ಬೆಳೆಯುತ್ತಿರುವುದನ್ನು ತಿಳಿದು ಆಶ್ಚರ್ಯವಾಯಿತು. ಬಯಲು ಸೀಮೆಯಲ್ಲೂ ಕಾಫಿ ಬೆಳೆಯುವುದು ಯಶಸ್ವಿಯಾದರೆ ನಿಜವಾಗಿಯೂ ಬಯಲು ಸೀಮೆಯ ರೈತರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಲಿದೆ. ಯಶಸ್ವಿ ರೈತರ ಕುರಿತ ಲೇಖನ ಪ್ರಕಟಿಸುವುದರಿಂದ ಉಳಿದ ರೈತರಿಗೂ ಸ್ಫೂರ್ತಿ ನೀಡಿದಂತಾಗುತ್ತದೆ.

**–ಕೆ.ಸಿ.ಸಿದ್ದೇಶ್ವರ, ಕೊಪ್ಪಳ**

'ವಾರ್ತಾ ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೇ,**

ಜನವರಿ ಮಾಹೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎರಡು ಬಾರಿ ನಮ್ಮ ರಾಜ್ಯಕ್ಕೆ ಆಗಮಿಸಿದ್ದರು. ಅವರು 12 ರಂದು ಹುಬ್ಬಳ್ಳಿ–ಧಾರವಾಡಕ್ಕೆ ಮತ್ತು 19 ರಂದು ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗೆ ಭೇಟಿ ನೀಡಿದ್ದರು.

ಹುಬ್ಬಳ್ಳಿ–ಧಾರವಾಡದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯುವ ಭಾರತ ಕಟ್ಟುವ ಸಂಕಲ್ಪದ ಕಾರ್ಯಕ್ರಮವಾದ 26ನೇ ರಾಷ್ಟ್ರೀಯ ಯುವ ಜನೋತ್ಸವಕ್ಕೆ ಚಾಲನೆ ನೀಡಿದರು. ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಆಗಮಿಸಿದ್ದ ಸಾವಿರಾರು ಯುವ ಪ್ರತಿನಿಧಿಗಳು ಐದು ದಿನಗಳ ಕಾಲ ಯುವ ಜನೋತ್ಸವದಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ಜನರು ಏಕಕಾಲಕ್ಕೆ ಯೋಗ ಪ್ರದರ್ಶನ ಮಾಡುವ ಮೂಲಕ ಕರ್ನಾಟಕ ರಾಜ್ಯದ ಹೆಸರಿನಲ್ಲಿ ಗಿನ್ನೆಸ್ ದಾಖಲೆ ಮಾಡಿದರು.

ಕಲಬುರಗಿಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಉತ್ತರ ಕರ್ನಾಟಕದ ಐದು ಜಿಲ್ಲೆಯ 52,072 ಮಂದಿ ತಾಂಡಾ ಜನರಿಗೆ ಪ್ರಧಾನಿ ಅವರು ಏಕಕಾಲಕ್ಕೆ ಹಕ್ಕುಪತ್ರ ನೀಡಿದರು. ಇಷ್ಟು ಜನರಿಗೆ ಏಕ ಕಾಲಕ್ಕೆ ಹಕ್ಕು ಪತ್ರ ನೀಡಿರುವುದು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ವಿಶ್ವ ದಾಖಲೆಗೆ ಸೇರ್ಪಡೆ ಆದುದು ದೇಶದ ಗಮನ ಸೆಳೆಯಿತು.

ಯಾದಗಿರಿ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾರಾಯಣಪುರ ಎಡದಂಡೆ ಕಾಲುವೆಯ ವಿಸ್ತರಣೆ, 15.84 ಲಕ್ಷ ಜನರ ಮನೆ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆ ಸೇರಿದಂತೆ ಸುಮಾರು 10 ಸಾವಿರ ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಪ್ರಧಾನಿ ಅವರು ಚಾಲನೆ ನೀಡಿದರು. ಇದು ಉತ್ತರ ಕರ್ನಾಟಕ ಭಾಗದಲ್ಲಿ ಜಲಕ್ರಾಂತಿಗೆ ಮುನ್ನುಡಿ ಬರೆಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಿಕ್ಷಣ ಮತ್ತು ಉದ್ಯೋಗಕ್ಕೂ ಕೂಡ ಹೆಚ್ಚಿನ ಒತ್ತು ನೀಡಿದ್ದಾರೆ. ರಾಜ್ಯದ ಜನಸಂಖ್ಯೆಯಲ್ಲಿ ಶೇ.30 ರಷ್ಟಿರುವ ಯುವ ಸಮುದಾಯವನ್ನು ಸರಿಯಾದ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವ ಸಲುವಾಗಿ ಸರ್ಕಾರವು ಯುವ ನೀತಿಯನ್ನು ಜಾರಿಗೆ ತಂದಿದೆ. ಅಲ್ಲದೆ ಯುವ ಬಜೆಟ್‌ನಲ್ಲಿ ಕಿರು ಉದ್ಯಮಗಳಿಗೆ ಆದ್ಯತೆ ನೀಡುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಮುಂದಾಗಿದೆ.

ಮುಖ್ಯಮಂತ್ರಿ ಅವರು ಅಂತಃಕರಣವುಳ್ಳವರು. ಹಾಗಾಗಿ ಸಮಾಜದ ತಳ ಹಂತದಲ್ಲಿರುವವರ ಕಷ್ಟಕ್ಕೆ ಅವರು ಬೇಗ ಸ್ಪಂದಿಸುತ್ತಾರೆ. ಇತ್ತೀಚೆಗೆ ಸ್ಮಶಾನ ಕಾರ್ಮಿಕರ ಸಮಸ್ಯೆ ವಿಚಾರಿಸಿದ ವೇಳೆ ಅವರೊಂದಿಗೆ ಬೆಳಗಿನ ಉಪಹಾರವನ್ನು ಸೇವಿಸಿದರು. ಮುಖ್ಯಮಂತ್ರಿಗಳೊಬ್ಬರು ಸ್ಮಶಾನ ಕಾರ್ಮಿಕರೊಂದಿಗೆ ಉಪಹಾರ ಸೇವಿಸಿರುವುದು ಇದೇ ಮೊದಲು. ಮೃತರ ಸಂಬಂಧಿಕರು ನೀಡುವ ಹಣದ ಮೇಲೆ ಬದುಕು ಕಟ್ಟಿಕೊಂಡಿರುವ ವಿಚಾರ ತಿಳಿದ ಕೂಡಲೇ ಸ್ಮಶಾನ ಕಾರ್ಮಿಕರ ಉದ್ಯೋಗವನ್ನು ಖಾಯಂಗೊಳಿಸುವ ಭರವಸೆ ನೀಡಿದ್ದಾರೆ.

ಈ ಹಿಂದೆ ಪೌರಕಾರ್ಮಿಕರ ಸೇವೆಯನ್ನು ಖಾಯಂ ಮಾಡುವುದಾಗಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದರು. ಅದರಂತೆ ಈಗಾಗಲೇ ಹನ್ನೊಂದು ಸಾವಿರ ಪೌರಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಲಾಗಿದ್ದು, ಉಳಿದ ನಲವತ್ತು ಸಾವಿರ ಪೌರಕಾರ್ಮಿಕರ ಸೇವೆಯನ್ನು ಎರಡು ಹಂತದಲ್ಲಿ ಖಾಯಂ ಮಾಡಲಾಗುತ್ತಿದೆ. ಇವೆಲ್ಲವು ಅವರು ಅಂತಃಕರಣವುಳ್ಳವರು ಎಂಬುದಕ್ಕೆ ನಿದರ್ಶನವಾಗಿದೆ.

ಈ ಸಂಚಿಕೆಯಲ್ಲಿ ಪ್ರಧಾನಮಂತ್ರಿ ಅವರ ಭೇಟಿ ಕುರಿತ ಲೇಖನಗಳೊಂದಿಗೆ ಕೈಗಾರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಶಿಕ್ಷಣ, ಕ್ರೀಡಾ ಇಲಾಖೆಯ ಸಾಧನೆ ಬಿಂಬಿಸುವ ಲೇಖನಗಳನ್ನು ಪ್ರಕಟಿಸಲಾಗಿದೆ.

ನಮ್ಮ ರಾಜ್ಯದ ಸ್ತಬ್ಧಚಿತ್ರವು ಈ ಬಾರಿ ಕೂಡ ರಾಜಧಾನಿ ನವದೆಹಲಿಯ ಕರ್ತವ್ಯಪಥ್‌ನ ಪಥಸಂಚಲನದಲ್ಲಿ ಭಾಗವಹಿಸಿತ್ತು. ನಿಸ್ವಾರ್ಥ ಸಮಾಜ ಸೇವೆ ಸಲ್ಲಿಸಿರುವ ಮೂವರು ಮಹಿಳಾ ಸಾಧಕರನ್ನು ಬಿಂಬಿಸಿದ್ದ ಸ್ತಬ್ಧಚಿತ್ರವು ಜನರನ್ನು ಆಕರ್ಷಿಸಿತು. ಸತತವಾಗಿ ನಮ್ಮ ರಾಜ್ಯವು 14ನೇ ಬಾರಿಯೂ ಭಾಗವಹಿಸಿರುವುದು ಹೆಮ್ಮೆಯ ವಿಚಾರವಾಗಿದೆ ಎಂಬುದನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತದೆ.

**ಓದುಗರೆಲ್ಲರಿಗೂ ಶಿವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು.**

**ಡಾ|| ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com



## ಅವಳಿ ನಗರದಲ್ಲಿ ಮೇಳೈಸಿದ

# 26ನೇ ರಾಷ್ಟ್ರೀಯ ಯುವಜನೋತ್ಸವ

**ಹುಬ್ಬಳ್ಳಿ ಮತ್ತು ಧಾರವಾಡ ನಗರದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಯುವಜನೋತ್ಸವದಲ್ಲಿ ದೇಶದ ವಿವಿಧ ಪ್ರದೇಶಗಳ ವೈವಿಧ್ಯಮಯ ಕಲೆ ಮತ್ತು ಸಂಸ್ಕೃತಿ ಅನಾವರಣಗೊಂಡಿತ್ತು.**

ಮಂಜುನಾಥ ಪುಣ್ಯವಂತಪ್ಪ ಸುಳ್ಳೊಳ್ಳಿ

ಮೋದಿ..... ಮೋದಿ..... ಮೋದಿ..... ಮೋದಿ..... ಯುವಕರ ಹರ್ಷೋದ್ಗಾರ ಇಡೀ ಹುಬ್ಬಳ್ಳಿ ನಗರದಾದ್ಯಂತ ಪ್ರತಿಧ್ವನಿಸಿತ್ತು. ಜನವರಿ 12, ಸ್ವಾಮಿ ವಿವೇಕಾನಂದರ ಜನ್ಮದಿನ. ಈ ಮಹಾನ್ ಯುವ ಚೇತನಕ್ಕೆ ಗೌರವ ನಮನ ಸಮರ್ಪಿಸಲು ಆಯೋಜಿಸಲಾಗಿದ್ದ 26ನೇ ರಾಷ್ಟ್ರೀಯ ಯುವಜನೋತ್ಸವದ ಉದ್ಘಾಟನೆಗೆ ಪ್ರಧಾನಮಂತ್ರಿಗಳು ಹುಬ್ಬಳ್ಳಿಗೆ ಆಗಮಿಸುತ್ತಲೇ ರಸ್ತೆ ಬದಿಯ ಇಕ್ಕೆಲಗಳಲ್ಲಿ ನಿಂತ ಜನಸಾಗರದತ್ತ ಕೈಬೀಸುತ್ತಾ ಕಾರಿನಲ್ಲಿ ಸಂಚರಿಸಿದ ನರೇಂದ್ರ ಮೋದಿಯವರನ್ನು ಹುಬ್ಬಳ್ಳಿಯ ಜನರು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಹುಬ್ಬಳ್ಳಿಯ ರೈಲ್ವೆ ಕ್ರೀಡಾಂಗಣದ ವೇದಿಕೆಯಲ್ಲಿ ಪ್ರಧಾನಿಗಳು ಆಗಮಿಸುತ್ತಲೇ ಮತ್ತೇ ಅದೇ ಜೋರಾದ ಶಬ್ದ ಮೋದಿ... ಮೋದಿ... ಎನ್ನುವ ಯುವಜನಸಾಗರದ ಸಂತೋಷ, ಉಲ್ಲಾಸ, ಅಭಿಮಾನದಲ್ಲಿ ತೇಲುತ್ತಿತ್ತು. ಹುಬ್ಬಳ್ಳಿ-ಧಾರವಾಡದಲ್ಲಿ ಆಯೋಜಿಸಲಾಗಿದ್ದ ಈ ಯುವಜನೋತ್ಸವದಲ್ಲಿ 28 ರಾಜ್ಯ ಹಾಗೂ 8 ಕೇಂದ್ರಾಡಳಿತ ಪ್ರದೇಶಗಳಿಂದ 7500 ಯುವ ಪ್ರತಿನಿಧಿಗಳು ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಡಿಜಿಟಲ್ ಇಂಡಿಯಾದ ಪ್ರಸ್ತುತ ಕಾಲಘಟ್ಟದಲ್ಲಿ ಕೌಶಲ್ಯಭರಿತ ಯುವಜನತೆಗೆ ಅವಕಾಶಗಳ ಬಾಗಿಲು ತೆರೆದಿದೆ. **"ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ"** ಎಂಬ ಸ್ವಾಮಿ ವಿವೇಕಾನಂದರ ಮಂತ್ರವನ್ನು ಮನದಲ್ಲಿಟ್ಟುಕೊಂಡು ಅಭಿವೃದ್ಧಿಯ ದಿಗಂತದ ಕಡೆಗೆ ದೇಶವನ್ನು ಕೊಂಡೊಯ್ಯಲು ಯುವಸಮುದಾಯ ಕೈಜೋಡಿಸಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದೀಜಿಯವರು ಕರೆ ನೀಡಿದರು.



Downloaded From:www.kpscvaani.com

**"ವಿಕಸಿತ ಯುವ–ವಿಕಸಿತ ಭಾರತ"** ಎಂಬ ಘೋಷವಾಕ್ಯದೊಂದಿಗೆ ಹುಬ್ಬಳ್ಳಿ–ಧಾರವಾಡದಲ್ಲಿ ಜನವರಿ 12 ರಿಂದ 16 ರವರೆಗೆ ನಡೆದ 26ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮಕ್ಕೆ ಅವರು ಕೇಶ್ವಾಪುರದ ರೈಲ್ವೆ ಮೈದಾನದಲ್ಲಿ ಚಾಲನೆ ನೀಡಿದರು.

ಮೂರುಸಾವಿರ ಮಠ...ಸಿದ್ಧಾರೂಢ ಮಠ ಇಂತಹ ಅನೇಕ ಮಠಗಳ ಕ್ಷೇತ್ರಗಳಿಗೆ ನನ್ನ ನಮಸ್ಕಾರಗಳು. ಚೆನ್ನಮ್ಮನ ನಾಡು, ರಾಯಣ್ಣನ ಬೀಡು ಪುಣ್ಯದ ನಾಡಿಗೆ ನನ್ನ ನಮಸ್ಕಾರಗಳು.... ಎಂದು ಕನ್ನಡದಲ್ಲಿ ಮಾತು ಆರಂಭಿಸಿದ ಪ್ರಧಾನಮಂತ್ರಿ ನರೇಂದ್ರ ಮೋದೀಜಿಯವರು, ದೇಶದ ಪ್ರಗತಿಯಲ್ಲಿ ಯುವಕರ ಪಾತ್ರವನ್ನು ಮನದಟ್ಟು ಮಾಡಿಕೊಟ್ಟರು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡಿಗರು, ಭೀಮಸೇನ್ ಜೋಶಿ, ಗಂಗೂಬಾಯಿ ಹಾನಗಲ್ ಸೇರಿದಂತೆ ಅನೇಕ ಸಂಗೀತ ಲೋಕದ ದಿಗ್ಗಜರನ್ನು ಸ್ಮರಿಸಿದರು.

**"ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ"** ಎಂಬ ಸ್ವಾಮಿ ವಿವೇಕಾನಂದರ ಮಂತ್ರವನ್ನು ಕನ್ನಡದಲ್ಲಿ ಉಚ್ಚರಿಸಿದ ಪ್ರಧಾನಮಂತ್ರಿ ಮೋದೀಜಿಯವರು, ಇಂತಹ ಸಂದರ್ಭದಲ್ಲಿ ನಾವು ನಮ್ಮ ಕರ್ತವ್ಯಗಳನ್ನು ಅರಿತುಕೊಂಡು ದೇಶವನ್ನು ಮುನ್ನಡೆಸಬೇಕಿದೆ ಎಂದು ಯುವಕರಿಗೆ ಕಿವಿಮಾತು ಹೇಳಿದರು.



ಸ್ವಾಮಿ ವಿವೇಕಾನಂದರು ಕರ್ನಾಟಕದ ಜತೆ ಅವಿನಾಭಾವ ಸಂಬಂಧ ಹೊಂದಿದ್ದರು. ಬೆಂಗಳೂರು, ಹುಬ್ಬಳ್ಳಿ–ಧಾರವಾಡದಲ್ಲಿ ಸಂಚರಿಸಿದ್ದರು. ಮೈಸೂರು ಮಹಾರಾಜರು ವಿವೇಕಾನಂದರಿಗೆ ಶಿಕಾಗೊ ಸಮ್ಮೇಳಕ್ಕೆ ಹೋಗಲು ನೆರವು ನೀಡಿದ್ದರು ಎಂದು ನೆನಪಿಸಿದರು.

ಏಕ ಭಾರತ–ಶ್ರೇಷ್ಠ ಭಾರತ ನಿರ್ಮಾಣಕ್ಕೆ ದೇಶವು ಹೊಸ ಸಂಕಲ್ಪದಿಂದ ಮುನ್ನಡೆದಿದೆ. ಯುವ ಶಕ್ತಿ ಸದೃಢವಾಗಿದ್ದರೆ ಸದೃಢ ದೇಶ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ ಎಂಬುದು ಸ್ವಾಮಿ ವಿವೇಕಾನಂದರ ನಂಬಿಕೆಯಾಗಿತ್ತು.

ರಾಣಿ ಚೆನ್ನಮ್ಮ ಸಂಕಷ್ಟದ ಕಾಲದಲ್ಲೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಸಂಗೊಳ್ಳಿ ರಾಯಣ್ಣನ ಶೌರ್ಯವು ಬ್ರಿಟಿಷ್‌ರ ಎದೆ ನಡುಗಿಸಿತ್ತು. ಇಂತಹ ಮಹನೀಯರ ದೇಶಭಕ್ತಿ ನಮಗೆ ಆದರ್ಶವಾಗಬೇಕಿದೆ.

ವಿಶ್ವೇಶ್ವರಯ್ಯ ಅವರು ತಮ್ಮ ಪ್ರತಿಭೆಯ ಮೂಲಕ ಯುವ ಸಮುದಾಯವು ಹೇಗೆ ಎಲ್ಲೆಡೆ ಪಸರಿಸಿದೆ ಎಂಬುದಕ್ಕೆ ಉದಾಹರಣೆಯಾಗಿದ್ದಾರೆ. ಜಾಗತಿಕ ಮಟ್ಟದಲ್ಲಿ ಗಣಿತದಿಂದ ವಿಜ್ಞಾನದ ಯಾವುದೇ ಸ್ಪರ್ಧೆ ನಡೆದರೂ ಭಾರತೀಯರ ಸಾಧನೆ ಅದ್ವಿತೀಯ. ಇದು ಭಾರತದ ಯುವಶಕ್ತಿಯ ಸಂಕೇತವಾಗಿದೆ. ಯುವಶಕ್ತಿ ದೇಶವನ್ನು ನಡೆಸುವ ಶಕ್ತಿಯಾಗಿದೆ. ಮುಂದಿನ 25 ವರ್ಷಗಳಲ್ಲಿ ಭಾರತಕ್ಕೆ ಯುವಶಕ್ತಿ ದಿಕ್ಸೂಚಿಯಾಗಲಿದೆ ಎಂದರು.

ಭಾರತವು ಜಗತ್ತಿನ 5 ನೇ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿದೆ. ಇದನ್ನು ಅಗ್ರ ಮೂರನೇ ಸ್ಥಾನಕ್ಕೆ ಕೊಂಡೊಯ್ಯುವ ಗುರಿ ನಮ್ಮದಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದೀಜಿ ಹೇಳಿದರು. ಕೃಷಿ ಕ್ಷೇತ್ರದಲ್ಲಿ ಭಾರತವು ಜಗತ್ತಿನ ಮುಂಚೂಣಿಯಲ್ಲಿದ್ದು, ಈ ಕ್ಷೇತ್ರದಲ್ಲಿ ತಂತ್ರಜ್ಞಾನ ಬಳಕೆಯಿಂದ ಯುವ ಜನತೆಗೆ ಇನ್ನಷ್ಟು ಅವಕಾಶಗಳು ಲಭಿಸಲಿವೆ.



ಕ್ರೀಡಾ ಕ್ಷೇತ್ರದಲ್ಲಿ ಭಾರತವು ಪ್ರಕಾಶಿಸುತ್ತಿರುವುದಕ್ಕೆ ಯುವ ಸಮುದಾಯದ ಪ್ರಯತ್ನವೇ ಕಾರಣವಾಗಿದೆ. ಇದೊಂದು ವಿಶೇಷ ಅವಕಾಶ. ಈಗಿರುವುದು ವಿಶೇಷ ಪೀಳಿಗೆ ಆಗಿದೆ. ದೇಶದ ಆರ್ಥಿಕತೆ ಸುಧಾರಣೆ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲಿ ಕಳೆದ ಒಂಭತ್ತು ವರ್ಷಗಳಲ್ಲಿ ಸಾಕಷ್ಟು


Downloaded From:www.kpscvaani.com



ಕೆಲಸ ಮಾಡಲಾಗಿದೆ. ಇದೀಗ ರನ್ ವೇ ಸಿದ್ಧವಾಗಿದೆ. ಯುವ ಸಮುದಾಯ ಇದನ್ನು ಬಳಸಿಕೊಂಡು ಅಭಿವೃದ್ಧಿಯ ದಿಗಂತದ ಕಡೆಗೆ ಹಾರಲು ಮುಂದಾಗಬೇಕಿದೆ ಎಂದರು.

ಸ್ತ್ರೀಶಕ್ತಿಯು ರಾಷ್ಟ್ರಶಕ್ತಿಯನ್ನು ಮುನ್ನಡೆಸುವಲ್ಲಿ ಸಫಲವಾಗಿದೆ. ಫೈಟರ್ ಜೆಟ್ ಹಾರಿಸುತ್ತಿರುವ ಮಹಿಳೆಯರು ವಿಜ್ಞಾನ, ತಂತ್ರಜ್ಞಾನ, ಕ್ರೀಡೆ ಸೇರಿದಂತೆ ಎಲ್ಲ ಕ್ಷೇತ್ರದಲ್ಲಿ ಮುನ್ನುಗ್ಗುತ್ತಿದ್ದಾರೆ. ಯುವಜನತೆ ವರ್ತಮಾನದಲ್ಲಿದ್ದುಕೊಂಡು ಭವಿಷ್ಯದ ಕಡೆ ಸಕಾರಾತ್ಮಕವಾಗಿ ಯೋಚಿಸುವ ಮೂಲಕ ಹೊಸ ಹೊಸ ಆವಿಷ್ಕಾರಗಳತ್ತ ಚಿತ್ತವನ್ನು ಹರಿಸಬೇಕು.

ಪ್ರಸ್ತುತ ದಿನಗಳಲ್ಲಿ ಯುವಶಕ್ತಿಯ ಮುಂದೆ ಹತ್ತಾರು ಅವಕಾಶಗಳಿವೆ. ಆಯ್ಕೆ ಅವರ ಮುಂದಿದೆ. ಕ್ಷಿಪ್ರವಾಗಿ ಬದಲಾಗುತ್ತಿರುವ ಈ ಸಂದರ್ಭದಲ್ಲಿ ಯುವಕರು ವೈಯಕ್ತಿಕ ಸಾಧನೆಯ ಜತೆಗೆ ಸಾಂಸ್ಥಿಕ ಹಾಗೂ ಅನ್ವೇಷಣೆ ಮೂಲಕ ದೇಶದ ಪ್ರಗತಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಸ್ವಚ್ಛ ಭಾರತ, ಡಿಜಿಟಲ್ ಇಂಡಿಯಾ, ಕೋವಿಡ್ ಲಸಿಕೆ ಹೀಗೆ ಪ್ರತಿಯೊಂದು ಮಜಲುಗಳಲ್ಲಿ ಕೆಲವರು ಅಪಹಾಸ್ಯ ಮಾಡಿದ್ದರು. ಆದರೆ ಭಾರತದ ಈ ಸಾಧನೆಯ ಬಗ್ಗೆ ಜಗತ್ತಿನಲ್ಲಿ ಈಗ ಚರ್ಚೆ ನಡೆದಿದೆ. ಯುವಶಕ್ತಿಯನ್ನು ಕಟ್ಟಿಕೊಂಡು ದೇಶದಲ್ಲಿ ವಿಭಿನ್ನ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ದೇಶದ ಬೇರೆ ಬೇರೆ ಭೌಗೋಳಿಕ ಪ್ರದೇಶಗಳ ಯುವಕರ ತಂಡಗಳು ಬಂದಿವೆ. ಇಲ್ಲಿನ ಸ್ಪರ್ಧೆಯಲ್ಲಿ ಯಾರೇ ಗೆದ್ದರೂ ಅಂತಿಮವಾಗಿ ಭಾರತವೇ ಗೆಲ್ಲುತ್ತದೆ. ಆದ್ದರಿಂದ ಯುವಜನೋತ್ಸವದಲ್ಲಿ ಭಾಗವಹಿಸುವ ತಂಡಗಳು ವಿಕಸಿತ ಭಾರತ-ಸಮರ್ಥ ಭಾರತವನ್ನು ಗಮನದಲ್ಲಿಟ್ಟುಕೊಂಡು ದೇಶವನ್ನು ಮುನ್ನಡೆಸಬೇಕು ಎಂದು ಕರೆ ನೀಡಿದರು.

**ಯುವಜನೋತ್ಸವದಿಂದ ಭಾವನಾತ್ಮಕ ಬೆಸುಗೆ:**

ರಾಷ್ಟ್ರೀಯ ಯುವಜನೋತ್ಸವವು ಇಡೀ ದೇಶವನ್ನು ಭೌಗೋಳಿಕವಾಗಿ ಹಾಗೂ ಭಾವನಾತ್ಮಕವಾಗಿ ಒಂದುಗೂಡಿಸುತ್ತದೆ ಎಂದು ಕೇಂದ್ರ ಯುವ ವ್ಯವಹಾರಗಳು ಹಾಗೂ ಕ್ರೀಡಾ ಸಚಿವರಾದ ಅನುರಾಗ್ ಸಿಂಗ್ ಠಾಕೂರ್ ಅಭಿಪ್ರಾಯಪಟ್ಟರು.

ಸ್ವಸ್ಥ ಶರೀರದಲ್ಲಿ ಸ್ವಸ್ಥ ಮನಸ್ಸು ಇರುತ್ತದೆ. ಆದ್ದರಿಂದ ಗೀತಾ-ರಾಮಾಯಣ ಓದುವ ಮೊದಲು ಫುಟ್ಬಾಲ್ ಆಡುವಂತೆ ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಪ್ರಸ್ತುತ ಪ್ರಧಾನ ಮಂತ್ರಿಗಳು ಕೂಡ ಅದೇ ಮಾರ್ಗದಲ್ಲಿ ದೇಶದ ಯುವ ಜನತೆಯನ್ನು ಕೊಂಡೊಯ್ಯುತ್ತಿದ್ದಾರೆ. ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ನಿರ್ಮಿಸುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಜೀಯವರ ಕನಸುಗಳ ಸಾಕಾರಕ್ಕೆ ಯುವಸಮುದಾಯ ಕೈಜೋಡಿಸುವ ಅಗತ್ಯವಿದೆ.

ಮೋದಿಜಿಯವರ ನಾಯಕತ್ವದಲ್ಲಿ ಜಿ-20 ಅಧ್ಯಕ್ಷತೆ ಸ್ಥಾನವು ಭಾರತಕ್ಕೆ ಲಭಿಸಿದೆ. ಕ್ರೀಡೆಗಳಲ್ಲಿ ಅತ್ಯುನ್ನತ ಸಾಧನೆಯನ್ನು ದೇಶವು ಸಾಧಿಸಿದೆ. ಭಾರತವನ್ನು ವಿಕಸಿತಗೊಳಿಸುವ ಆಂದೋಲನವು ಒಬ್ಬ ನರೇಂದ್ರ (ಸ್ವಾಮಿ ವಿವೇಕಾನಂದ) ಅವರಿಂದ ಆರಂಭಗೊಂಡು ಈಗ ಇನ್ನೊಬ್ಬ ನರೇಂದ್ರ (ಪ್ರಧಾನಮಂತ್ರಿ ನರೇಂದ್ರ ಮೋದೀಜಿ) ಅವರ ಮೂಲಕ ಮುಂದುವರಿದಿದೆ.

ಭ್ರಷ್ಟಾಚಾರ ಮುಕ್ತ, ನಶಾಮುಕ್ತವಾಗಿರುವ ಸ್ವಸ್ಥ ಮತ್ತು ಸದೃಢ ಭಾರತ ನಿರ್ಮಾಣಕ್ಕೆ ಯುವಜನತೆ ಕೈಜೋಡಿಸಬೇಕು ಎಂದು ಕೇಂದ್ರ ಸಚಿವ ಅನುರಾಗ ಸಿಂಗ್ ಠಾಕೂರ್ ಅವರು ಕರೆ ನೀಡಿದರು.

ಕೇಂದ್ರ ಸಂಸದೀಯ ವ್ಯವಹಾರಹಗಳು, ಕಲ್ಲಿದ್ದಲು ಮತ್ತು ಗಣಿ ಸಚಿವರಾದ ಪ್ರಹ್ಲಾದ್ ಜೋಶಿ ಮಾತನಾಡಿ, ಸ್ವಾಮಿ ವಿವೇಕಾನಂದರ ಜಯಂತಿಯ ಈ ಸಂದರ್ಭದಲ್ಲಿ ಮೊಟ್ಟ ಮೊದಲ ಬಾರಿಗೆ ಉತ್ತರ ಕರ್ನಾಟಕದಲ್ಲಿ ರಾಷ್ಟ್ರೀಯ ಯುವಜನೋತ್ಸವ ಆಯೋಜಿಸಲಾಗಿದೆ. ಜಗತ್ತಿನಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಹೊಂದಿರುವ

**ಗಿನ್ನೆಸ್ ದಾಖಲೆ**

ಕರ್ನಾಟಕ ರಾಜ್ಯವನ್ನು ಯೋಗಾಥಾನ್‌ದಲ್ಲಿ ಗಿನ್ನೆಸ್ ದಾಖಲೆಗೆ ಸೇರ್ಪಡೆಗೊಳಿಸಲು ಯೋಗಾಸನದ ವಿಶೇಷ ಪ್ರದರ್ಶನ ಆಯೋಜಿಸಲು ಕಳೆದ ಎಂಟು ತಿಂಗಳಿಂದ ರಾಜ್ಯ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯು ನಿರಂತರವಾಗಿ ಶ್ರಮಿಸಿದ ಫಲವಾಗಿ ಜನವರಿ 15 ರಂದು ರಾಜ್ಯದ 4,05,255 ಜನರು ಏಕಕಾಲಕ್ಕೆ ಯೋಗ ಪ್ರದರ್ಶನ ಮಾಡುವ ಮೂಲಕ ಕರ್ನಾಟಕ ರಾಜ್ಯದ ಹೆಸರಿನಲ್ಲಿ ಗಿನ್ನೆಸ್ ದಾಖಲೆ ಮಾಡಿತು.



Downloaded From:www.kpscvaani.com



ಭಾರತ ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸುತ್ತಿದೆ. ದೇಶದ ಯುವ ಜನತೆ ಉತ್ಸಾಹದಿಂದ ಉತ್ಸವದಲ್ಲಿ ಭಾಗವಹಿಸುತ್ತಿರುವುದು ಸಂತಸ ತಂದಿದೆಯೆಂದು.

ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಇಲಾಖೆಯ ಸಚಿವರಾದ ಶಂಕರ ಪಾಟೀಲ ಮುನೇನಕೊಪ್ಪ ಅಧ್ಯಕ್ಷತೆ ವಹಿಸಿದ್ದರು.

ಏಲಕ್ಕಿ ಹಾರ, ವಿವೇಕಾನಂದರ ವಿಗ್ರಹ, ರಾಷ್ಟ್ರಧ್ವಜ ಚೌಕಟ್ಟಿನ ಸ್ಮರಣಿಕೆ ಸಾಂಪ್ರದಾಯಿಕ ಶಾಲು ಹೊದಿಸಿ, ಮುತ್ತಿನಿಂದ ಅಲಂಕರಿಸಿದ ಪೇಟ ತೊಡಿಸಿ, ತೇಗದ ಮರದಲ್ಲಿ ತಯಾರಿಸಿದ ಸ್ವಾಮಿ ವಿವೇಕಾನಂದರ ವಿಗ್ರಹ, ಬೆಂಗೇರಿಯಲ್ಲಿ ಸಿದ್ಧವಾಗುವ ರಾಷ್ಟ್ರಧ್ವಜವನ್ನು ಅಳವಡಿಸಿದ ಚೌಕಟ್ಟಿನ ಸ್ಮರಣಿಕೆ ನೀಡಿ ಪ್ರಧಾನಿಯವರನ್ನು ಗೌರವಿಸಲಾಯಿತು.



### ಪ್ಲಾಸ್ಟಿಕ್ ಮುಕ್ತ ಉತ್ಸವ

ಪ್ಲಾಸ್ಟಿಕ್ ಮುಕ್ತ ಹಾಗೂ ಮರುಬಳಕೆಯ ವಸ್ತುಗಳನ್ನು ಮಾತ್ರ ಉಪಯೋಗಿಸಿ, ಈ ಬಾರಿ ಹಸಿರು ಉತ್ಸವವನ್ನು ಆಚರಿಸಿರುವುದು ಹೆಮ್ಮೆಯ ಸಂಗತಿ, ಬೆಂಗಳೂರಿನ ಒಂದು ಆಡಿಟಂಗ್ (ಪರಿಶೋಧನಾ) ಸಂಸ್ಥೆಯು ಇದನ್ನು ಪ್ರಮಾಣೀಕರಿಸಿದೆ.




### ಗಮನ ಸೆಳೆದ ಸಿರಿಧಾನ್ಯ ಮೇಳ

ಸಿರಿಧಾನ್ಯಗಳು ಕೃಷಿ ಪರಿಸರದಿಂದ ಕಣ್ಮರೆಯಾಗುತ್ತಿದ್ದು ಮಾನವನ ಆಹಾರದಲ್ಲಿ ಪೋಷಕಾಂಶಗಳ ಕೊರತೆ ಉಂಟಾಗಿದೆ. ಪೋಷಕಾಂಶ ಕೊರತೆಯಿಂದ ಬೇರೆ ಬೇರೆ ಅನಾರೋಗ್ಯದ ಸಮಸ್ಯೆಗಳು ತಲೆದೊರುತ್ತಿದೆ. ಹಾಗಾಗಿ ಸಿರಿಧಾನ್ಯಗಳ ಕೃಷಿ ಮತ್ತು ಬಳಕೆಯನ್ನು ಉತ್ತೇಜಿಸಬೇಕಾಗಿದೆ. ನಮ್ಮ ಸಂಪ್ರದಾಯಿಕ ಆಹಾರ ಧಾನ್ಯಗಳಾದ ಜೋಳ, ರಾಗಿ, ಸಜ್ಜೆ, ನವಣೆ, ಅರಕ, ಊದಲು, ಕೊರಲು, ಸಾಮೆ, ಬರಗು ಇವೆಲ್ಲ ಉತ್ತಮ ಪೋಷಕಾಂಶಗಳ ಮೂಲಗಳಾಗಿದ್ದು, ಯಥೇಚ್ಛ ನಾರಿನ ಅಂಶವನ್ನು ಒಳಗೊಂಡಿವೆ. ಸಿರಿಧಾನ್ಯ ಸೇವನೆಯಿಂದ ಮನುಷ್ಯನ ಆರೋಗ್ಯದಲ್ಲಿ ಶೀಘ್ರ ಸುಧಾರಣೆ ಆಗುವುದನ್ನು ತಜ್ಞರು ಗುರುತಿಸಿದ್ದಾರೆ. ಈ ಎಲ್ಲ ಸಂಗತಿಗಳ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸಲು ಐದು ದಿನಗಳ ಸಿರಿಧಾನ್ಯ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು.

ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ



Downloaded From:www.kpscvaani.com

ಕೇಂದ್ರ, ವಿವಿಧ ರೈತ ಉತ್ಪಾದಕ ಕಂಪನಿಗಳು, ಸ್ವಸಹಾಯ ರೈತ ಉತ್ಪಾದಕ ಕಂಪನಿಗಳು, ಸ್ವಸಹಾಯ ಸ್ತ್ರೀಶಕ್ತಿ ಗುಂಪುಗಳು, ಖಾಸಗಿ ಕಂಪನಿಗಳು, ವಿವಿಧ ಸಿರಿಧಾನ್ಯ ಹಾಗೂ ಉತ್ಪನ್ನಗಳನ್ನು ಮಾರಾಟ ಮಾಡಿದರು. ಸಿರಿಧಾನ್ಯಗಳಿಂದ ಬ್ರೆಡ್, ಕುಕಿಸ್, ಮಿಲೆಟ್ ಡೋನೆಟ್, ಮಿಲೆಟ್ ರಸ್ಕ್, ಮಿಲೆಟ್ ರೊಟ್ಟಿ ಹಿಟ್ಟು ಸೇರಿದಂತೆ ವಿವಿಧ ಉತ್ಪನ್ನಗಳನ್ನು ತಯಾರಿಸಲಾಗಿತ್ತು.

### ಆಕರ್ಷಕ ಸೇನಾ ಮಳಿಗೆ–ಆಯುಧಗಳು

26 ನೇ ರಾಷ್ಟ್ರೀಯ ಯುವಜನೋತ್ಸವದಲ್ಲಿ "ನಿಮ್ಮ ಸೇನೆ ಬಗ್ಗೆ ತಿಳಿದುಕೊಳ್ಳಿ" [ನೋ ಯುವರ್ ಆರ್ಮಿ] ಎಂಬ ವಿಶೇಷ ಮಳಿಗೆಗಳು ಜನರ ಗಮನ ಸೆಳೆಯಿತು.

ಯುವ ಜನೋತ್ಸವದ ಅಂಗವಾಗಿ ಧಾರವಾಡದ ಕೆಸಿಡಿ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ ವಸ್ತುಪ್ರದರ್ಶನದಲ್ಲಿ ಭಾರತೀಯ ಸೈನ್ಯದ ಕುರಿತು ಒಂದು ಸ್ಟಾಲ್ ನಿರ್ಮಿಸಲಾಗಿತ್ತು. ರಾಷ್ಟ್ರದ ಭದ್ರತೆ ಮತ್ತು ಸುರಕ್ಷತೆಗಾಗಿ ಈ ಪಡೆಗಳು ಬಳಸುವ ಅತ್ಯುನ್ನತ ಶಸ್ತ್ರಾಸ್ತ್ರಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ದೇಶದ ಸಮರ್ಥ ಪಡೆಗಳ ಬಗ್ಗೆ ತಿಳಿದುಕೊಳ್ಳಲು, ರಾಷ್ಟ್ರದ ಸಾರ್ವಭೌಮತೆಯ ಬಗ್ಗೆ ಪ್ರತಿಯೊಬ್ಬರಲ್ಲೂ ಹೆಮ್ಮೆ ಮೂಡಿಸುವ ಉದ್ದೇಶದಿಂದ ಈ ಮಳಿಗೆಗಳನ್ನು ತೆರೆಯಲಾಗಿತ್ತು.

ಈ ಮಳಿಗೆಯಿಂದ ಭಾರತೀಯ ಸೇನೆಯಲ್ಲಿ ಶಕ್ತಿಯ ದ್ಯೋತಕವಾಗಿರುವ ಅತ್ಯಾಧುನಿಕ ಆಯುಧಗಳಾದ 7.62 ಎಂ.ಎಂ. ಸಿಂಗಲ್ ಅಸಾಲ್ಟ್ ರೈಫಲ್, 7.62ಎಂ.ಎಂ. ಎಲ್.ಎಮ್.ಜಿ, ಎಕೆ–47, ಸ್ನೈಪರ್ ಡಿಎಸ್ಆರ್, ಎಮ್.ಎಮ್.ಜಿ, ರಾಕೆಟ್ ಲಾಂಚರ್‌ಗಳನ್ನು ಮತ್ತದರ ವೈಶಿಷ್ಟ್ಯಗಳನ್ನು ಕಣ್ಣಾರೆ ನೋಡಲು ಮತ್ತು ತಿಳಿದುಕೊಳ್ಳಲು ಸಾಧ್ಯವಾಯಿತು. ದೇಶ ರಕ್ಷಣೆಯಲ್ಲಿ ಕಣ್ಗಾವಲು ವ್ಯವಸ್ಥೆ ಅತ್ಯಂತ ಮಹತ್ವ ಪಡೆದಿರುವುದರಿಂದ ಸೇನಾ ಪಡೆಗಳು ರಾತ್ರಿ ಮತ್ತು ಹಗಲು ಬಳಸುವ ಕಣ್ಗಾವಲು ಉಪಕರಣಗಳನ್ನು ಪ್ರದರ್ಶನಕ್ಕೆ ಇರಿಸಲಾಗಿತ್ತು. ಈ ವಲಯದಲ್ಲಿನ ನಾವೀನ್ಯತೆಗಳ ಬಗ್ಗೆ ಸೇನಾನಿಗಳು ಮಾಹಿತಿ ನೀಡಿದರು.

### ದೇಸಿ ಕ್ರೀಡೆಗಳು

ವಿವಿಧ ರಾಜ್ಯಗಳಿಂದ ಆಗಮಿಸಿದ ಯುವಜನರಿಗೆ ದೇಶಿ ಕ್ರೀಡೆಗಳನ್ನು ಪರಿಚಯಿಸುವ ಸಲುವಾಗಿ ಏರ್ಪಡಿಸಲಾಗಿದ್ದ ದೇಶಿ ಕ್ರೀಡೆಗಳ ಪ್ರದರ್ಶನವು ಜನ ಮನ ಸೆಳೆಯುವಲ್ಲಿ ಯಶಸ್ವಿಯಾಯಿತು.

ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದಿಂದ ಮಲ್ಲಕಂಬ, ತೆಲಂಗಾಣದ ಕಬ್ಬಡ್ಡಿ, ಮಣಿಪುರದ ಮುಕ್ನಾ ತಂಗ್ತಾ, ಅಸ್ಸಾಂ ರಾಜ್ಯದ ಬೊಮ್ಲೈನ್ಯ, ಆಂಧ್ರ ರಾಜ್ಯದಿಂದ ಕರ ಸಾನ ಹಾಗೂ ಕಟ್ಟಿ ಸಾಮ್, ತಮಿಳುನಾಡಿನ ಸಿಲಂಬನ್, ಕೇರಳದ ಕಳರಿಪಟ್ಟು, ಸೇರಿದಂತೆ ವಿವಿಧ ರಾಜ್ಯಗಳ ದೇಸಿ ಕ್ರೀಡೆ, ಲಗೋರಿ, ಚಿನ್ನಿದಾಂಡು, ಗೋಲಿ ಕ್ರೀಡೆಗಳ ಅನಾವರಣ ನಿಜಕ್ಕೂ ತುಂಬಾ ಅದ್ಭುತವಾಗಿ ಪ್ರದರ್ಶನಗೊಂಡವು.

### ಕಲೆ–ಸಾಂಸ್ಕೃತಿಕ ಕಾರ್ಯಕ್ರಮಗಳು

ರಾಷ್ಟ್ರೀಯ ಯುವ ಜನೋತ್ಸವದ ಅಂಗವಾಗಿ ಕೆಸಿಡಿ ಆವರಣದ ಸೃಜನಾ ರಂಗ ಮಂದಿರ "ಮಿನಿ ಭಾರತ"ದಂತೆ ಕಂಗೊಳಿಸಿತು. ಜಾನಪದ ನೃತ್ಯ ಸ್ಪರ್ಧೆಗಳು ನಡೆದ ಈ ರಂಗ ಮಂದಿರದಲ್ಲಿ ಪೈಪೋಟಿಗೆ ಬಿದ್ದವರಂತೆ ಕಲಾವಿದರು ತಮ್ಮ ರಾಜ್ಯ, ಪ್ರಾಂತ್ಯದ ಕಲೆ, ಸಂಸ್ಕೃತಿಯ ಸೊಗಡನ್ನು ಸಮರ್ಥ ಮತ್ತು ಪರಿಣಾಮಕಾರಿಯಾಗಿ ಬಿಂಬಿಸಿದರು.

ಒಂದೊಂದು ನೃತ್ಯ ಒಂದೊಂದು ಜನರ ಬದುಕಿನ ಕಥೆ ಹೇಳುತ್ತಿತ್ತು. ತಮ್ಮ ಜೀವನ ಪದ್ಧತಿಯನ್ನು ಪ್ರತಿಬಿಂಬಿಸುತ್ತಿತ್ತು. ನಮ್ಮ ದೇಶದ ಜಾನಪದದಲ್ಲಿ ಇಷ್ಟೊಂದು ವಿಭಿನ್ನತೆ ಇದೆಯೇ ಎಂದು ಅಚ್ಚರಿಪಡುವ ರೀತಿಯಲ್ಲಿ ಕಲಾವಿದರು ನೃತ್ಯ ಪ್ರದರ್ಶನ ನೀಡಿದರು. ಸೃಜನ ರಂಗಮಂದಿರ ಕಿಕ್ಕಿರಿದು ತುಂಬಿತ್ತು. ಕೂರಲು ಜಾಗವಿಲ್ಲದೇ ಕೆಲವರು ನೆಲದ ಮೇಲೆ ಕುಳಿತು ಕಲಾವಿದರನ್ನು ಚಪ್ಪಾಳೆ, ಶಿಳ್ಳೆಗಳ ಮೂಲಕ ಹುರಿದುಂಬಿಸಿದರು. ಇನ್ನೂ ಕೆಲವರು ಬಾಗಿಲಿನಿಂದ ಇಣುಕಿ ನೋಡಿ ಸಂತಸಪಟ್ಟರು. ಕೆಲವರಿಗೆ ನೃತ್ಯ ನೋಡಲು ಸಾಧ್ಯವಾಗದೇ ಬೇಸರದಿಂದ ನಿರ್ಗಮಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೇಕ್ಷಕರಿಂದ ಭಾರೀ ಮೆಚ್ಚುಗೆ ವ್ಯಕ್ತವಾಯಿತು.

### ಯುವ ಶೃಂಗ ಸಭೆ

ಇದೇ ಪ್ರಥಮ ಬಾರಿಗೆ ರಾಷ್ಟ್ರೀಯ ಯುವಜನೋತ್ಸವದಲ್ಲಿ 4 ದಿನಗಳ ಕಾಲ ಯುವ ಶೃಂಗಸಭೆ ಆಯೋಜಿಸಲಾಗಿತ್ತು. ವಿಶೇಷತೆ ಹೊಂದಿದ ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವ ಪ್ರಖ್ಯಾತ ಯುವ ಪ್ರತಿಭಾವಂತರೊಡನೆ ಪರಸ್ಪರ ಸಂವಾದ ನಡೆಸುವ ಅವಕಾಶ ಯುವಕರಿಗೆ ಲಭ್ಯವಾಯಿತು.




**ಮೊದಲ ಬಾರಿಗೆ ಯುವಶೃಂಗ ಸಭೆ**

ಯುವಜನೋತ್ಸವದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಯುವಶೃಂಗ ಸಭೆ ನಡೆದಿದೆ. ವಿವಿಧ ರಂಗಗಳ ಯುವಸಾಧಕರಿಂದಲೇ ಭಾಷಣ, ಚರ್ಚೆ ನಡೆದು ಯುವ ಜನರಿಗೆ ಸ್ಫೂರ್ತಿ ದೊರಕಿತು.



Downloaded From:www.kpscvaani.com




ಯುವ ಕಲಾವಿದರ ಶಿಬಿರವು ಶಿಲ್ಪಕಲೆ, ಪೇಂಟಿಂಗ್ ಮತ್ತು ಛಾಯಾಚಿತ್ರಗಾರಿಕೆ ವಿಷಯಗಳಲ್ಲಿ ಯುವ ಕೌಶಲ್ಯವನ್ನು ಪ್ರದರ್ಶಿಸಲು ವೇದಿಕೆಯೊಂದನ್ನು ಒದಗಿಸಲಾಯಿತು.

ಆಹಾರೋತ್ಸವವು ದೇಶದ ವಿವಿಧ ಭಾಗಗಳ ಭಕ್ಷ್ಯಗಳ ಪ್ರದರ್ಶನ ಮತ್ತು ಮಾರಾಟವನ್ನು ಹೊಂದಿರುತ್ತದೆ. ಆಹಾರ ಪದ್ಧತಿಗಳು ಮತ್ತು ಹಾಲಿ ಇರುವ ಆಹಾರ ಸಂಸ್ಕೃತಿಗಳಿಗೆ ಮೌಲ್ಯವನ್ನು ಮರುಸಂಯೋಜಿಸಲು ಇದು ಸಹಾಯ ಮಾಡಿತು.

ಯುವಕೃತಿಯಲ್ಲಿ ದೇಶದಾದ್ಯಂತದ ಯುವ ಕುಶಲಕರ್ಮಿಗಳ ಉತ್ಪನ್ನಗಳ ವೈಶಿಷ್ಟ್ಯತೆಯನ್ನು ತಿಳಿಸುವ ಕೈಯಿಂದ ಮಾಡಿದ ಉತ್ಪನ್ನಗಳು ಮತ್ತು ಕರಕುಶಲ ಉತ್ಪನ್ನಗಳಲ್ಲಿನ ಕೌಶಲ್ಯಗಳನ್ನು ಪ್ರದರ್ಶಿಸಲಾಯಿತು.

ಯುವಕೃತಿ ಮೇಳದಲ್ಲಿ 200 ಕ್ಕೂ ಹೆಚ್ಚು ಮಳಿಗೆಗಳ ಮೂಲಕ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಆಹಾರ, ಕಲೆ, ಉಡುಪು ವೈವಿಧ್ಯತೆಗಳನ್ನು ಒಂದೇ ಕಡೆ ಸವಿಯಲು ಅವಕಾಶ ದೊರಕಿಸಲಾಗಿತ್ತು.

ಮೂರು ದಿನಗಳ ಯುವ ಕಲಾವಿದರ ಶಿಬಿರದಲ್ಲಿ ಮೊಟ್ಟ ಮೊದಲ ಬಾರಿಗೆ ಸ್ಥಳೀಯ ಕಲಾವಿದರಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತು. ಮೂರು ದಿನಗಳ ಸ್ಪರ್ಧಾಳುಗಳಿಗೆ ಪ್ರತ್ಯೇಕ ದಿನಗಳ ಆಧಾರದ ಮೇಲೆ ಪ್ರಶಸ್ತಿ ವಿಜೇತರನ್ನು ಆಯ್ಕೆ ಮಾಡಲಾಗಿತ್ತು. ರಾಷ್ಟ್ರ ಮಟ್ಟದ ಸ್ಪರ್ಧೆಯ ವಿಭಾಗದಲ್ಲಿ ಪೆಂಟಿಂಗ್‌ನಲ್ಲಿ ಮಹಾರಾಷ್ಟ್ರದ ಮುಂಬೈನ ರೋಹಿತ್ ಅಶೋಕ ಅಥವಲೆ ಪ್ರಥಮ ಪ್ರಶಸ್ತಿ ಪಡೆದುಕೊಂಡರೆ ದ್ವಿತೀಯ ಪ್ರಶಸ್ತಿಯನ್ನು ಪಶ್ಚಿಮ ಬಂಗಾಳದ ರಘುನಂದನ ಪಾಲ್ ಹಾಗೂ ತೃತಿಯ ಪ್ರಶಸ್ತಿಯನ್ನು ಛತ್ತಿಸಗಡ ರೂಪೆಂದ್ರ ಸಾಹು ಪಡೆದುಕೊಂಡರು.

**ಯುವಜನೋತ್ಸವದಲ್ಲಿ ಕ್ಲೇ ಮಾಡೆಲಿಂಗ್ ಸ್ಪರ್ಧೆಗೆ ಮೇಕ್, ಇನ್ ಇಂಡಿಯಾ ಪರಿಕಲ್ಪನೆ ನೀಡಲಾಗಿದ್ದರೆ, ಛಾಯಾಗ್ರಾಹಕರಿಗೆ ಯುವಜನೋತ್ಸವ ಕಾರ್ಯಕ್ರಮಗಳನ್ನೇ ವಿಷಯವಾಗಿ ನೀಡಲಾಗಿತ್ತು.**

ಶಿಲ್ಪ ಕಲಾ ಸ್ಪರ್ಧೆಯಲ್ಲಿ ಒಡಿಸ್ಸಾದ ರಂಜೀತ ಪಾಂಡೆ ಪ್ರಥಮ ಪ್ರಶಸ್ತಿಯನ್ನು ಬಾಚಿಕೊಂಡರೆ ದ್ವಿತೀಯ ಪ್ರಶಸ್ತಿಯನ್ನು ಧಾರವಾಡದ ಲೋಹಿತ ಎಂ. ಹಿರೇಮಠ ಮತ್ತು ತೃತಿಯ ಪ್ರಶಸ್ತಿಯನ್ನು ನವ ದೆಹಲಿಯ ತನ್ಮಯ ಪಾಲ ಪಡೆದುಕೊಂಡರು. ಛಾಯಾಚಿತ್ರ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿಯನ್ನು ಬೆಂಗಳೂರಿನ ನಿತಿನ್ ನಿತ್ಯಾನಂದ ಪಡೆದುಕೊಂಡರೆ, ದ್ವಿತೀಯ ಪ್ರಶಸ್ತಿಯನ್ನು ಅಂಡಮಾನ್‌ನ ವೈ. ಸಾಯಿ ಕಿರಣ ಹಾಗೂ ತೃತಿಯ ಪ್ರಶಸ್ತಿಯನ್ನು ಕೇರಳದ ಹಪೀಲಾ ಪಡೆದುಕೊಂಡರು.

ಜಾನಪದ ನೃತ್ಯ ಸ್ಪರ್ಧೆಯಲ್ಲಿ ಪಂಜಾಬ್ ತಂಡ ಪ್ರಥಮ ಸ್ಥಾನ ಪಡೆದರೆ, ಗುಜರಾತ್ ತಂಡ ದ್ವಿತೀಯ, ಕೇರಳ ತೃತೀಯ ಬಹುಮಾನ ಗಳಿಸಿದವು. ಜಾನಪದ ಗಾಯನ ಸ್ಪರ್ಧೆಯಲ್ಲಿ ಉತ್ತರಪ್ರದೇಶ ಪ್ರಥಮ ಸ್ಥಾನ ಗಳಿಸಿತು. ಅಸ್ಸಾಂ ದ್ವಿತೀಯ, ಅತಿಥೇಯ ಕರ್ನಾಟಕ ತಂಡವು ತೃತೀಯ ಸ್ಥಾನ ಪಡೆದವು.

ಯುವಜನೋತ್ಸವವನ್ನು ಖುದ್ದಾಗಿ ಪ್ರತಿದಿನ ಸಹಸ್ರಾರು ಜನ ವೀಕ್ಷಿಸಿದ ಜೊತೆಗೆ ವೆಬ್‌ಸೈಟ್ ಮೂಲಕ 45 ಲಕ್ಷಕ್ಕೂ ಹೆಚ್ಚು ಜನರು ಉತ್ಸವವನ್ನು ವೀಕ್ಷಿಸಿದರು. ಯುವಜನೋತ್ಸವದ ಆಚರಣೆಯಿಂದ ಅವಳಿನಗರದಲ್ಲಿ ಪುಟ್ಟ ಭಾರತವೇ ನಿರ್ಮಾಣವಾಗಿತ್ತು. ಆ ಮೂಲಕ 26ನೇ ರಾಷ್ಟ್ರೀಯ ಯುವಜನೋತ್ಸವ ದೇಶದ ವಿವಿಧ ಪ್ರದೇಶಗಳ ವೈವಿಧ್ಯಮಯ ಕಲೆ ಮತ್ತು ಸಂಸ್ಕೃತಿಯನ್ನು ಅನಾವರಣಗೊಳಿಸಿತು. ■





Downloaded From:www.kpscvaani.com



## ಹಕ್ಕುಪತ್ರ ವಿತರಣೆಯಲ್ಲಿ

# ಐತಿಹಾಸಿಕ ದಾಖಲೆ ಬರೆದ ಕರ್ನಾಟಕ

**ನಮ್ಮ ರಾಜ್ಯ ಸರ್ಕಾರವು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ 52072 ಜನರಿಗೆ ಹಕ್ಕುಪತ್ರ ವಿತರಣೆ ಮಾಡುವ ಮೂಲಕ ಗಿನ್ನೆಸ್ ಪುಟ ಸೇರುವ ಜೊತೆಗೆ ಯಾದಗಿರಿಯಲ್ಲಿ ಜಲಕ್ರಾಂತಿಗೆ ಮುನ್ನುಡಿ ಬರೆದಿದೆ.**

ಬಿ. ಎ. ತುಕಾರಾಂ ರಾವ್

ರಾಷ್ಟ್ರಕೂಟರ ದೊರೆ ನೃಪತುಂಗ ಆಳಿದ ನಾಡು ಕಲಬುರ್ಗಿ ಜಿಲ್ಲೆ ಸೇಡಂ ತಾಲ್ಲೂಕಿನಲ್ಲಿ ಕಾಗಿಣಾ ನದಿ ತೀರದ ಮಳಖೇಡ ಗ್ರಾಮ ಜನವರಿ 19 ರಂದು ಗಿನ್ನೆಸ್ ವಿಶ್ವ ದಾಖಲೆಯ ಸಮಾರಂಭವೊಂದಕ್ಕೆ ಸಾಕ್ಷಿಯಾದರೆ, ಇದೇ ದಿನದಂದು ಯಾದಗಿರಿ ಜಿಲ್ಲೆಯ ಕೊಡೆಕಲ್‌ನಲ್ಲಿ 10,863 ಕೋಟಿ ರೂ. ಮೊತ್ತದ ವಿವಿಧ ನೀರಾವರಿ ಯೋಜನೆ ಕಾಮಗಾರಿಗಳಿಗೆ ಚಾಲನೆ ನೀಡುವ ಮೂಲಕ ಜಲಕ್ರಾಂತಿಗೆ ಮುನ್ನುಡಿ ಬರೆಯಲಾಯಿತು. ಇಂತಹ ಅಭೂತಪೂರ್ವ ಅಭಿವೃದ್ಧಿಯ ಹೊಸ ಶಕೆ ಆರಂಭಕ್ಕೆ ಚಾಲನೆ ದೊರೆತಿದ್ದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ.

ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದ ಜಿಲ್ಲೆಗಳ ತಾಂಡಾ ನಿವಾಸಿಗಳಿಗೆ ಏಕಕಾಲಕ್ಕೆ 52072 ಜನರಿಗೆ ಹಕ್ಕುಪತ್ರ ವಿತರಣೆ ಆಗಿರುವ ಕಾರ್ಯಕ್ರಮ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ವಿಶ್ವ ದಾಖಲೆಗೆ ಸೇರ್ಪಡೆ ಆಗುವ ಮೂಲಕ ಇಡೀ ದೇಶದ ಗಮನ ಸೆಳೆದಿದೆ. ಯಾದಗಿರಿ ಜಿಲ್ಲೆಯ ಕೋಡೆಕಲ್ ಗ್ರಾಮದಲ್ಲಿ 4,669 ಕೋಟಿ ರೂ. ವೆಚ್ಚದಲ್ಲಿ ನಾರಾಯಣಪುರ ಎಡದಂಡೆ ಕಾಲುವೆಯ ವಿಸ್ತರಣೆ, ನವೀಕರಣ ಹಾಗೂ ಆಧುನೀಕರಣ ಯೋಜನೆ, ಜಲಜೀವನ್ ಮಿಷನ್ ಯೋಜನೆಯಡಿ 2,004 ಕೋಟಿ ರೂ. ವೆಚ್ಚದಲ್ಲಿ 710 ಗ್ರಾಮೀಣ ಹಾಗೂ 3 ಪಟ್ಟಣಗಳಿಗೆ ನಾರಾಯಣಪುರ ಅಣೆಕಟ್ಟೆಯಿಂದ ಒಟ್ಟು 15.84



Downloaded From:www.kpscvaani.com

ಲಕ್ಷ ಜನರಿಗೆ ಮನೆ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆ ಕಾಮಗಾರಿಗಳಿಗೆ ಚಾಲನೆ ದೊರೆತಿದ್ದು ನಿಜಕ್ಕೂ ಜಲಕ್ರಾಂತಿಗೆ ಮುನ್ನುಡಿ ಬರೆದಂತಾಗಿದೆ.

**ಕಂದಾಯ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಅಭಯ:**

ಕಂದಾಯ ಗ್ರಾಮಗಳಾಗಿ ಪರಿವರ್ತನೆಗೊಂಡ ತಾಂಡಾ, ಹಟ್ಟಿ, ಹಾಡಿ ಮುಂತಾದ ಜನವಸತಿ ಪ್ರದೇಶಗಳನ್ನು ಸರ್ಕಾರದ ಯೋಜನೆಗಳಡಿ ಗುಡಿಸಲು ಮುಕ್ತ ಗ್ರಾಮಗಳನ್ನಾಗಿ ನಿರ್ಮಿಸಿ, ಇಲ್ಲಿನ ಜನರಿಗೆ ಪಕ್ಕಾ ಮನೆ, ಶೌಚಾಲಯ, ವಿದ್ಯುತ್, ನಲ್ಲಿ ನೀರು, ಅಡುಗೆ ಅನಿಲ ಸಂಪರ್ಕ ಸೇರಿದಂತೆ ಎಲ್ಲ ಮೂಲಭೂತ ಸೌಕರ್ಯಗಳನ್ನು ತ್ವರಿತವಾಗಿ ಒದಗಿಸಲಾಗುವುದು ಎಂದು ಪ್ರಧಾನಮಂತ್ರಿ ಅವರು ಇದೇ ಸಂದರ್ಭದಲ್ಲಿ ಅಭಯ ನೀಡಿದರು. ಲಂಬಾಣಿ ಭಾಷೆಯಲ್ಲಿಯೇ ತಮ್ಮ ಭಾಷಣ ಪ್ರಾರಂಭಿಸಿದ ಅವರು, "ಕರ್ನಾಟಕ ತಾಂಡೇರ್ ಮಾರ್ ಗೋರ್ ಬಂಜಾರ ಭಾಯಿ-ಬಿಯಾ, ನಾಯ್ಕ, ಕಾರಬಾರಿ, ಹಾತ್ ಜೋಡೇನ್ ರಾಮ್ ರಾಮ್, ಜೈ ಸೇವಾ ಲಾಲ್ ಮಹಾರಾಜ್" ಎನ್ನುತ್ತಿದ್ದಂತೆಯೇ ಸಮಾರಂಭದಲ್ಲಿ ನೆರೆದಿದ್ದ ಲಂಬಾಣಿ ಸಮುದಾಯ ಚಪ್ಪಾಳೆ ತಟ್ಟಿ ಸಂಭ್ರಮಿಸಿದಲ್ಲದೆ ಮೋದಿ ಮೋದಿ ಎಂದು ಕೂಗಿದರು. ಬಳಿಕ ಕನ್ನಡದಲ್ಲಿ ಮಾತನಾಡಿದ ಪ್ರಧಾನಿಗಳು, ಕಲಬುರಗಿಯ ಶ್ರೀ ಶರಣಬಸವೇಶ್ವರ ಮತ್ತು ಗಾಣಗಾಪೂರದ ಗುರು ದತ್ತಾತ್ರೇಯ ಅವರಿಗೆ ವಂದನೆ, ಪ್ರಖ್ಯಾತ ರಾಷ್ಟ್ರಕೂಟ ಸಾಮ್ರಾಜ್ಯದ ರಾಜಧಾನಿಗೆ ಮತ್ತು ಕನ್ನಡ ನಾಡಿನ ಸಮಸ್ತ ಜನರಿಗೆ ನಮಸ್ಕಾರಗಳು ಎಂಬುದಾಗಿ ಹೇಳುತ್ತಿದ್ದಂತೆಯೇ ಜನರ ಚಪ್ಪಾಳೆ, ಹರ್ಷೋದ್ಗಾರ ಮುಗಿಲು ಮುಟ್ಟಿತು.

**ಅನುಭವ ಮಂಟಪವೇ ನಮಗೆ ದಾರಿದೀಪ:**

ಬಸವಾದಿ ಶರಣರು ಅನುಭವ ಮಂಟಪ ಮೂಲಕ ಬಹು ಹಿಂದೆಯೇ ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಮಾದರಿಯನ್ನು ಜಗತ್ತಿಗೆ ಪರಿಚಯಿಸಿದ್ದರು. ಇದೇ ಸಿದ್ಧಾಂತದೊಂದಿಗೆ ನಾವು ಸಬ್ ಕಾ ಸಾತ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಹಾಗೂ ಸಬ್ ಕಾ ಪ್ರಯಾಸ್ ತತ್ವವನ್ನು ಅನುಸರಿಸುತ್ತಿದ್ದೇವೆ.

ಬಂಜಾರ ಸಮುದಾಯ ಇದೀಗ ಗೌರವ, ಅಭಿಮಾನದಿಂದ ಬದುಕುವ ಕಾಲ ಬಂದಿದೆ. ಸಮುದಾಯದ ಯುವ ಪ್ರತಿಭೆಗಳಿಗೆ ಉಚಿತವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಚಿಂಗ್, ಕೌಶಲ್ಯ ತರಬೇತಿ, ಉದ್ಯೋಗ ದೊರಕಿಸಲು ಶ್ರಮಿಸಲಾಗುವುದು. ಬಂಜಾರ ಸಮುದಾಯದವರು ಇನ್ನು ನಿಶ್ಚಿಂತೆಯಿಂದ ತಮ್ಮ ಬದುಕು ಕಟ್ಟಿಕೊಳ್ಳಬೇಕು. ಸಂಕಷ್ಟಗಳನ್ನು ಪರಿಹರಿಸಲು ತಮ್ಮ ಮಗನೊಬ್ಬ ದಿಲ್ಲಿಯಲ್ಲಿ ಕುಳಿತುಕೊಂಡಿದ್ದಾನೆ ಎಂದು ಭಾವನಾತ್ಮಕವಾಗಿ ತಮ್ಮ ಆಶಯ ವ್ಯಕ್ತಪಡಿಸಿದರು.

**ಸಾಮಾಜಿಕ ಪರಿವರ್ತಕ:**

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮಾರಂಭದಲ್ಲಿ ಮಾತನಾಡಿ, ಕರ್ನಾಟಕ ಇತಿಹಾಸದಲ್ಲಿ ಸಾಮಾಜಿಕ ಪರಿವರ್ತನೆಯ ಅತಿದೊಡ್ಡ ಕಾರ್ಯಕ್ರಮ ಇದಾಗಿದೆ. ತಾಂಡಾ, ಹಾಡಿ, ಹಟ್ಟಿ ಮುಂತಾದ ಜನವಸತಿ ಪ್ರದೇಶಗಳ ಜನರ ಜಾಗ ನಿಮ್ಮದಾಗಿರಲಿಲ್ಲ. 50 ವರ್ಷಗಳ ಬೇಡಿಕೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಪ್ರೇರಣೆಯಿಂದಾಗಿ ನಾವು ಈಡೇರಿಸಿದ್ದೇವೆ. ಹೀಗಾಗಿ ನರೇಂದ್ರ ಮೋದಿ ಅವರನ್ನು "ಸಾಮಾಜಿಕ ಪರಿವರ್ತಕ" ಎಂದು ಬಣ್ಣಿಸಿದರು. ನಮ್ಮ ಸರ್ಕಾರ ಸಾಮಾಜಿಕ ಭದ್ರತೆ ಕೊಡುವ ಮೂಲಕ ಇಂತಹ ಶೋಷಿತ ಸಮುದಾಯಕ್ಕೆ ಸಾಮಾಜಿಕ ಪರಿವರ್ತನೆ ಮಾಡುತ್ತಿದ್ದೇವೆ. ಪ್ರಧಾನಮಂತ್ರಿಗಳಿಂದ ಇಂದು ಹಕ್ಕುಪತ್ರ ನೀಡಿದ್ದು, ಈ ಸಮಾಜಕ್ಕೆ ದೊಡ್ಡ ಗೌರವ ಕೊಟ್ಟಂತೆ ಆಗಿದೆ. ನಮ್ಮ ಸರ್ಕಾರ ಸಾಮಾಜಿಕ ನ್ಯಾಯ, ಸಾಮಾಜಿಕ ಭದ್ರತೆ ಮತ್ತು ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದೆ ಎಂದರು. ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಲಾಗಿರುವ ಗ್ರಾಮಗಳಲ್ಲಿನ ಜನರಿಗೆ ಈಗ ಹಕ್ಕುಪತ್ರ ನೀಡಲಾಗುತ್ತಿದ್ದು, ಇವರಿಗೆ ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಅವರ ಆಸ್ತಿಯನ್ನು ಉಚಿತವಾಗಿ ನೋಂದಣಿ ಮಾಡಿಸಿ, ಅವರಿಗೆ ದಾಖಲೆ ನೀಡುವಂತೆ ಮಾಡಲಾಗುವುದು ಎಂದರು.

**ಗಿನ್ನೆಸ್ ಪುಟ ಸೇರಿದ ಹಕ್ಕುಪತ್ರ ವಿತರಣೆ:**

ರಾಜ್ಯದ ಲಂಬಾಣಿ ತಾಂಡಾ, ಹಟ್ಟಿ, ಹಾಡಿ, ಗೊಲ್ಲರಹಟ್ಟಿ, ವಡ್ಡರಹಟ್ಟಿ ಸೇರಿದಂತೆ ಅಲೆಮಾರಿ ಜನಾಂಗದವರಿಗೆ ಖಾಯಂ ಸೂರು ಒದಗಿಸುವ ಉದ್ದೇಶದಿಂದ, ಅವರ ಸಂಕಷ್ಟ ನಿವಾರಿಸಿ, ಅವರಿಗೆ ಶಾಶ್ವತ ನೆಲೆ ಕಲ್ಪಿಸಲು ರಾಜ್ಯ ಸರ್ಕಾರ ಕ್ರಾಂತಿಕಾರಕ ಹೆಜ್ಜೆಯನ್ನಿರಿಸಿದ್ದು, ದೇಶದ ಇತಿಹಾಸದಲ್ಲಿಯೇ ಐತಿಹಾಸಿಕವಾಗಿ ಲಂಬಾಣಿ ತಾಂಡಾ, ಹಟ್ಟಿ, ಹಾಡಿ, ಗೊಲ್ಲರಹಟ್ಟಿ, ವಡ್ಡರ ಹಟ್ಟಿಯಲ್ಲಿರುವ ತಾಂಡಾ ಜನರಿಗೆ ಖಾಯಂ ಸೂರು ಒದಗಿಸುವ ದೃಷ್ಟಿಯಿಂದ ಕಲಬುರಗಿ-27,267, ಬೀದರ-7,500, ರಾಯಚೂರು-3,500, ಯಾದಗಿರಿ-11,200 ಹಾಗೂ ವಿಜಯಪುರ-2,605 ಸೇರಿದಂತೆ





Downloaded From:www.kpscvaani.com

ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆಗೊಂಡ ಐದು ಜಿಲ್ಲೆಗಳ 342 ಕಂದಾಯ ಗ್ರಾಮಗಳ 52,072 ತಾಂಡಾ ನಿವಾಸಿಗಳಿಗೆ ಹಕ್ಕು ಪತ್ರಗಳನ್ನು ಒಂದೇ ದಿನ, ಒಂದೇ ವೇದಿಕೆ ಸಮಾರಂಭದಲ್ಲಿ ವಿತರಿಸಿ ಗಿನ್ನೆಸ್ ದಾಖಲೆ ನಿರ್ಮಿಸಿದಕ್ಕಾಗಿ, ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ನ ಕರ್ನಾಟಕದ ಉಪಾಧ್ಯಕ್ಷೆ ವಸಂತ ಕವಿತಾ ಅವರು ಕಂದಾಯ ಸಚಿವ ಆರ್.ಅಶೋಕ್ ಹಾಗೂ ಕಲಬುರಗಿ ಜಿಲ್ಲಾಧಿಕಾರಿ ಯಶವಂತ ವಿ. ಗುರುಕರ್ ಅವರಿಗೆ ಗಿನ್ನೆಸ್ ದಾಖಲೆಯ ಪ್ರೊವಿಷನಲ್ ಪ್ರಮಾಣಪತ್ರವನ್ನು ಇದೇ ವೇದಿಕೆಯಲ್ಲಿಯೇ ವಿತರಿಸಿದರು.

**ಹಾಡುತ್ತಾ ಕುಣಿಯುತ್ತಾ ಬಂದ ಲಕ್ಷಾಂತರ ಜನ:**

ತಾಂಡಾ ನಿವಾಸಿಗಳಿಗೆ ಹಕ್ಕು ಪತ್ರ ವಿತರಣೆ ಕಾರ್ಯಕ್ರಮಕ್ಕೆ ಅಮೋಘವರ್ಷ ನೃಪತುಂಗನ ನಾಡು ಮಳಖೇಡಕ್ಕೆ ಜನಸಾಗರವೇ ಹರಿದು ಬಂತು. ಸುಡುವ ಬಿಸಿಲನ್ನೂ ಲೆಕ್ಕಿಸದೆ, ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಕಣ್ಣಾರೆ ಕಂಡು, ಅವರ ಮಾತುಗಳನ್ನು ಆಲಿಸಲು ಸಾಗರೋಪಾದಿಯಲ್ಲಿ ಜನ ಮಳಖೇಡನತ್ತ ಪ್ರಯಾಣ ಬೆಳೆಸಿದ್ದರು. ಈ ಐತಿಹಾಸಿಕ ಸಮಾರಂಭದಲ್ಲಿ ಪಾಲ್ಗೊಳ್ಳಲು ವಿವಿಧ ಜಿಲ್ಲೆಗಳಿಂದ ಆಗಮಿಸುತ್ತಿದ್ದ ಲಂಬಾಣಿ ಸಮುದಾಯದ ಜನ ತಮ್ಮ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ, ತಮ್ಮದೇ ಶೈಲಿಯ ಹಾಡುಗಳನ್ನು ಹಾಡುತ್ತ, ವಾದ್ಯಮೇಳಗಳೊಂದಿಗೆ, ನೃತ್ಯ ಮಾಡುತ್ತಾ, ಹಬ್ಬದ ವಾತಾವರಣದೊಂದಿಗೆ ಆಗಮಿಸಿದರೆ, ಹುಡುಗರ ಕೈಯಲ್ಲಿ ಸೇವಾಲಾಲ ಮಹಾರಾಜರ ಮತ್ತು ಜೈ ಭವಾನಿ ಮಾತೆಯ ಧ್ವಜ ಹಿಡಿದುಕೊಂಡು ತಮ್ಮ ಆರಾಧ್ಯದೈವ ಸೇವಾಲಾಲ ಮಹಾರಾಜರನ್ನು ಸ್ಮರಿಸುತ್ತಾ ವೇದಿಕೆ ಕಡೆ ಹೆಜ್ಜೆ ಹಾಕಿದರು. ಇದರಿಂದ ಮಳಖೇಡ ಗ್ರಾಮದಲ್ಲಿ ಸಂಪೂರ್ಣ ಹಬ್ಬದ ವಾತಾವರಣ ಮನೆ ಮಾಡಿತ್ತು.

**ಪುಳಕಿತಳಾದ ರತ್ನಾಬಾಯಿ ಜಾಧವ:**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ಹಕ್ಕು ಪತ್ರ ಸ್ವೀಕರಿಸಿದ ಕಲಬುರಗಿ ಜಿಲ್ಲೆಯ 5 ಜನ ಫಲಾನುಭವಿಗಳು ತಮ್ಮ ಸಂತಸವನ್ನು ಹಂಚಿಕೊಂಡರು. ಸೇಡಂ ತಾಲೂಕಿನ ಉಡಗಿ ತಾಂಡಾದ ರತ್ನಾಬಾಯಿ ಜಾಧವ ಅವರು ಮೋದಿ ಅವರೊಂದಿಗೆ ಕುಶಲೋಪರಿ ಮಾತಾಡಿದ್ದು ಸಂತಸ ಉಂಟು ಮಾಡಿದೆ. ತಮಗೆ ಹಕ್ಕು ಪತ್ರ ನೀಡಿದಕ್ಕೆ ಸಂತಸದಿಂದ ಅವರನ್ನು ಆಶೀರ್ವದಿಸಿದೆ. ಇಂತಹ ಸೌಭಾಗ್ಯ ನನಗೆ ದೊರೆತಿದ್ದು ಪುಣ್ಯ ಎಂದು ಹೇಳುವಾಗ ಆಕೆಯ ಕಣ್ಣಂಚಿನಲ್ಲಿ ಮಿಂಚು ಹರಿದಿತ್ತು. ಡೊಂಗ್ರು ನಾಯಕ್ ತಾಂಡಾದ ಈಶ್ವರ ನಾಯಕನ ಪತ್ನಿ ಮಾತನಾಡಿ, ಇಷ್ಟು ದಿನ ನಮಗೆ ಖಾಯಂ ನೆಲೆ ಇರಲಿಲ್ಲ, ಪ್ರಧಾನಮಂತ್ರಿಗಳ ಕೈಯಿಂದಲೇ ಹಕ್ಕುಪತ್ರ ಪಡೆದಿದ್ದು ಸಂತೋಷ ತಂದಿದೆ, ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವೆ ಎಂದರು. ಫತ್ರು ನಾಯಕ್ ನಗರ ತಾಂಡಾದ ಇಮ್ಲಾಬಾಯಿ ಬನ್ಸಿಲಾಲ್ ಮಾತನಾಡಿ, ಈ ಹಿಂದೆ ಜಮೀನಿನ ಹಕ್ಕು ಇರಲಿಲ್ಲ. ಈಗ ಸರ್ಕಾರದವರು ನಮಗೆ ಹಕ್ಕು ಕೊಟ್ಟಿದ್ದಾರೆ. ಬಂಜಾರಾ ಸಮುದಾಯಕ್ಕೆ ತುಂಬಾ ಅನುಕೂಲವಾಗಿದೆ ಎಂದರೆ, ಅಡಕಿ ಮೋಕ ನಗರ ತಾಂಡಾದ ನೂರ್ ವಿಠ್ಠಲ್ ರಾಠೋಡ ಮತ್ತು ಚಾಂದಿಬಾಯಿ ದಂಪತಿ ಅವರು ಪತ್ರ ನೀಡಿದಕ್ಕೆ ಮೋದಿ ಹಾಗೂ ಬೊಮ್ಮಾಯಿ ಸರ್ಕಾರಕ್ಕೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು. ಧರ್ಮಾಪುರ ಗ್ರಾಮದ ಮೋತಿಮೋಕ ತಾಂಡಾದ ನಿವಾಸಿ ಪಾರ್ವತಿಬಾಯಿ ತುಕಾರಾಮ, ಬಹು ವರ್ಷಗಳ ಬಳಿಕ ಸೂರಿನ ಅಧಿಕಾರ ನಮಗೆ ಸಿಕ್ಕಂತಾಗಿದೆ ಎಂದರು.



ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಕೇಂದ್ರ ರಾಸಾಯನಿಕ, ರಸಗೊಬ್ಬರ ಹಾಗೂ ಹೊಸ ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವರಾದ ಭಗವಂತ ಖೂಬಾ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಾದ ಡಾ.ಮುರುಗೇಶ ಆರ್. ನಿರಾಣಿ, ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ದತ್ತಾತ್ರೇಯ ಪಾಟೀಲ ರೇವೂರ, ಶಾಸಕರಾದ ಸುಭಾಷ ಗುತ್ತೇದಾರ, ಬಸವರಾಜ ಮತ್ತಿಮೂಡ, ಡಾ.ಅವಿನಾಶ ಜಾಧವ ಮುಂತಾದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

**ಯಾದಗಿರಿಯಲ್ಲಿ ಜಲಕ್ರಾಂತಿಗೆ ಮುನ್ನುಡಿ:**

ಅಂದಾಜು 4,669 ಕೋಟಿ ರೂ. ವೆಚ್ಚದಲ್ಲಿ ನಾರಾಯಣಪುರ ಎಡದಂಡೆ ಕಾಲುವೆಯ ವಿಸ್ತರಣೆ, ನವೀಕರಣ ಹಾಗೂ ಆಧುನೀಕರಣ ಯೋಜನೆ, ಜಲಜೀವನ್ ಮಿಷನ್ ಯೋಜನೆಯಡಿ 2,004 ಕೋಟಿ ರೂ. ವೆಚ್ಚದಲ್ಲಿ 710 ಗ್ರಾಮೀಣ ಹಾಗೂ 3 ಪಟ್ಟಣಗಳಿಗೆ ನಾರಾಯಣಪುರ ಅಣೆಕಟ್ಟೆಯಿಂದ ಒಟ್ಟು 15.84 ಲಕ್ಷ ಜನರಿಗೆ ಮನೆ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆಗಳಿಗೆ ಯಾದಗಿರಿ ಜಿಲ್ಲೆಯ ಕೋಡೆಕಲ್ ಗ್ರಾಮದಲ್ಲಿ ಅದೇ ದಿನದಂದು ಶಂಕುಸ್ಥಾಪನೆ ನೆರವೇರಿಸುವ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಜಲಕ್ರಾಂತಿಗೆ ಮುನ್ನುಡಿ ಬರೆದರು.

ನಾರಾಯಣಪುರ ಎಡದಂಡೆ ಕಾಲುವೆ ಹತ್ತು ಸಾವಿರ ಕ್ಯೂಸೆಕ್ ನೀರು ಹರಿವಿನ ಸಾಮರ್ಥ್ಯ ಹೊಂದಿದ್ದು, ಬರಪೀಡಿತ ವಿಜಯಪುರ, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ 4.5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಹುಣಸಗಿ, ಶಹಾಪುರ, ಮುಡಬಾಳ, ಜೇವರ್ಗಿ, ಇಂಡಿ ಶಾಖಾ ಕಾಲುವೆಗಳು ಹಾಗೂ ಇಂಡಿ ಏತ ನೀರಾವತಿ ಕಾಲುವೆಗಳ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಇದೀಗ ನಾರಣಪುರ ಎಡದಂಡೆ ಮುಖ್ಯ



Downloaded From:www.kpscvaani.com

ಕಾಲುವೆ ಸೇರಿದಂತೆ ಎಲ್ಲ ಶಾಖಾ ಕಾಲುವೆಗಳ ಪುನಶ್ಚೇತನ ಕಾಮಗಾರಿಗಳು, ಅಲ್ಲದೆ ಸ್ಕಾಡಾ (ಸೂಪರ್‌ವೈಸರಿ ಕಂಟ್ರೋಲ್ ಅಂಡ್ ಡೇಟಾ ಅಕ್ಯುಸಿಷನ್) ಆಧಾರಿತ ಸ್ವಯಂಚಾಲಿತ ಗೇಟುಗಳ ಅಳವಡಿಕೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದು, ಇದರಿಂದಾಗಿ ಕಾಲುವೆ ಜಾಲದಡಿ ಬರುವ ರೈತರಿಗೆ ಸಮರ್ಪಕವಾಗಿ ನೀರು ಹಂಚಿಕೆ ಮಾಡಲಾಗುತ್ತದೆ, ಅಲ್ಲದೆ ಕೊನೆ ಭಾಗದ ರೈತರ ಜಮೀನುಗಳಿಗೂ ನೀರು ತಲುಪಲಿದೆ. ನೀರು ಪೋಲಾಗುವ ಪ್ರಮಾಣ ಕಡಿಮೆಯಾಗಲಿದ್ದು, ಸುಮಾರು 3 ಲಕ್ಷಕ್ಕೂ ಹೆಚ್ಚಿನ ರೈತರಿಗೆ ಅನುಕೂಲ ಕಲ್ಪಿಸಿಕೊಟ್ಟಂತಾಗಲಿದೆ. ಜಲಜೀವನ್ ಮಿಷನ್ ಯೋಜನೆಯಡಿ 2004 ಕೋಟಿ ರೂ. ವೆಚ್ಚದಲ್ಲಿ ಯಾದಗಿರಿ ಜಿಲ್ಲೆಯ ಗ್ರಾಮೀಣ ಭಾಗದ 710 ಜನವಸತಿ ಪ್ರದೇಶಗಳ 2.32 ಲಕ್ಷ ಮನೆಗಳು ಹಾಗೂ ಕಕ್ಕೇರಾ, ಕೆಂಭಾವಿ ಮತ್ತು ಹುಣಸಗಿ ಸೇರಿದಂತೆ 03 ಪಟ್ಟಣಗಳಿಗೆ ನಾರಾಯಣಪುರ ಅಣೆಕಟ್ಟೆಯಿಂದ ಶುದ್ಧ ಕುಡಿಯುವ ನೀರು ಸರಬರಾಜು ಕಾಮಗಾರಿಗೆ ಪ್ರಧಾನಮತ್ರಿಗಳು ಚಾಲನೆ ನೀಡಿದರು.

**ಸೂರತ್–ಚೆನ್ನೈ ಗ್ರೀನ್ ಫೀಲ್ಡ್ ಹೆದ್ದಾರಿಗೆ ಶಂಕುಸ್ಥಾಪನೆ:**

4,109 ಕೋಟಿ ರೂ. ವೆಚ್ಚದಲ್ಲಿ ಪ್ರವೇಶ ನಿಯಂತ್ರಿತ ಸೂರತ್–ಚೆನ್ನೈ ಗ್ರೀನ್ ಫೀಲ್ಡ್ ಹೆದ್ದಾರಿ ಕಾಮಗಾರಿಗೆ ಚಾಲನೆ ನೀಡುವ ಮೂಲಕ ಪ್ರಧಾನಮಂತ್ರಿಗಳು ಅಭಿವೃದ್ಧಿಯ ಪಥಕ್ಕೂ ವೇಗ ನೀಡಿದರು. ಯಾದಗಿರಿ ಜಿಲ್ಲೆಯಲ್ಲಿ ಹಾದುಹೋಗುವ 65.50 ಕಿ.ಮೀ. ಮಾರ್ಗಕ್ಕೆ 1,999.24 ಕೋಟಿ ರೂ. ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಹಾದುಹೋಗುವ ಒಟ್ಟು 71 ಕಿ.ಮೀ ಮಾರ್ಗಕ್ಕೆ 2,110.52 ಕೋಟಿ ರೂ. ಮೊತ್ತದ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದರು. ಮಹಾರಾಷ್ಟ್ರದ ಗಡಿಯಲ್ಲಿರುವ ಅಫಜಲಪೂರ ತಾಲೂಕಿನ ಬಡದಾಳ ಗ್ರಾಮದಿಂದ ಆರಂಭವಾಗುವ ಆರು ಪಥದ ಈ ರಾಷ್ಟ್ರೀಯ ಹೆದ್ದಾರಿ ಗಾಣಗಾಪೂರ–ಜೇವರ್ಗಿ–ಮರಡಗಿ ಎಸ್.ಆಂದೋಲಾ ಮಾರ್ಗವಾಗಿ ಯಾದಗಿರಿ ಜಿಲ್ಲೆಯ ಅಣಬಿಗೆ ಸಾಗಲಿದೆ. ಈ ಯೋಜನೆ ಸಾಕಾರಗೊಂಡಲ್ಲಿ ಸೂರತ್–ಚೆನ್ನೈ ನಡುವೆ 330 ಕಿ.ಮೀ. ಪ್ರಯಾಣದ ಅಂತರ ಕಡಿಮೆಯಾಗುವುದರ




ಜೊತೆಗೆ 8 ಗಂಟೆ ಪ್ರಯಾಣದ ಅವಧಿ ಸಹ ಕಡಿಮೆಯಾಗಲಿದೆ. ಆರು ಪಥದ ಈ ಹೆದ್ದಾರಿ ನಿರ್ಮಾಣದಿಂದ ಪ್ರದೇಶದ ಜಿಲ್ಲೆಗಳ ಕೃಷಿ, ಕೈಗಾರಿಕೆ ಹಾಗೂ ಆರ್ಥಿಕತೆಗೆ ಉತ್ತೇಜನ ದೊರೆಯಲಿದೆ ಎಂದು ಪ್ರಧಾನಮಂತ್ರಿಗಳು ಹೇಳಿದರು.

**ವಿಕಸಿತ ಭಾರತ ನಿರ್ಮಾಣ:**

ಕೊಡೇಕಲ್ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಪ್ರಧಾನಮಂತ್ರಿ ಅವರು, ಒಂದು ಜಿಲ್ಲೆ ಅಥವಾ ಪ್ರದೇಶ ಹಿಂದುಳಿದರೆ ವಿಕಸಿತ ಭಾರತವಾಗಲು ಸಾಧ್ಯವಿಲ್ಲ, ಈ ನಿಟ್ಟಿನಲ್ಲಿ ಸಮಗ್ರ ಅಭಿವೃದ್ಧಿಗೆ ನಮ್ಮ ಸರಕಾರ ತೊಡಗಿಸಿಕೊಂಡಿದೆ. ಮುಂದಿನ 25 ವರ್ಷಗಳ ಕಾಲ ನಮಗೆ ಅಮೃತಕಾಲ. ಈ ಅವಧಿಯಲ್ಲಿ ಹೊಸ ಸಂಕಲ್ಪದೊಂದಿಗೆ ಮುನ್ನಡೆಯುವುದರ ಮೂಲಕ ವಿಕಸಿತ ಭಾರತ ನಿರ್ಮಾಣ ಮಾಡಲಾಗುವುದು. ಯಾದಗಿರಿ ಜಿಲ್ಲೆಯಲ್ಲಿ ವಿಕಾಸದ ಆಕಾಂಕ್ಷೆ ಹೊಂದಿದ್ದೇವೆ ಎಂದು ತಮ್ಮ ಮಾತುಗಳಲ್ಲಿ ಸ್ಪಷ್ಟಪಡಿಸಿದ ಅವರು 100 ಮಹತ್ವಾಕಾಂಕ್ಷೆ ಜಿಲ್ಲೆಗಳ ಸುಧಾರಣೆಯ ಪಟ್ಟಿಯಲ್ಲಿ ಯಾದಗಿರಿ ಟಾಪ್ 10 ರಲ್ಲಿದೆ. ಈ ಸಾಧನೆಗೆ ಕಾರಣೀಕರ್ತರಾದ ರಾಜ್ಯ ಸರ್ಕಾರದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಕಾರ್ಯ ಶ್ಲಾಘನೀಯ. ಭಾರತ ಅಭಿವೃದ್ಧಿ ಹೊಂದಲು ಗಡಿ ಭದ್ರತೆ, ಕರಾವಳಿ ಭದ್ರತೆ ಜತೆಗೆ ನೀರಿನ ಭದ್ರತೆಯೂ ಮುಖ್ಯ ಎಂದರು. ಡಬಲ್ ಇಂಜಿನ್ ಸರ್ಕಾರ ಜನರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದೆ. ಡಬಲ್ ಎಂಜಿನ್ ಸರಕಾರದಿಂದಾದ ಜಲಜೀವನ್ ಮಿಶನ್, ಪಿಎಂ ಕಿಸಾನ್, ಮುದ್ರಾ, ರೈತ ವಿದ್ಯಾನಿಧಿ ಸೇರಿದಂತೆ ವಿವಿಧ ಯೋಜನೆಗಳ ಪ್ರಯೋಜನಗಳ ಬಗ್ಗೆ ತಿಳಿಸಿದರು.

ನಾರಾಯಣಪುರ ಎಡದಂಡೆ ಕಾಲುವೆ ಆಧುನೀಕರಣದಿಂದ ಯಾದಗಿರಿ, ಕಲಬುರಗಿ, ವಿಜಯಪುರದ ರೈತರಿಗೆ ನೇರ ಲಾಭ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ ಜನರಿಗೆ ಉಪಯೋಗವಾಗಲಿದೆ. ಸೂರತ್– ಚೆನ್ನೈ ಎಕ್ಸ್‌ಪ್ರೆಸ್ ವೇ ಗೆ ಅಡಿಗಲ್ಲು ಹಾಕುವ ಮೂಲಕ ರಸ್ತೆ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಇದರಿಂದ ಯಾದಗಿರಿ, ರಾಯಚೂರು ಜನರಿಗೆ ಉದ್ಯೋಗ ಸಿಗಲಿದೆ. ನೀರಾವರಿ ಆಧುನೀಕರಣದಿಂದ ಯಾದಗಿರಿ, ಕಲಬುರಗಿ ಜಿಲ್ಲೆಗಳ ಲಕ್ಷ ಲಕ್ಷ ಜನರಿಗೆ ಲಾಭವಾಗಲಿದೆ. ಯಾವುದೇ ಜಿಲ್ಲೆ ಅಭಿವೃದ್ಧಿಯಿಂದ ಹಿಂದೆ ಉಳಿದರೆ ದೇಶದ ವಿಕಾಸ ಸಾಧ್ಯವಿಲ್ಲ. ನಾವು ವಿಕಾಸದ ಆಕಾಂಕ್ಷೆಗೆ ಪ್ರೋತ್ಸಾಹ ನೀಡಿದ್ದೇವೆ. ಯಾದಗಿರಿ ಜಿಲ್ಲೆಯಲ್ಲಿ ವಿಕಾಸದ ಆಕಾಂಕ್ಷೆ ಹೊಂದಿದ್ದೇವೆ. ವಿದ್ಯುತ್, ನೀರಾವರಿ, ರಸ್ತೆ, ಅಭಿವೃದ್ಧಿಗಳಿಗೆ ವೇಗ ಕೊಟ್ಟಿದ್ದೇವೆ ಎಂದರು.

ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಜಲಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳ, ಕೇಂದ್ರ ರಾಸಾಯನಿಕ, ರಸಗೊಬ್ಬರ ಹಾಗೂ ಹೊಸ ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವರಾದ ಭಗವಂತ ಖೂಬಾ ಸಂಸದ ರಾಜಾ ಅಮರೇಶ್ವರ ನಾಯಕ್, ಶಾಸಕರುಗಳಾದ ರಾಜುಗೌಡ, ವೆಂಕಟರೆಡ್ಡಿ ಮುದ್ನಾಳ, ಎ.ಎಸ್.ಪಾಟೀಲ್ ನಡಹಳ್ಳಿ, ರಮೇಶ ಸಿಂಧಗಿ, ಸೋಮನಗೌಡ ಹಿಪ್ಪರಗಿ ಮತ್ತಿತರ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು. ■



Downloaded From:www.kpscvaani.com




# ಕರ್ತವ್ಯ ಪಥ್‌ನಲ್ಲಿ

# ರಾಜ್ಯದ ನಾರಿ ಶಕ್ತಿ ಪ್ರದರ್ಶನ

ಕರ್ನಾಟಕ ರಾಜ್ಯ ಪ್ರತಿನಿಧಿಸುವ ಸ್ತಬ್ಧಚಿತ್ರವನ್ನು ಪ್ರತಿ ವರ್ಷವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸಿದ್ಧಪಡಿಸುತ್ತದೆ. ಅಂತೆಯೇ ಈ ಬಾರಿ 74 ನೇ ಗಣರಾಜ್ಯೋತ್ಸವ ದಿನದಂದು ರಾಜಧಾನಿ ನವದೆಹಲಿಯ ಕರ್ತವ್ಯ ಪಥ್ ನಲ್ಲಿ ಜರುಗಿದ ಪಥ ಸಂಚಲನದಲ್ಲಿ ನಮ್ಮ ರಾಜ್ಯದ 'ನಾರಿ ಶಕ್ತಿ' ಯನ್ನು ಪ್ರದರ್ಶಿಸುವ ಸ್ತಬ್ಧಚಿತ್ರವು ಸಾಗಿತು. ಸತತವಾಗಿ 14 ನೇ ಬಾರಿಗೆ ಕರ್ನಾಟಕ ರಾಜ್ಯದ ಸ್ತಬ್ಧಚಿತ್ರವು ಪಥಸಂಚಲನದಲ್ಲಿ ಭಾಗವಹಿಸಿ ದಾಖಲೆಯನ್ನು ನಿರ್ಮಿಸಿತು.

ಮಾದರಿ ವಿನ್ಯಾಸ ಆಯ್ಕೆ ಸಮಿತಿಯು ಕಳೆದ ಬಾರಿ ಅವಕಾಶ ವಂಚಿತ ರಾಜ್ಯಗಳಿಗೆ ಅವಕಾಶ ಮಾಡಿಕೊಡಬೇಕು ಎಂಬ ಕಾರಣದಿಂದ ಅಂತಿಮ ಹಂತದಲ್ಲಿ ನಮ್ಮ ರಾಜ್ಯದ ಸ್ತಬ್ಧಚಿತ್ರಕ್ಕೆ ಅವಕಾಶ ತಪ್ಪಿತ್ತು.

**ಈ ಬಾರಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮೂವರು ಮಹಿಳಾ ಸಾಧಕಿಯರ ಸಾಧನೆ ಬಿಂಬಿಸಿದ ಕರ್ನಾಟಕ ರಾಜ್ಯದ ಸ್ತಬ್ಧಚಿತ್ರವು ಜನರನ್ನು ಪುಳಕಿತರನ್ನಾಗಿಸಿತು.**

ಆದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಕ್ಷಣಾ ಸಚಿವರಿಗೆ ತೆರೆಮರೆಯಲ್ಲಿದ್ದುಕೊಂಡು ಸಮಾಜಕ್ಕೆ ನಿಸ್ವಾರ್ಥ ಸೇವೆ ನೀಡಿರುವ ಮಹಾನ್ ಚೇತನರಾದ ಸೂಲಗಿತ್ತಿ ನರಸಮ್ಮ, ತುಳಸಿಗೌಡ ಹಾಲಕ್ಕಿ ಮತ್ತು ಸಾಲು ಮರದ ತಿಮ್ಮಕ್ಕ ಅವರ ಸಾಧನೆಯನ್ನು ಬಿಂಬಿಸುವ ಕುರಿತ ಸ್ತಬ್ಧಚಿತ್ರ ಅತ್ಯಂತ ಮಹತ್ವದ ವಿಷಯವಾಗಿದೆ ಎಂದು ಮನದಟ್ಟು ಮಾಡಿಕೊಡುವ ಜೊತೆಗೆ ನಮ್ಮ ರಾಜ್ಯಕ್ಕೆ ಕಳೆದ ಬಾರಿ ಎರಡನೇ ಬಹುಮಾನ ಬಂದಿರುವುದನ್ನು ತಿಳಿಸುವ ಮೂಲಕ ರಾಜ್ಯದ ಸ್ತಬ್ಧಚಿತ್ರಕ್ಕೆ ಮತ್ತೆ ಅವಕಾಶ ದೊರಕುವಂತೆ ಮಾಡಿದರು.

ಇಷ್ಟೆಲ್ಲಾ ಆಗುವುದರಲ್ಲಿ ದಿನಗಳು ಮುಂದೆ ಹೋಗಿತ್ತು. ಕೇವಲ ಹತ್ತು ದಿನಗಳಲ್ಲಿ ಸ್ತಬ್ಧಚಿತ್ರ ತಯಾರಿಸುವ ಸವಾಲು ಇಲಾಖೆಗೆ ಎದುರಾಯಿತು. ಬೇಗ ಆಯ್ಕೆಯಾಗಿದ್ದರೆ ತಯಾರಿಗೆ ಅಂದಾಜು ನಲವತ್ತು ದಿನಗಳು ದೊರಕುತಿತ್ತು. ಇದನ್ನು ಸವಾಲಾಗಿ ಸ್ವೀಕರಿಸಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಡಾ.ಪಿ.ಎಸ್.ಹರ್ಷ ಅವರು ಮುಖ್ಯಮಂತ್ರಿ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಡಾ.ಎನ್.ಮಂಜುನಾಥ್ ಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸ್ತಬ್ಧಚಿತ್ರ ಸಿದ್ಧತೆಯನ್ನು


Downloaded From:www.kpscvaani.com




ಪ್ರಾರಂಭಿಸಿದರು.

ತಡವಾಗಿ ಸ್ತಬ್ಧಚಿತ್ರ ತಯಾರಿಸುವ ಸಂದರ್ಭ ಒದಗಿಬಂದ ಹಿನ್ನೆಲೆಯಲ್ಲಿ ಇಲಾಖೆಯ ಅಧಿಕಾರಿಗಳು ಸ್ತಬ್ಧಚಿತ್ರ ತಯಾರಕರಿಗೆ ಆತ್ಮಸ್ಥೈರ್ಯ ತುಂಬುತ್ತಾ ಹೆಚ್ಚಿನ ಕಲಾವಿದರನ್ನು ಬಳಸಿಕೊಳ್ಳಲು ಅವಕಾಶವನ್ನು ನೀಡಿದರು. ಹಾಗಾಗಿ ಕಲಾ ನಿರ್ದೇಶಕರಾದ ಶಶಿಧರ್ ಅಡಪ ಅವರು ಈ ಬಾರಿ ಮೂರು ಪಟ್ಟು ತಂತ್ರಜ್ಞರು ಮತ್ತು ಕಲಾವಿದರನ್ನು ಸ್ತಬ್ಧಚಿತ್ರ ತಯಾರಿಕೆಗೆ ಬಳಸಿಕೊಂಡರು.

ಹಾಗೆಯೇ ಸ್ತಬ್ಧಚಿತ್ರದ ಹೆಚ್ಚಿನ ಬಿಡಿ ಭಾಗಗಳನ್ನು ಬೆಂಗಳೂರಿನಲ್ಲೇ ತಯಾರಿಸಿ, ರೈಲು, ವಿಮಾನ ಮತ್ತು ಲಾರಿ ಸೇರಿದಂತೆ ಮೂರು ಸಂಚಾರಿ ಮಾರ್ಗಗಳ ಮೂಲಕ ದೆಹಲಿಗೆ ಸಾಗಣೆ ಮಾಡಲಾಯಿತು. ಈ ಬಾರಿಯ ಸ್ತಬ್ಧಚಿತ್ರ ತಯಾರಿಕೆ ವೇಳೆ ವರುಣ  ಕೃಪೆ ತೋರಿದ್ದು ಇನ್ನೂ ಹೆಚ್ಚು ಅನುಕೂಲವಾಯಿತು. ಇಲಾಖೆಯ ಉಪ ನಿರ್ದೇಶಕರಾದ ಸಿ.ಆರ್. ನವೀನ್ ಅವರು ಕೂಡ ಆಯುಕ್ತರ ಸಲಹೆ ಸೂಚನೆ ಮೇರೆಗೆ ದೆಹಲಿಯಲ್ಲಿ ಸ್ತಬ್ಧಚಿತ್ರ ಕುರಿತಂತೆ ಎಲ್ಲಾ ಉಸ್ತುವಾರಿಯನ್ನು ನೋಡಿಕೊಂಡರು.

ಇಷ್ಟೆಲ್ಲಾ ಜನರ ಪರಿಶ್ರಮದ ಪರಿಣಾಮ ಕೇವಲ ಹತ್ತು ದಿನಗಳಲ್ಲಿ ಅತ್ಯಂತ ಆಕರ್ಷಕವಾದ ಮತ್ತು ರೋಮಾಂಚನಗೊಳಿಸುವಂತಹ ಸ್ತಬ್ಧಚಿತ್ರ ನಿರ್ಮಾಣ ಮಾಡಲು ಸಾಧ್ಯವಾಯಿತು.

ಅತ್ಯಂತ ಹಿಂದುಳಿದ ಪ್ರದೇಶದಿಂದ ಬಂದಿದ್ದರೂ  ಯಾವುದೇ ಫಲಾಪೇಕ್ಷೆ ಇಲ್ಲದೆ ಸಮಾಜದ ಸುಧಾರಣೆಗೆ ತಮ್ಮನ್ನು ಅರ್ಪಿಸಿಕೊಂಡಿರುವ ಸೂಲಗಿತ್ತಿ ನರಸಮ್ಮ, ವೃಕ್ಷ ಮಾತೆ ತುಳಸಿಗೌಡ ಹಾಲಕ್ಕಿ, ಸಾಲುಮರದ ತಿಮ್ಮಕ್ಕ ಅವರ ಸಾಧನೆಯನ್ನು ದೇಶದ ಜನರಿಗೆ ಪರಿಚಯಿಸುವ ಉದ್ದೇಶದಿಂದ 'ನಾರಿ ಶಕ್ತಿ' ವಿಷಯದಲ್ಲಿ ಸ್ತಬ್ಧಚಿತ್ರವನ್ನು ನಿರ್ಮಾಣ ಮಾಡಲಾಗಿತ್ತು.

ತುಮಕೂರು ಜಿಲ್ಲೆಯ ಪಾವಗಡದವರಾದ ಸೂಲಗಿತ್ತಿ ನರಸಮ್ಮ ಅವರು ಸಾಂಪ್ರದಾಯಿಕ ಸೂಲಗಿತ್ತಿ. ಇವರು ಯಾವುದೇ ವೈದ್ಯಕೀಯ ಸೌಲಭ್ಯಗಳಿಲ್ಲದ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಕಳೆದ ಏಳು ದಶಕಗಳಲ್ಲಿ ಸಾಂಪ್ರದಾಯಿಕ ವಿಧಾನದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಹೆರಿಗೆಗಳನ್ನು ಉಚಿತವಾಗಿ ಮಾಡಿಸಿದವರು. ಇವರ ಸಾಧನೆಯನ್ನು ಬಿಂಬಿಸುವಂತೆ ಸ್ತಬ್ಧಚಿತ್ರದ ಮುಂಭಾಗದಲ್ಲಿ ತೊಟ್ಟಿಲಿನಿಂದ ಮಗುವನ್ನು ಎತ್ತುಕೊಂಡು ಕೈಯಲ್ಲಿ ಆಡಿಸುತ್ತಿರುವಂತೆ ಪ್ರತಿರೂಪವನ್ನು ನಿರ್ಮಿಸಲಾಗಿತ್ತು.

ವೃಕ್ಷಮಾತೆ ಎಂದೇ ಪ್ರಖ್ಯಾತಿ ಹೊಂದಿರುವ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಹೊನ್ನಾಳಿಯವರಾದ ತುಳಸಿಗೌಡ ಹಾಲಕ್ಕಿ ಅವರು 30 ಸಾವಿರಕ್ಕೂ ಹೆಚ್ಚು ಅಪರೂಪದ ಜಾತಿಯ ಮರಗಳನ್ನು ಬೆಳೆಸಿ ಪೋಷಿಸಿದ್ದಾರೆ. ಹಾಗಾಗಿ ಸ್ತಬ್ಧಚಿತ್ರದ ಮಧ್ಯಭಾಗದಲ್ಲಿ ಸಸಿಯನ್ನು ಪೋಷಿಸುತ್ತಿರುವಂತೆ ಅವರ ಪ್ರತಿರೂಪವನ್ನು ಇರಿಸಲಾಗಿತ್ತು.

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಸಾಲುಮರದ ತಿಮ್ಮಕ್ಕ ಹುಲಿಕಲ್ ಮತ್ತು ಕುದೂರು ನಡುವಿನ 4.5 ಕಿ.ಮೀ ಹೆದ್ದಾರಿಯಲ್ಲಿ 75 ಕ್ಕೂ ಹೆಚ್ಚು ಆಲದ ಮರಗಳನ್ನು ನೆಟ್ಟು ಪೋಷಿಸಿದ್ದಾರೆ. ಅಲ್ಲದೆ ಪತಿ ಚಿಕ್ಕಯ್ಯ ಅವರ ಬೆಂಬಲದೊಂದಿಗೆ ಎಂಟು ಸಾವಿರ ಮರಗಳನ್ನು ಬೆಳೆಸುವ ಮೂಲಕ ಪರಿಸರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಹಾಗಾಗಿ ಮರಗಳಿಗೆ ನೀರು ಹಾಕುತ್ತಿರುವಂತೆ ಹಿಂಭಾಗದಲ್ಲಿ  ಅವರ ಪ್ರತಿರೂಪವನ್ನು ಬಿಂಬಿಸಲಾಗಿತ್ತು.

ಈ ಮೂವರು ಕೂಡ ಕೇಂದ್ರ ಸರ್ಕಾರವು ನೀಡುವ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿ ವಿಜೇತರು ಎಂಬುದು ವಿಶೇಷ. ಇವರು ಕರ್ನಾಟಕ 'ನಾರಿ ಶಕ್ತಿ'ಯ (ಮಹಿಳಾ ಶಕ್ತಿ) ಹೆಮ್ಮೆಯ ಪ್ರತೀಕವಾಗಿದ್ದಾರೆ. ಇವರ ಸಾಧನೆಯನ್ನು ದೇಶದ ಜನತೆಗೆ ಸ್ತಬ್ಧಚಿತ್ರದ ಮೂಲಕ ಪರಿಚಯಿಸಿದ್ದು ರಾಜ್ಯ ಸರ್ಕಾರವು ಅವರಿಗೆ ಸಲ್ಲಿಸಿದ ಗೌರವ ಎಂದರೆ ತಪ್ಪಾಗಲಾರದು.

**ನಮ್ಮ ರಾಜ್ಯದ ಸ್ತಬ್ಧಚಿತ್ರ ತಯಾರಿಯು ಎಲ್ಲಾ ರಾಜ್ಯಗಳಿಗಿಂತ ಮೂವತ್ತು ದಿನ ತಡವಾಗಿ ಆರಂಭವಾದರೂ ಕೂಡ, ಸ್ತಬ್ಧಚಿತ್ರವನ್ನು ಪೂರ್ಣಗೊಳಿಸಿ ರಕ್ಷಣಾ ಸಚಿವಾಲಯಕ್ಕೆ ಹಸ್ತಾಂತರಿಸಿದ್ದು ನಾವೇ ಮೊದಲು. ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳು, ಸಿಬ್ಬಂದಿಗಳು, ವಿನ್ಯಾಸಕರು, ತಂತ್ರಜ್ಞರು, ಕಲಾವಿದರು ಅತ್ಯಂತ ಉತ್ಸಾಹದಿಂದ ಶ್ರದ್ಧೆಯಿಟ್ಟು ಕೆಲಸ ಮಾಡಿದರಿಂದ ಇದು ಸಾಧ್ಯವಾಯಿತು.**

**ಡಾ. ಪಿ. ಎಸ್. ಹರ್ಷ**
ಆಯುಕ್ತರು, ವಾರ್ತಾ ಮತ್ತು
ಸಾರ್ವಜನಿಕ ಸಂಪರ್ಕ ಇಲಾಖೆ


Downloaded From:www.kpscvaani.com







# ವಿಶ್ವದ ಚಿತ್ತ ರಾಜ್ಯದ ಉದ್ಯಮದತ್ತ !

ಚಂದ್ರಮುಖಿ

**ಕರ್ನಾಟಕ ಕೈಗಾರಿಕೆಯ ಬೆರಗಿನ ಓಟಕ್ಕೆ ದಾಖಲೆಯ ವಿದೇಶಿ ಬಂಡವಾಳ ಹರಿದು ಬಂದಿದೆ.**

ದೇಶಾದ್ಯಂತ ಕೋವಿಡ್ ಪ್ಯಾಂಡಮಿಕ್‌ನ ಆ ಕಾಲಘಟ್ಟದಲ್ಲಿ ಕೈಗಾರಿಕೆಗಳು ನಿಜಕ್ಕೂ ತತ್ತರಿಸಿ ಹೋದವು. ಅನೇಕ ಉದ್ಯಮಗಳು ಬಾಗಿಲು ಮುಚ್ಚಿದವು. ಕೈಗಾರಿಕಾ ಪ್ರಗತಿಯಲ್ಲಿ ಎತ್ತರದ ಸ್ಥಾನದಲ್ಲಿದ್ದ ಮಹಾರಾಷ್ಟ್ರ, ಗುಜರಾತ್ ಮತ್ತು ದೆಹಲಿಯಂತಹ ರಾಜ್ಯಗಳು ಮುದುಡಿ ಕುಳಿತುಕೊಳ್ಳಬೇಕಾಯಿತು. ಆದರೆ ಇಡೀ ದೇಶದಲ್ಲಿ ಬೆರಗಾಗುವಂತಹ ಒಂದು ವಿದ್ಯಮಾನ ದಾಖಲಾಯಿತು. ಆ ಒಂದು ರಾಜ್ಯದಲ್ಲಿ ಮಾತ್ರ ಕೈಗಾರಿಕೆಗಳು ಮೈಕೊಡವಿ ಮೇಲೆದ್ದವು. ಅಂತಹ ಸಾಧನೆಯನ್ನು ಮಾಡಿದ ರಾಜ್ಯ ನಮ್ಮ ಕರ್ನಾಟಕ. ಕೋವಿಡ್‌ನಿಂದ ಉಂಟಾದ ಎಲ್ಲ ಹಿನ್ನಡೆಗಳನ್ನು ಹಿಮ್ಮೆಟ್ಟಿ ಮುಂಚೂಣಿಗೆ ಬಂದು ನಿಂತಿತು. ಅದಕ್ಕೆ ಸಾಕ್ಷಿ ಏನು ಎಂದು ಕೇಳುವವರಿಗೆ ಈ ಎರಡು ಉದಾಹರಣೆಗಳನ್ನು ಕೊಡಬಹುದು.

ಮೊದಲನೆಯದಾಗಿ 2022ರ ಆರ್ಥಿಕ ಸಾಲಿನಲ್ಲಿ ಕರ್ನಾಟಕವು ಸ್ವೀಕರಿಸಿದ ಒಟ್ಟು ವಿದೇಶಿ ನೇರ ಹೂಡಿಕೆ ಎಷ್ಟು ಗೊತ್ತೇ?, ಸುಮಾರು ಒಂದು ಲಕ್ಷದ ಆರವತ್ತಮೂರು ಸಾವಿರ ಕೋಟಿ! ಇದು ಇಡೀ ಇಂಡಿಯಾ ಸ್ವೀಕರಿಸಿದ ಒಟ್ಟು ಹೂಡಿಕೆಯನ್ನು ಗಮನಿಸಿದರೆ ಶೇ.38ರಷ್ಟಾಗುತ್ತದೆ. ಅಂದರೆ ಉಳಿದೆಲ್ಲ ರಾಜ್ಯಗಳನ್ನು ಹಿಂದಿಕ್ಕಿ ಕರ್ನಾಟಕ ಅಗ್ರ ಸ್ಥಾನವನ್ನು ಪಡೆದುಕೊಂಡಿದೆ.

ಒಂದು ದೇಶದ ಅರ್ಥ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುವುದು ಸರಕು ರಫ್ತು. ಈ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಪಡೆಯಲು ಯಾವತ್ತೂ



Downloaded From:www.kpscvaani.com



ರೆನ್ಯೂ ಪವರ್ ಪ್ರೈ.ಲಿಮಿಟೆಡ್ ಕಂಪನಿಯು ರಾಜ್ಯ ಸರ್ಕಾರದೊಂದಿಗೆ ಹೂಡಿಕೆ ಒಪ್ಪಂದಕ್ಕೆ ಸಹಿ ಮಾಡಿದ ಸಂದರ್ಭ.

ರಾಜ್ಯಗಳ ನಡುವೆ ಆರೋಗ್ಯ ಪೂರ್ಣವಾದ ಪೈಪೋಟಿ ಇರುತ್ತದೆ. 2022ರ ಆರ್ಥಿಕ ಸಾಲಿನಲ್ಲಿ ದೇಶದ ರಫ್ತಿಗೆ ರಾಜ್ಯ ಕೊಟ್ಟ ಕೊಡುಗೆ 23 ಬಿಲಿಯನ್ ಡಾಲರ್. ಇದು ಈವರೆಗಿನ ಬೃಹತ್ ಮೊತ್ತ ಎಂದು ದಾಖಲಾಗಿದೆ, ಮಾತ್ರವಲ್ಲ ಇಡೀ ದೇಶದಲ್ಲಿ ರಫ್ತು ಮಾಡುವ ರಾಜ್ಯಗಳಲ್ಲಿ ಮುನ್ನಡೆ ಸಾಧಿಸಿರುವುದು ನಾಲ್ಕು ರಾಜ್ಯಗಳು. ಅವುಗಳಲ್ಲಿ ನಮ್ಮ ರಾಜ್ಯವೂ ಒಂದು ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ.

ಒಂದು ರಾಜ್ಯದ ಕೈಗಾರಿಕಾ ಕ್ಷೇತ್ರದ ದಿಕ್ಕು ಹೇಗೆ ಬದಲಾಗಿದೆ ಎಂಬುದಕ್ಕೆ ಈ ಎರಡು ಚಿತ್ರಗಳು ಸಾಕು. ಕೈಗಾರಿಕಾ ಪ್ರಗತಿಯ ಬಗ್ಗೆ ಸ್ಪಷ್ಟವಾದ ಒಳನೋಟ, ದೂರದೃಷ್ಟಿಯನ್ನು ಹೊಂದಿದ, ಟೀಮ್ ಸ್ಪಿರಿಟ್‌ನ್ನು ರಕ್ತಗತ ಮಾಡಿಕೊಂಡ ತಂಡವಿದ್ದರೆ ಮಾತ್ರ ಇಂತಹುದೊಂದು ಸಾಧನೆ ಸಾಧ್ಯವಾಗುತ್ತದೆ. ಜೊತೆಗೆ ಸರ್ಕಾರವೊಂದು ಹೂಡಿಕೆದಾರ ಸ್ನೇಹಿ ವಾತಾವರಣವನ್ನು ಸೃಷ್ಟಿ ಮಾಡಬೇಕಾಗುತ್ತದೆ, ಅದಕ್ಕೆ ತಕ್ಕುನಾದ ನೀತಿಗಳನ್ನು ಜಾರಿಗೆ ತರಬೇಕಾಗುತ್ತದೆ. ಇಂತಹ ಸಾಧನೆಯನ್ನು ಅಭಿವೃದ್ಧಿ ಪರವಾದ ಚಿಂತನೆಗಳನ್ನು ತಲೆಯಲ್ಲಿ ತುಂಬಿಕೊಂಡ ಸರ್ಕಾರ, ಅಧಿಕಾರಿ ವರ್ಗ, ತಜ್ಞರು ಮಾಡಬಲ್ಲರು.

ಇವೆಲ್ಲವೂ ಸುಲಭ ಸಾಧ್ಯವಾದ ಕೆಲಸವಲ್ಲ. 'ಕೈಗಾರಿಕೆ' ಎಂಬ ಆತ್ಮದೊಳಗೆ ಏನೆಲ್ಲ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅಲ್ಲಿ ಕೃಷಿ ತಂತ್ರಜ್ಞಾನವಿದೆ, ಬಯೋಟೆಕ್ ಇದೆ, ಏರೋಸ್ಪೇಸ್ ಮತ್ತು ರಕ್ಷಣಾ ತಯಾರಿಕಾ ಕ್ಷೇತ್ರವಿದೆ, ಎಲೆಕ್ಟ್ರಾನಿಕ್ಸ್, ನ್ಯಾನೋ ತಂತ್ರಜ್ಞಾನ, ಆಹಾರ ಸಂಸ್ಕರಣ, ಹಾರ್ಡ್‌ವೇರ್, ಡ್ರೋನ್ ತಂತ್ರಜ್ಞಾನ, ಎಲೆಕ್ಟ್ರಾನಿಕ್ ಸಿಸ್ಟಮ್ ವಿನ್ಯಾಸ ಮತ್ತು ತಯಾರಿಕೆ, ಅತಿಥಿ ಸತ್ಕಾರದಂತಹ ಕ್ಷೇತ್ರಗಳು... ಹೀಗೆ ಅದರ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಈ ಕ್ಷೇತ್ರಗಳಲ್ಲೂ ನೇರ ವಿದೇಶಿ ಬಂಡವಾಳ ಹೂಡಿಕೆಗೆ ಇರುವ ಅವಕಾಶದ ವ್ಯಾಪ್ತಿ ದೊಡ್ಡದು. ಕೈಗಾರಿಕಾ ಇಲಾಖೆಯ 'ವರಿಷ್ಠರು' ಇದರ ನಾಡಿಮಿಡಿತವನ್ನು ಬಲ್ಲವರು. ಹಾಗಾಗಿ ಬಂಡವಾಳವನ್ನು ಸೆಳೆದು ತರುವಲ್ಲಿ ಮತ್ತು ರಾಜ್ಯವನ್ನು ಉನ್ನತ ಸ್ಥಾನದಲ್ಲಿ ನಿಲ್ಲಿಸುವಲ್ಲಿ ಅವರೆಲ್ಲರೂ ಯಶಸ್ವಿಯಾಗಿದ್ದಾರೆ.

ಯಾವುದೇ ಒಂದು ಕೈಗಾರಿಕೆ ಸ್ಥಾಪನೆಯಾಗಬೇಕಾದರೆ ಮತ್ತು ಅದು ಪ್ರವರ್ಧನಮಾನಕ್ಕೆ ಬರಬೇಕಾದರೆ ಅತ್ಯಗತ್ಯವಾಗಿ ಬೇಕಾದುದು ಭೂಮಿ, ಕಾರ್ಮಿಕ ಬಳಗ, ವಿದ್ಯುತ್ ಮತ್ತು ನೀರಿನ ಸಂಪರ್ಕ ಹಾಗೂ ಸಾರಿಗೆ ಸಂಚಾರ ವ್ಯವಸ್ಥೆ. ಸರ್ಕಾರ ಇದಕ್ಕೆ ಸಂಬಂಧಿಸಿದ ಅಡೆತಡೆಗಳನ್ನೆಲ್ಲ ನಿವಾರಿಸಿ ಸುಗಮಗೊಳಿಸಿದರೆ ಯಾವುದೇ ಉದ್ಯಮ ಸ್ಥಾಪನೆ ಕಷ್ಟವಾಗುವುದಿಲ್ಲ. ಕರ್ನಾಟಕದಲ್ಲಿ ಭೂಮಿ ಬೆಲೆ ಅಧಿಕ ಎಂಬ ದೂರು ಇದ್ದೇ ಇದೆ. ಆದರೆ ಸರ್ಕಾರ ಈ ಹೊರೆಯನ್ನು ತಗ್ಗಿಸಲು ಸಾಕಷ್ಟು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ವಾಣಿಜ್ಯ ತೆರಿಗೆಗಳ ಪ್ರಮಾಣವನ್ನು ತಗ್ಗಿಸಿದೆ. ವಿದ್ಯುತ್ ಸಹಾಯಧನ ನೀಡಲಾಗುತ್ತಿದೆ. ಭೂಮಿ ಮಾರಾಟ ಪ್ರಕ್ರಿಯೆಯಲ್ಲಿಯೂ ಸಾಕಷ್ಟು ಬದಲಾವಣೆಗಳನ್ನು ಮಾಡಲಾಗಿದೆ. ಇವೆಲ್ಲವೂ ಹೂಡಿಕೆಗಳನ್ನು ಸೆಳೆದು ತರುವ ಉಪಕ್ರಮಗಳು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ.

ಉದಾಹರಣೆಗೆ ಸೆಮಿಕಂಡಕ್ಟರ್ ತಯಾರಿಕಾ ಕಂಪನಿಗಳಿಗೆ ಹತ್ತು ವರ್ಷಗಳ ಕಾಲ ಶೇ.100ರ ಸಹಾಯಧನದಲ್ಲಿ ತಾಜಾ ನೀರಿನ ಸರಬರಾಜು, ಹತ್ತು ವರ್ಷಗಳಿಗೆ ವಿದ್ಯುತ್ ಸಹಾಯಧನ, ಭೂಮಿಗೆ ಶೇ.100ರಷ್ಟು ಸಹಾಯಧನ ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ. ಅಂದರೆ ಆಯಾ ವಲಯಕ್ಕೆ ತಕ್ಕಂತೆ ವಿಶೇಷ ಪ್ರೋತ್ಸಾಹಕ ಪ್ಯಾಕೇಜ್ ನೀಡುತ್ತಿರುವುದು ಹೆಚ್ಚು ಹೂಡಿಕೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಪ್ರಸ್ತುತ ಭಾರತದ ಒಟ್ಟು ಏರೋಸ್ಪೇಸ್ ರಫ್ತಿನಲ್ಲಿ ಕರ್ನಾಟಕದ ಪಾಲೇ ಶೇ.65ರಷ್ಟಿದೆ. ಈ ಹಿನ್ನೆಲೆಯಲ್ಲಿ

## ಉದ್ಯಮಿಯಾಗು ಉದ್ಯೋಗ ನೀಡು

**ಇಲ್ಲಿನ ಮೂಲ ಸೌಕರ್ಯಗಳನ್ನು ಬಳಸಿಕೊಂಡು ಉದ್ಯಮಿಯಾದರೆ ಮಾತ್ರ ಸಾಲದು ಯುವಕರಿಗೆ ಉದ್ಯೋಗವನ್ನೂ ನೀಡಬೇಕು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಹಮ್ಮಿಕೊಂಡ ಒಂದು ಮಹತ್ವಾಕಾಂಕ್ಷಿ ಕಾರ್ಯಕ್ರಮ– "ಉದ್ಯಮಿಯಾಗು ಉದ್ಯೋಗ ನೀಡು". ಮಂಗಳೂರು, ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಆಗ ತಾನೇ ಎಂಬಿಎ ಮತ್ತು ಬಿಇ ಪದವಿಯನ್ನು ಪೂರೈಸಿದ 26 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷ. ಬೆಂಗಳೂರು–ಮುಂಬೈ ಮತ್ತು ಬೆಂಗಳೂರು–ಚೆನ್ನೈ ಕೈಗಾರಿಕಾ ಕಾರಿಡಾರ್‌ನಲ್ಲಿ ನಿರ್ಮಿಸುವ ಪ್ರಸ್ತಾಪ ಹೊಂದಿರುವ ಕೈಗಾರಿಕಾ ಟೌನ್‌ಶಿಪ್‌ಗಳಲ್ಲಿ ಒಂದು ಲಕ್ಷ ಕೋಟಿ ಹೂಡಿಕೆಯ ನಿರೀಕ್ಷೆಯಿದೆ. ಈ ಟೌನ್‌ಶಿಪ್‌ಗಳ ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ಐದು ಲಕ್ಷ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಹೊಂದಲಾಗಿದೆ.**


Downloaded From:www.kpscvaani.com



ಹೀರೋ ಮೋಟೋಕಾರ್ಪ್‌ನ ಅಧ್ಯಕ್ಷರು ಹಾಗೂ ಸಿಇಓ ಪವನ್ ಮುಂಜಲ್ ಅವರು ದಾವೋಸ್‌ನಲ್ಲಿ ಮುಖ್ಯಮಂತ್ರಿ ಅವರೊಂದಿಗೆ ರಾಜ್ಯದಲ್ಲಿನ ಹೂಡಿಕೆ ಅವಕಾಶಗಳ ಕುರಿತು ಚರ್ಚಿಸುತ್ತಿರುವುದು.

**ಉದ್ಯೋಗಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿರುವ ಸರ್ಕಾರವು ಕಳೆದ ತಿಂಗಳು ಶಿಗ್ಗಾವಿಯಲ್ಲಿ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗೆ ಆರು ತಿಂಗಳ ಹಿಂದೆ ಶಂಕುಸ್ಥಾಪನೆ ಮಾಡಿದ್ದು, ಇದರಿಂದ ಆ ಭಾಗದ ಸಾವಿರಾರು ಜನರಿಗೆ ಉದ್ಯೋಗ ದೊರಕಲಿದೆ.**

> **ರಾಜ್ಯದ ಉನ್ನತ ಮಟ್ಟದ ಸಮಿತಿ ಈಗಾಗಲೇ 2.8 ಲಕ್ಷ ಕೋಟಿಗೂ ಅಧಿಕ ಹೂಡಿಕೆಗೆ ಅನುಮೋದನೆಯನ್ನು ನೀಡಿದೆ. ಬೆಂಗಳೂರಿನಿಂದ ಆಚೆಗೆ ಬಂಡವಾಳ ಹೂಡಿಕೆ ಮಾಡಲು ಹೆಚ್ಚಿನ ಹೂಡಿಕೆದಾರರು ಆಸಕ್ತಿ ವಹಿಸಿರುವುದು ಕರ್ನಾಟಕ ಕೈಗಾರಿಕೆ ಸಾಗುತ್ತಿರುವ ದಾರಿಗೆ ದ್ಯೋತಕವಾಗಿದೆ. ರಾಮನಗರ, ಹುಬ್ಬಳ್ಳಿ-ಧಾರವಾಡ, ಬಳ್ಳಾರಿ, ಕಲಬುರಗಿ ಮತ್ತು ಮೈಸೂರಿನಂತಹ ನಗರಗಳಲ್ಲಿ ಹೊಸ ಕೈಗಾರಿಕೆಗಳು ಸ್ಥಾಪನೆಯಾಗುತ್ತಿರುವುದು ಉತ್ತಮ ಬೆಳವಣಿಗೆ.**
>
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿಗಳು

### ಕರ್ನಾಟಕ ಕೈಗಾರಿಕೆ ಪ್ರಗತಿಪಥ

- ದಶಕದ ಹಿಂದೆಯೇ ರಾಜ್ಯದಲ್ಲಿ ಏರೋಸ್ಪೇಸ್ ಮತ್ತು ರಕ್ಷಣಾ ತಂತ್ರಜ್ಞಾನ ಪಾರ್ಕ್‌ನ್ನು ನಿರ್ಮಿಸಲಾಗಿದೆ.
- 2020ರ ಜೂನ್ ತಿಂಗಳಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಜಾರಿಗೆ ತರಲಾಗಿದೆ.
- ಬೆಂಗಳೂರಿನಿಂದ ಹೊರಗಿನ ಜಿಲ್ಲೆಗಳಲ್ಲಿ ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆಗೆ ಕ್ರಮ.
- ತುಮಕೂರಿನಲ್ಲಿ ಜಪಾನ್ ಕೈಗಾರಿಕಾ ಟೌನ್‌ಶಿಪ್ ಮತ್ತು ದೇವನಹಳ್ಳಿಯಲ್ಲಿ ತೈವಾನ್ ಕೈಗಾರಿಕಾ ಪಾರ್ಕ್.
- ಬೆಂಗಳೂರಿನಿಂದ ಹೊರಗಿನ ಜಿಲ್ಲೆಗಳ ಎರಡನೇ ಸ್ತರದ ನಗರಗಳಲ್ಲಿ ಕೈಗಾರಿಕೆ ಸ್ಥಾಪಿಸಿದರೆ ವಿಶೇಷ ಉತ್ತೇಜನ.
- ವಿದೇಶಿ ಯೋಜನೆಗಳ ಸುಗಮ ಅನುಷ್ಠಾನಕ್ಕಾಗಿ ಸುಲಲಿತ ಉದ್ಯಮ ಅನುಷ್ಠಾನ ಯೋಜನೆ.
- ಯೋಜನೆಗಳ ತ್ವರಿತ ಜಾರಿಗೆ ಎರಡು ಸಮಿತಿಗಳ ರಚನೆ.
- ಪಾವಗಡದಲ್ಲಿರುವ 2000 ಮೆ.ವ್ಯಾ. ಸಾಮರ್ಥ್ಯದ ದೇಶದ ಬೃಹತ್ ಸೋಲಾರ್ ಪಾರ್ಕ್‌ನಲ್ಲಿ ಈಗಾಗಲೇ 1400 ಮೆ.ವ್ಯಾ. ಸೌರ ವಿದ್ಯುತ್ ಬಳಕೆ ಮಾಡಲಾಗುತ್ತಿದೆ.
- ಕೈಗಾರಿಕೆಗಳಿಗೆ ವಾಣಿಜ್ಯ ತೆರಿಗೆಯಲ್ಲಿ ಇಳಿಕೆ, ವಿದ್ಯುತ್ ಸಹಾಯಧನ, ಭೂಮಿ ಮಾರಾಟ ಉಪಕ್ರಮಗಳಂತಹ ಸುಧಾರಣಾ ಕಾರ್ಯಕ್ರಮಗಳ ಜಾರಿ.
- ವಿದ್ಯುತ್ ವಾಹನಗಳು, ಹಸಿರು ಇಂಧನ ವಲಯಗಳಿಗೆ ವಿಶೇಷ ಉತ್ತೇಜನ.

ರಾಜ್ಯ ಸರ್ಕಾರ ಏರೋಸ್ಪೇಸ್ ತಯಾರಿಕೆಗೆ ಉತ್ತೇಜನ ನೀಡುವ ಕೆಲಸವನ್ನು ಮಾಡುತ್ತಿದೆ.

ಇತ್ತೀಚಿನ ದಿನಗಳಲ್ಲಿ ದೇಶಾದ್ಯಂತ ಪರ್ಯಾಯ ಇಂಧನಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದನ್ನು ಗಮನಿಸಿರಬಹುದು. ಅದರ ಪರಿಣಾಮವಾಗಿ ಹೆಚ್ಚು ಹೆಚ್ಚು ಎಲೆಕ್ಟ್ರಿಕ್ ವಾಹನಗಳು ನಮ್ಮ ಬೀದಿಗಳಲ್ಲಿ ಕಾಣಿಸುತ್ತಿವೆ. ಈ ನಿಟ್ಟಿನಲ್ಲಿ ಕರ್ನಾಟಕವೂ ಹಿಂದೆ ಬಿದ್ದಿಲ್ಲ. ವಿದ್ಯುತ್ ವಾಹನಗಳು ಹಾಗೂ ಹಸಿರು ಇಂಧನ ಕ್ಷೇತ್ರಗಳಿಗೆ ಬೇಕಾದ ಉತ್ತೇಜನವನ್ನು ಸರ್ಕಾರ ನೀಡುತ್ತ ಬಂದಿರುವುದರಿಂದ ಬೃಹತ್ ಬಂಡವಾಳದೊಂದಿಗೆ ಅನೇಕ ಕಂಪನಿಗಳು ರಾಜ್ಯದತ್ತ ಚಿತ್ತ ಹರಿಸಿವೆ. ಈ ರಿಯಾಯ್ತಿ ಹಾಗೂ ಪ್ರೋತ್ಸಾಹಗಳೆಲ್ಲವೂ ಸರ್ಕಾರದ ಹೊಸ ಕೈಗಾರಿಕಾ ನೀತಿಯ (2020-2025) ಫಲ.

ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ಇಷ್ಟೊಂದು ದೊಡ್ಡ ಮಟ್ಟಿನ ಸಾಧನೆಯನ್ನು ಮಾಡಿದ್ದು ಹದಿಮೂರು ವರ್ಷಗಳ ಹಿಂದೆ ಎನ್ನುವುದನ್ನೂ ಗಮನಿಸಬೇಕು. ಆಗ ದೇಶದಲ್ಲಿ ಆರ್ಥಿಕ ಹಿನ್ನಡೆಯ ಛಾಯೆ ಆವರಿಸಿರಲಿಲ್ಲ. ಕೋವಿಡ್ ಪ್ಯಾಂಡಮಿಕ್ ರಾಜ್ಯಗಳನ್ನು ಹೈರಾಣು ಮಾಡಿರಲಿಲ್ಲ. ಆದರೆ ಇಷ್ಟೆಲ್ಲ ಸಮಸ್ಯೆಗಳ ಬಳಿಕವೂ ಒಂದು ರಾಜ್ಯ ಈ ಮಟ್ಟಿನ ಸಾಧನೆಯನ್ನು ಮಾಡಿದ್ದು ಹೆಗ್ಗಳಿಕೆ. ಅದೂ ಅಲ್ಲದೆ ಸತತ ಮೂರು ತ್ರೈಮಾಸಿಕದಲ್ಲಿಯೂ (ಚಾರ್ಟ್ ಗಮನಿಸಿ) ಕೂಡ ಕರ್ನಾಟಕ ಅಗ್ರ ಸ್ಥಾನವನ್ನು ಕಾಯ್ದುಕೊಂಡು ಬಂದಿರುವುದು ಇಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಮತ್ತು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಖಾತೆಯ ಜವಾಬ್ದಾರಿಯನ್ನು ಹೊತ್ತಿರುವ ಸಚಿವ ಮುರುಗೇಶ್ ನಿರಾಣಿ ಅವರ ಕಿರೀಟಕ್ಕೊಂದು ಗರಿ.



Downloaded From:www.kpscvaani.com




ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದಾಗ ದಾವೋಸ್ ನಲ್ಲಿ ಕರ್ನಾಟಕ–ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ಉದ್ಘಾಟನೆ ಮಾಡಿದ ಸಂದರ್ಭ.

**2021–22ರ ಆರ್ಥಿಕ ವರ್ಷದಲ್ಲಿ ಅತ್ಯಧಿಕ ಎಫ್‌ಡಿಐ ಹರಿದು ಬಂದ ಐದು ಪ್ರಮುಖ ರಾಜ್ಯಗಳು**

| ರಾಜ್ಯ | ಶೇಕಡವಾರು ಪ್ರಮಾಣ |
|---|---|
| ಕರ್ನಾಟಕ | ಶೇ. 38 |
| ಮಹಾರಾಷ್ಟ್ರ | ಶೇ. 26.26 |
| ದೆಹಲಿ | ಶೇ. 13.93 |
| ತಮಿಳುನಾಡು | ಶೇ. 5.10 |
| ಹರ್ಯಾಣ | ಶೇ. 4.76 |



ಬಯೋಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಅವರನ್ನು ಜಿಮ್ಸ್–2022ಗೆ ಸ್ವಾಗತಿಸುತ್ತಿರುವ ಸಚಿವರು.

> ನಮ್ಮ ನೆಲದಲ್ಲಿ ಈಗಾಗಲೇ ಅನೇಕ ವಲಯಗಳಲ್ಲಿ ಹೂಡಿಕೆಯನ್ನು ಯಶಸ್ಸಿನ ಹಾದಿಯಲ್ಲಿ ಸಾಗಿಸುತ್ತಿರುವ ಬೃಹತ್ ಉದ್ಯಮಗಳೇ ನಮ್ಮ ಪಾಲಿನ ಶಕ್ತಿ. ರಾಜ್ಯದಲ್ಲಿ ಬಂಡವಾಳವನ್ನು ಹೂಡಿಕೆ ಮಾಡುವ ವಿದೇಶಿ ಸಂಸ್ಥೆಗಳಿಗೆ ಅವರು ಮಾದರಿಯಾಗಿದ್ದಾರೆ. ಇದು ಇನ್ನಷ್ಟು ಹೂಡಿಕೆಯನ್ನು ಸೆಳೆದು ತರುವಲ್ಲಿ ಯಶಸ್ವಿಯಾಗಿದೆ. ಇತ್ತೀಚಿನ ಎಫ್‌ಡಿಐ ಶೇಕಡಾವಾರು ಪ್ರಮಾಣದಲ್ಲಿನ ಏರಿಕೆಯೇ ಇದಕ್ಕೆ ಸಾಕ್ಷಿ.
>
> **ಡಾ. ಮುರುಗೇಶ್ ಆರ್ ನಿರಾಣಿ**
> ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

2021–2022ರ ಆರ್ಥಿಕ ವರ್ಷದ ಮೊದಲೆರಡು ತ್ರೈಮಾಸಿಕದಲ್ಲಿ ದೇಶದ ಒಟ್ಟು ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಗಮನಿಸಿದಾಗ ಕರ್ನಾಟಕಕ್ಕೆ ಕ್ರಮವಾಗಿ ಶೇ.48 ಮತ್ತು ಶೇ.41ರಷ್ಟು ಬಂಡವಾಳದ ಹರಿವು ಬಂದಿರುವುದು ರಾಜ್ಯದ ಕೈಗಾರಿಕಾ ಕ್ಷೇತ್ರ ಸಾಗುತ್ತಿರುವ ದಾರಿಗೆ ಸ್ಪಷ್ಟ ದಿಕ್ಸೂಚಿ. ಇಂತಹ ಬಂಡವಾಳ ಹೂಡಿಕೆ ಮಾಡುವ ಸಂದರ್ಭದಲ್ಲಿ ಯಾವ ವಿದೇಶಿ ಕಂಪನಿಯೂ ಕೂಡ ಕಣ್ಮುಚ್ಚಿ ದುಡ್ಡು ಸುರಿಯುವುದಿಲ್ಲ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಈಗಾಗಲೇ ಜಾಗತಿಕ ಮಟ್ಟದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿರುವ ಬೆಂಗಳೂರಿನಲ್ಲಿ ಈಗಾಗಲೇ ಬೇರು ಬಿಟ್ಟಿರುವ ಸ್ಥಳೀಯ ಸಂಸ್ಥೆಗಳ ಒಟ್ಟಾರೆ ಕಾರ್ಯನಿರ್ವಹಣೆ, ಸ್ಥಳೀಯ ಸರ್ಕಾರದ ಹೂಡಿಕೆ ಸ್ನೇಹಿ ನೀತಿಗಳು, ಟೊಂಕಕಟ್ಟಿ ನಿಲ್ಲುವ ಅಧಿಕಾರಶಾಹಿ ಎಲ್ಲವನ್ನೂ ಅಳೆಯುವ ಕೆಲಸವನ್ನು ಈ ಕಂಪನಿಗಳು ಮಾಡಿಯೇ ಮಾಡಿರುತ್ತವೆ. ಕರ್ನಾಟಕದಲ್ಲಿ ಹತ್ತು ಹಲವು ವಲಯಗಳಲ್ಲಿ ಬೆಳೆದು ನಿಂತಿರುವ ಹಲವಾರು ಸಂಸ್ಥೆಗಳು ಹೂಡಿಕೆಯನ್ನು ಮಾಡುವ ವಿದೇಶಿ ಸಂಸ್ಥೆಗಳಿಗೆ ಕನ್ನಡಿಗಳಾಗಿವೆ. ಟೊಯೊಟಾ, ಬೋಯಿಂಗ್, ಇನ್ಫೋಸಿಸ್, ವಿಪ್ರೋದಂತಹ ಸಂಸ್ಥೆಗಳು ನಮ್ಮ ರಾಜ್ಯದ ಪಾಲಿಗೆ ಬ್ರಾಂಡ್ ಅಂಬಾಸಡರ್‌ಗಳಾಗಿವೆ. ಈ ರೀತಿಯ ಪೂರಕ ವಾತಾವರಣ ಇದ್ದ ಕಾರಣಕ್ಕೇ ಬಂಡವಾಳದ ಹರಿವು ಜಾಸ್ತಿಯಾಗಿದೆ ಎಂಬುದು ಸ್ತುತ್ಯರ್ಹ.



Downloaded From:www.kpscvaani.com




ಜಾಗತಿಕ ಹೂಡಿಕೆದಾರರ ಸಮಾವೇಶ–2022 ಉದ್ಘಾಟನೆ ಮಾಡಿದ ಸಂದರ್ಭ.

## ಯಶಸ್ವೀ ಜಾಗತಿಕ ಹೂಡಿಕೆದಾರರ ಸಮಾವೇಶ

608 ಹೊಸ ಯೋಜನೆಗಳಿಗೆ ಅನುಮೋದನೆ. 2,83,415 ಕೋಟಿ ರೂ ಹೂಡಿಕೆ. ಎರಡು ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿ. ಇದು ನವೆಂಬರ್ ತಿಂಗಳಿನಲ್ಲಿ ನಡೆದ ಇನ್ವೆಸ್ಟ್ ಕರ್ನಾಟಕ–2022 ಎಂಬ ಜಾಗತಿಕ ಹೂಡಿಕೆದಾರರ ಸಮಾವೇಶದ ಫಲಿತಾಂಶ. ಇಷ್ಟು ಮಾತ್ರವಲ್ಲದೆ 57 ಯೋಜನೆಗಳ ಒಡಂಬಡಿಕೆಗೆ (ಎಂಓಯು) ಸಹಿ ಹಾಕಲಾಗಿದೆ. ಈ ಯೋಜನೆಗಳು ಜಾರಿಗೆ ಬಂದರೆ ಮುಂದಿನ ದಿನಗಳಲ್ಲಿ 5,41,369 ಕೋಟಿ ರೂ. ಹೂಡಿಕೆ ಹರಿದು ಬರುವ ನಿರೀಕ್ಷೆ ಹೊಂದಲಾಗಿದೆ. ಹಾಗೆ ಸ್ಥಾಪನೆಯಾಗುವ ಯೋಜನೆಗಳಿಂದ 2.85 ಲಕ್ಷ ಉದ್ಯೋಗ ದಕ್ಕುವ ಸಾಧ್ಯತೆ ಇರುತ್ತದೆ.

ಸಮಾವೇಶದಲ್ಲಿ ಪ್ರಮುಖ ಕೈಗಾರಿಕೋದ್ಯಮಿಗಳು ಎರಡು ಯೋಜನೆಗಳಿಗೆ 1,57,000 ಕೋಟಿ ರೂ. ಹೂಡಿಕೆ ಮಾಡುವ ಘೋಷಣೆಯನ್ನು ಮಾಡಿರುತ್ತಾರೆ. ಇದರಿಂದಾಗಿ ಸಮಾವೇಶದಲ್ಲಿ ಒಟ್ಟು 667 ಯೋಜನೆಗಳಿಂದ 9,81,784 ಕೋಟಿ ರೂ. ಹೂಡಿಕೆಯನ್ನು ಆಕರ್ಷಿಸಿರುವುದು ವಿಶೇಷ.

'ಗ್ರೀನ್ ಹೈಡ್ರೋಜನ್ ಮತ್ತು ಡಿರವೇಟಿವ್ಸ್–ತಯಾರಿಕೆ' ಕ್ಷೇತ್ರದಲ್ಲಿ ಏಳು ಕಂಪನಿಗಳು 2.9 ಲಕ್ಷ ಕೋಟಿ ರೂ. ಹೂಡಿಕೆ ಮಾಡಿವೆ. 'ನವೀಕರಿಸಬಹುದಾದ ಇಂಧನ' ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 1.29 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಯ ಎಂಓಯುಗೆ ಸಹಿಹಾಕಲಾಗಿದೆ. ಗಣಿಗಾರಿಕೆ, ಕಬ್ಬಿಣ, ಉಕ್ಕು ಮತ್ತು ಸಿಮೆಂಟ್‌ನಂತಹ ಪ್ರಮುಖ ತಯಾರಿಕಾ ಕ್ಷೇತ್ರಗಳಲ್ಲಿ ಆರು ಕಂಪನಿಗಳು 25 ಸಾವಿರ ಕೋಟಿ ರೂ.ಹೂಡಿಕೆ ಒಪ್ಪಂದಕ್ಕೆ ಸಹಿ ಹಾಕಿವೆ.

ಉನ್ನತ ಮಟ್ಟದ ಅಧಿಕಾರಿಗಳು ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ನಾನಾ ದೇಶಗಳಿಗೆ ಪ್ರವಾಸವನ್ನೂ ಕೈಗೊಳ್ಳುತ್ತಾರೆ, ಅಲ್ಲಿ ಉನ್ನತ ಮಟ್ಟದ ಮಾತುಕತೆಯೂ ನಡೆಯುತ್ತದೆ. ಅವೆಲ್ಲವೂ ಹೂಡಿಕೆಯನ್ನು ಸೆಳೆಯಲು ಇರುವ ಪ್ರಾಥಮಿಕ ಮೆಟ್ಟಿಲುಗಳು. ಆದರೆ ಅದೇ ಸಂಸ್ಥೆಗಳು ಯೋಜನೆ ಪ್ರಸ್ತಾಪಗಳನ್ನು ಹಿಡಿದು ಬಂದಾಗಲೇ ಅದನ್ನು ಅನುಷ್ಠಾನಕ್ಕೆ ತರಲು ಇರುವ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಸರ್ಕಾರದ ನೀತಿಗಳು ಕೈಗಾರಿಕಾ ಸ್ನೇಹಿ ಆಗಿರುವುದಿಲ್ಲ. ಅದಕ್ಕಾಗಿಯೇ ಅನೇಕ ರಾಜ್ಯಗಳ ಕಡೆಗೆ ವಿದೇಶಿ ಸಂಸ್ಥೆಗಳು ಆಸಕ್ತಿಯನ್ನೇ ವಹಿಸುವುದಿಲ್ಲ. ಇದನ್ನು ಮನಗಂಡೇ ಕರ್ನಾಟಕ ಸರ್ಕಾರ ಜಾರಿಗೆ ತಂದಿರುವ ಯೋಜನೆ ಸುಗಮ ಉದ್ಯಮ ಅನುಷ್ಠಾನ (Ease of doing business). 2020ರ ಜೂನ್ ತಿಂಗಳಲ್ಲಿ ಅನುಮೋದನೆ ಪಡೆದ ಹೊಸ ಕೈಗಾರಿಕಾ ಕಾಯ್ದೆಯ ಅಡಿಯಲ್ಲಿ ಎರಡು ಅತ್ಯಂತ ಪ್ರಮುಖ ಸಮಿತಿಗಳನ್ನು ರಚಿಸಲಾಗಿದೆ. ಒಂದು ರಾಜ್ಯ ಮಟ್ಟದ ಉನ್ನತ ಅನುಮೋದನಾ ಸಮಿತಿ (ಎಸ್‌ಎಚ್‌ಎಲ್‌ಸಿಸಿ) ಮತ್ತು ರಾಜ್ಯ ಮಟ್ಟದ ಏಕಗವಾಕ್ಷಿ ಅನಮೋದನಾ ಸಮಿತಿ (ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ).ಈ ಎರಡೂ ಸಮಿತಿಗಳು ಯಾವುದೇ ಯೋಜನಾ ಪ್ರಸ್ತಾಪವನ್ನು ಆದ್ಯತೆಯ ಮೇಲೆ ಅನುಮೋದನೆಗೆ ಕೈಗೆತ್ತಿಕೊಳ್ಳುತ್ತದೆ. ಸರ್ಕಾರದ ಇಂತಹ ನಿರ್ಧಾರಗಳಿಂದ ಹೂಡಿಕೆಯನ್ನು ಆಕರ್ಷಿಸಲೂ, ಯೋಜನೆಯನ್ನು ತ್ವರಿತವಾಗಿ ಜಾರಿಗೆ ತರಲೂ ಹಾದಿ ಸುಗಮವಾದಂತಾಗಿದೆ.

"ಅಫಿದವಿತ್ ಆಧಾರಿತ ಕ್ಲಿಯರೆನ್ಸ್ ಸಿಸ್ಟಮ್" ಕೈಗಾರಿಕೆಗಳ ಪಾಲಿಗೆ ಇನ್ನೊಂದು ಪ್ಲಸ್–ಪಾಯಿಂಟ್. ಇದಕ್ಕಾಗಿ 2002ರ ಕರ್ನಾಟಕ ಕೈಗಾರಿಕಾ (ಸೌಲಭ್ಯಗಳ) ಅಧಿನಿಯಮ ಕಾಯ್ದೆಗೆ ತಿದ್ದುಪಡಿಯನ್ನು ಮಾಡಲಾಗಿದೆ. ಇದರಿಂದಾಗಿ ಕೈಗಾರಿಕೆಗಳು ಪೂರ್ವ ಕಾರ್ಯಾಚರಣೆ ಅನುಮೋದನೆ ಪಡೆದುಕೊಳ್ಳುವುದಕ್ಕೆ ವಿನಾಯ್ತಿ ನೀಡಲಾಗಿದೆ ಮತ್ತು ಉತ್ಪಾದನೆಯ ಸಿದ್ಧತೆಗೆ ನಾನಾ ಸೌಲಭ್ಯಗಳನ್ನು ಹೊಂದಲು ಕೈಗಾರಿಕೆಗಳಿಗೆ ಮೂರು ವರ್ಷಗಳ ವಿನಾಯ್ತಿ ಇರುತ್ತದೆ.

ಕರ್ನಾಟಕದ ವಿಚಾರದಲ್ಲಿ ಇರುವ ಮತ್ತೊಂದು ಪಾಸಿಟಿವ್ ಸಂಗತಿ ಏನೆಂದರೆ ಕೇವಲ ಬೆಂಗಳೂರು ಮಾತ್ರವಲ್ಲ, ಎರಡು ಮತ್ತು ಮೂರನೇ ಸ್ಥರದ ನಗರಗಳಿಗೂ ಕೂಡ ವಿದೇಶಿ ಬಂಡವಾಳ ಹರಿದು ಬಂದಿರುವುದು. ಅಭಿವೃದ್ಧಿ ಎನ್ನುವುದು ಕೇವಲ ಒಂದು ನಿರ್ದಿಷ್ಟ ನಗರ ಅಥವಾ ಕೇಂದ್ರದ ಮೇಲೆ ಭಾರವಾಗಿ ಪರಿಣಮಿಸಬಾರದು. ಅದು ಒಂದು ರಾಜ್ಯ ಎಂಬ ವಿಶಾಲ ವ್ಯಾಪ್ತಿಯನ್ನು ಹೊಂದಿದರೆ ಅದರ ಫಲ ಎಲ್ಲರಿಗೂ ದಕ್ಕುತ್ತಾ ಹೋಗುತ್ತದೆ. ಇದರ ಪೂರ್ಣ ಕ್ರೆಡಿಟ್‌ನ್ನು ಅಭಿವೃದ್ಧಿ ಪರವಾದ ಚಿಂತನೆ ಮತ್ತು ಜನಪರವಾದ ಯೋಚನೆಯನ್ನು ಹೊಂದಿರುವ ಸರ್ಕಾರಿ ವ್ಯವಸ್ಥೆಗೆ ನೀಡಬೇಕಾಗುತ್ತದೆ.

ಕೋವಿಡ್ ಪ್ಯಾಂಡಮಿಕ್ ಉದ್ಯಮ ಕ್ಷೇತ್ರದಲ್ಲಿ ಉಂಟುಮಾಡಿದ ತಲ್ಲಣ ಅಂತಿಂಥದ್ದಲ್ಲ. ಆದರೆ ಅದರಿಂದ ಕರ್ನಾಟಕದ ಕೈಗಾರಿಕಾ ಕ್ಷೇತ್ರ ಚೇತರಿಸಿಕೊಂಡ ರೀತಿ ನಿಜಕ್ಕೂ ಬೆರಗು ಹುಟ್ಟಿಸುವಂತಹದು. ಅಷ್ಟು ಕ್ಷಿಪ್ರ ಗತಿಯಲ್ಲಿ ಚೇತರಿಸಿಕೊಳ್ಳಲು ದೇಶದ ಬೇರೆ ಇನ್ಯಾವ ರಾಜ್ಯಕ್ಕೂ ಸಾಧ್ಯವಾಗಿಲ್ಲ ಎಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಾತಿನಲ್ಲಿ ಸತ್ಯವಿದೆ.



Downloaded From:www.kpscvaani.com

# ಸ್ವಚ್ಛ ಗ್ರಾಮೀಣ ಕರ್ನಾಟಕಕ್ಕೆ ಸಂಕಲ್ಪ

**ಸಮಗ್ರ ಗ್ರಾಮೀಣ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯೊಂದಿಗೆ ಸ್ವಚ್ಛ ಗ್ರಾಮೀಣ ಕರ್ನಾಟಕ ನಿರ್ಮಾಣ ಮಾಡುವುದು ಸರ್ಕಾರದ ಧ್ಯೇಯ.**

ಯಗಟಿ ಮೋಹನ್

ಹಳ್ಳಿಗಳು ಉದ್ಧಾರ ಆಗಬೇಕು. ಆಗಲೇ ದೇಶದ ಪ್ರಗತಿ ಸಾಧ್ಯ. ಇದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಕಂಡ ಕನಸು. ಉತ್ತಮ ರಸ್ತೆ, ಕುಡಿಯಲು ಶುದ್ಧವಾದ ನೀರು, ನೈರ್ಮಲ್ಯ ವ್ಯವಸ್ಥೆ, ದುಡಿಯುವ ಕೈಗಳಿಗೆ ಉದ್ಯೋಗ, ಬೆಳಕು ಮುಂತಾದ ಮೂಲಭೂತ ಸೌಲಭ್ಯಗಳು ದೊರೆತು ಹಳ್ಳಿಗಳು ಅಭಿವೃದ್ಧಿಯಾದರೆ ಅದು ದೇಶದ ಪ್ರಗತಿಗೆ ಮುನ್ನುಡಿ ಎಂಬುದು ಬಾಪೂಜಿ ಅವರ ಆಶಯವಾಗಿತ್ತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗಾಂಧಿ ಅವರ ಆಶಯದಂತೆ ಗ್ರಾಮೀಣ ಜನರ ಬದುಕನ್ನು ಹಸನಾಗಿಸಬೇಕೆಂಬ ಅಭಿಲಾಷೆಯನ್ನು ಹೊಂದಿದ್ದಾರೆ. ಹಾಗಾಗಿ ಅಭಿವೃದ್ಧಿಯನ್ನು ಘೋಷಣೆಗೆ ಮಾತ್ರ ಸೀಮಿತಗೊಳಿಸದೇ, ಅದು ಕಾರ್ಯ ರೂಪಕ್ಕಿಳಿದು ಯಶಸ್ವಿ ಫಲಿತಾಂಶವೂ ದೊರಕುವ ನಿಟ್ಟಿನಲ್ಲಿ ಹಳ್ಳಿಗಳ ಅಭಿವೃದ್ಧಿಗೆ ಕಂಕಣ ತೊಟ್ಟು ಸಮರೋಪಾದಿಯಲ್ಲಿ  ಮುನ್ನಡೆದಿದ್ದಾರೆ.

ಅದೊಂದು ಕಾಲ. ರಾಜ್ಯದ ಲಕ್ಷಾಂತರ ಹಳ್ಳಿಗಳು ಉತ್ತಮ ರಸ್ತೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್, ಸಾರಿಗೆಗಳಂತಹ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದವು. ದೂಳು ತುಂಬಿದ, ಸಂಚಾರಕ್ಕೆ ಸಾಧ್ಯವಿಲ್ಲದ ಗುಂಡಿಗಳೇ ತುಂಬಿದ ರಸ್ತೆಗಳಿಂದ ಕೂಡಿದ್ದು, ಅಭಿವೃದ್ಧಿ ಹಾಗೂ ಮೂಲಭೂತ ಸೌಲಭ್ಯಗಳು ಕನಸಾಗಿದ್ದವು. ಇಂತಹ ಸೌಲಭ್ಯಗಳಿಂದ ದೂರವೇ ಉಳಿದಿದ್ದು ಎಲ್ಲದಕ್ಕೂ ದೂರದ ಪಟ್ಟಣವನ್ನೇ ಅವಲಂಬಿಸಬೇಕಾದ ಸ್ಥಿತಿ ಇತ್ತು. ಶಾಲೆಗಳಿಗೆ ಮಕ್ಕಳು ಹೋಗಬೇಕೆಂದರೂ ದೂರದ ಊರಿಗೆ ನಡೆದೇ





Downloaded From:www.kpscvaani.com



ಹೋಗಬೇಕಿತ್ತು. ಇನ್ನು ಉದ್ಯೋಗವೂ ಮರೀಚಿಕೆಯಾಗಿತ್ತು.

ಆದರೆ ಈಗ ಅಂತಹ ಯಾವುದೇ ಗಂಭೀರ ಸಮಸ್ಯೆಗಳು ಇರುವ ಹಳ್ಳಿಗಳೇ ಇಲ್ಲ ಎಂದರೆ ತಪ್ಪಾಗಲಾರದು. ಜನರಿಗೆ ಉತ್ತರದಾಯಿಯಾಗಿರುವ ಸರ್ಕಾರ ಅಭಿವೃದ್ಧಿ ಕುರಿತಾಗಿ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ. ಸರ್ಕಾರ ನಡೆಸಿದ ಅಭಿವೃದ್ಧಿ ಯೋಜನೆಗಳು, ಒದಗಿಸಿದ ಸೌಕರ್ಯಗಳು ಹಳ್ಳಿಗಾಡಿನ ಜನರಲ್ಲಿ ಆಡಳಿತದ ಕುರಿತು ಭರವಸೆ ಮೂಡಿಸಿದೆ.

ಆಡಳಿತದ ಪ್ರಾರಂಭ ದಿನಗಳಲ್ಲಿ ಎದುರಾದ ಸವಾಲುಗಳು ಅನೇಕ. ಅವನ್ನು ಮೆಟ್ಟಿನಿಂತು ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಮಾಡುವುದು ಸರ್ಕಾರಕ್ಕೆ ದೊಡ್ಡ ಸವಾಲಾಗಿತ್ತು. ಆದರೆ ಆಡಳಿತದ ಈ ಅವಧಿಯಲ್ಲಿ ಎಲ್ಲ ಸಮಸ್ಯೆಗಳನ್ನು ಎದುರಿಸಿ ನಿಂತ ಸರ್ಕಾರವು ಅಭಿವೃದ್ಧಿಯ ಕುರಿತಾದ ತನಗಿರುವ ಪ್ರಾಮಾಣಿಕ ಕಾಳಜಿ, ಕಳಕಳಿಯನ್ನು ಪ್ರದರ್ಶಿಸಿದೆ. ಸರ್ಕಾರ ಕೈಗೆತ್ತಿಕೊಂಡ ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿವೆ.

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ:**

ಹಳ್ಳಿಗಾಡಿನಲ್ಲಿರುವ ದುಡಿಯುವ ಕೈಗಳು ಹತಾಶೆಯಿಂದ ಸುಮ್ಮನೆ ಕೂರಬಾರದು, ದುಡಿಯುವ ಕೈಗಳಿಗೆ ಕೆಲಸ ನೀಡಬೇಕು. ಹಾಗಾದಾಗ ಮಾತ್ರ ರಾಜ್ಯದ ಪ್ರಗತಿ ಸಾಧ್ಯ ಎಂಬ ಚಿಂತನೆ ಸರ್ಕಾರದ್ದು.

ಅದಕ್ಕಾಗೇ ಮಹಾತ್ಮಗಾಂಧಿ ನರೇಗಾ ಯೋಜನೆಯ ಅಡಿಯಲ್ಲಿ ಕೆಲಸ ಮಾಡಲು ಇಚ್ಛಿಸುವ ಪ್ರತಿ ಗ್ರಾಮೀಣ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಕೆಲಸ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಒಂದು ಮಾನವ ದಿನಕ್ಕೆ ರೂ.309/–ಗಳನ್ನು ಕೂಲಿಕಾರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದೆ. ಅಂದರೆ ಇಲ್ಲಿ ಮಧ್ಯವರ್ತಿಗಳ ಹಾವಳಿ ಇಲ್ಲದೇ ದುಡಿದ ಕೂಲಿ ಹಣ ನೇರವಾಗಿ ದುಡಿದವನ ಖಾತೆಗೆ ಸೇರುತ್ತದೆ.

**ಆಸ್ತಿಗಳ ಸೃಜನೆ:**

ಗ್ರಾಮೀಣ ಪ್ರದೇಶಗಳಲ್ಲಿ ದೀರ್ಘಕಾಲಿಕ ಬಾಳಿಕೆ ಬರುವ ಆಸ್ತಿಗಳನ್ನು ಸೃಜನೆ ಮಾಡುವುದು ಮತ್ತು ವೈಯಕ್ತಿಕ ಆಸ್ತಿಗಳನ್ನು ಸೃಜನೆ ಮಾಡುವ ಮೂಲಕ ಗ್ರಾಮೀಣ ಜನರ ಜೀವನಾಧಾರ ಚಟುವಟಿಕೆಗಳನ್ನು ಬಲಪಡಿಸುವುದು ಸರ್ಕಾರ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳಲ್ಲಿ ಒಂದು.

**ಗ್ರಾಮೀಣ ರಸ್ತೆಗಳ ಸುಧಾರಣೆ:**

2022–23ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ರೂ.1829.60 ಕೋಟಿಗಳ ಅನುದಾನ ಮಂಜೂರಾಗಿದ್ದು, ಒಟ್ಟು 5447 ರಸ್ತೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ

ಮಹಾತ್ಮಾ ಗಾಂಧಿ ನರೇಗಾ ಯೋಜನೆಯೊಂದರಲ್ಲಿಯೇ ಅಕ್ಟೋಬರ್ ಅಂತ್ಯದವರೆಗೆ ಸಾಧಿಸಿರುವ ಪ್ರಗತಿಯನ್ನು ಅಂಕಿ ಅಂಶಗಳೇ ಹೇಳುತ್ತವೆ. ಈ ಅವಧಿಯಲ್ಲಿ 2480. 80 ಕೋಟಿ ರೂಗಳನ್ನು ಕೂಲಿ ಮೊತ್ತವಾಗಿ ವಿತರಿಸಲಾಗಿದೆ. ಇದಲ್ಲದೇ ಸಾಮಾಗ್ರಿಗಳಿಗಾಗಿ 1777.54 ಕೋಟಿ ರೂಗಳನ್ನು ವ್ಯಯಿಸಲಾಗಿದೆ. ಒಟ್ಟಾರೆ 4258.42 ಕೋಟಿ ರೂ. ಗಳಷ್ಟು ಆರ್ಥಿಕ ಪ್ರಗತಿಯಾಗಿದೆ. ಇದೊಂದು ದಾಖಲೆ ಎನ್ನಬಹುದು. ಅಕ್ಟೋಬರ್, 2022ರ ಅಂತ್ಯದವರೆಗಿನ ಅಂಕಿ ಅಂಶಗಳನ್ನೇ ಗಣನೆಗೆ ತೆಗೆದುಕೊಂಡರೆ ಒಟ್ಟು 3.58 ಲಕ್ಷ ಕುಟುಂಬಗಳನ್ನು ಹೊಸದಾಗಿ ಸೇರ್ಪಡೆಗೊಳಿಸಿ, ಯೋಜನೆಯಡಿ ಜಾಬ್ ಕಾರ್ಡ್ ವಿತರಿಸಲಾಗಿದೆ. ಈ ಅವಧಿಯಲ್ಲಿ ಒಟ್ಟು 24.52 ಲಕ್ಷ ಕುಟುಂಬಗಳ 43.93 ಲಕ್ಷ ಕೂಲಿಕಾರರಿಗೆ ಉದ್ಯೋಗ ಒದಗಿಸಲಾಗಿದೆ. ಇದೊಂದು ಮಹತ್ವ ಪೂರ್ವ ಸಾಧನೆ.

ಅಭಿವೃದ್ಧಿ ಯೋಜನೆಗಳಲ್ಲಿ ಆಗಿರುವ

**ಆರ್ಥಿಕ ಭದ್ರತಿ ಒದಗಿಸುತ್ತಿರುವ ಉದ್ಯೋಗ ಖಾತರಿ ಯೋಜನೆ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಗ್ರಾಮೀಣ ಜನರಿಗೆ ಉದ್ಯೋಗವನ್ನು ಒದಗಿಸುತ್ತಿರುವ ಸಂಜೀವಿನಿ ಎಂದರೆ ತಪ್ಪಾಗಲಾರದು. ಗ್ರಾಮೀಣ ಭಾಗದ ಜನರ ಜೀವನಕ್ಕೆ ಭದ್ರತೆ ಹೆಚ್ಚಿಸಲು ವರ್ಷದಲ್ಲಿ ಕನಿಷ್ಟ 100 ದಿನಗಳ ಕೆಲಸ ಒದಗಿಸುವ ಗುರಿಯನ್ನು ಈ ಯೋಜನೆಯು ಹೊಂದಿದೆ. ಕೋವಿಡ್–19 ಸಂಕಷ್ಟದಿಂದ ನಗರದಲ್ಲಿ ಕೆಲಸ ಕಳೆದುಕೊಂಡು ಮರಳಿ ತಮ್ಮ ಗ್ರಾಮಗಳಿಗೆ ತೆರಳಿದ ಬಹುಪಾಲು ಜನರಿಗೆ ನರೇಗಾದಡಿ ದುಡಿಮೆಗೆ ಸರ್ಕಾರವು ಅವಕಾಶವನ್ನು ಒದಗಿಸಿಕೊಟ್ಟಿತು. ಇದರಿಂದ ಸಂಕಷ್ಟದಲ್ಲಿದ್ದ ಬಹಳಷ್ಟು ಜನರಿಗೆ ಬದುಕು ನಡೆಸಲು ಸಹಕಾರವಾಯಿತು. ಬಡ ಕುಟುಂಬಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಯೋಜನೆಯು ಅತ್ಯಂತ ಮಹತ್ವದ ಪಾತ್ರವಹಿಸುತ್ತಿದೆ.



Downloaded From:www.kpscvaani.com

ಪ್ರಗತಿಯನ್ನು ಪರಾಮರ್ಶೆ ನಡೆಸುವಾಗ ಆರ್ಥಿಕ ವರ್ಷವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಅದರಂತೆ ಈ ಯೋಜನೆಯಡಿ, ಇಲ್ಲಿಯವರೆಗೆ 14.44 ಲಕ್ಷ ಕಾಮಗಾರಿಗಳನ್ನು ಅನುಷ್ಠಾನಕ್ಕೆ ಕೈಗೆತ್ತಿಕೊಂಡಿದ್ದು, ಅದರಲ್ಲಿ 4.45 ಲಕ್ಷ ಕಾಮಗಾರಿಗಳು ಮುಕ್ತಾಯಗೊಂಡಿದೆ. ಹಾಗೂ 9.99 ಲಕ್ಷ ಕಾಮಗಾರಿಗಳು ಪ್ರಗತಿಯ ವಿವಿಧ ಹಂತಗಳಲ್ಲಿದೆ. ಯೋಜನೆಯಡಿ ಪ್ರಸ್ತುತ ಸಾಲಿನ ಒಟ್ಟು ವೆಚ್ಚದಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳಿಗೆ ಶೇ.72.3 ರಷ್ಟು ವೆಚ್ಚ ಮಾಡಲಾಗಿದೆ. ಇದು ಸರ್ಕಾರದ ಅಭಿವೃದ್ಧಿಯ ವೇಗಕ್ಕೆ ತಾಜಾ ಉದಾಹರಣೆ.




### ಮನೆ ಮನೆಗೆ ಹರಿದ ಗಂಗೆ

ಶುದ್ಧ ಕುಡಿಯುವ ನೀರಿನ ಸೌಲಭ್ಯದಿಂದ ಗ್ರಾಮೀಣ ಜನರು ವಂಚಿತರಾಗಬಾರದು. ನಗರ ವಾಸಿಗರಿಗೆ ಸಿಗುವಂತೆ ಅವರ ಮನೆಯ ಬಾಗಲಿಗೂ ಕುಡಿಯುವ ನೀರಿನ ಸೌಲಭ್ಯ ದೊರಕಬೇಕು ಎಂಬುದು ಸರ್ಕಾರದ ಕಾಳಜಿಯಾಗಿದೆ.

ಕೇಂದ್ರ ಸರ್ಕಾರದ ನೆರವಿನೊಂದಿಗೆ ಜಲಜೀವನ ಮಿಷನ್ ಎಂಬ ಯೋಜನೆಯ ಅನುಷ್ಠಾನವನ್ನು ಕೈಗೆತ್ತಿಕೊಂಡು ರಾಜ್ಯ ಸರ್ಕಾರವು ಬಿರುಸಿನ ಹೆಜ್ಜೆ ಹಾಕಿದೆ. ಈ ಯೋಜನೆ "ಮನೆ ಮನೆಗೆ ಗಂಗೆ" ಎಂಬ ಹೆಸರಿನಲ್ಲಿ ಅನುಷ್ಠಾನಗೊಂಡಿದೆ. ಅಂಕಿ ಅಂಶಗಳೇ ಹೇಳುವಂತೆ ರಾಜ್ಯದಲ್ಲಿ ಒಟ್ಟು 101.18 ಲಕ್ಷ ಗ್ರಾಮೀಣ ಮನೆಗಳಿದ್ದು, ಈ ಎಲ್ಲಾ ಗ್ರಾಮೀಣ ಮನೆಗಳಿಗೆ 2024ರೊಳಗೆ ನಲ್ಲಿ ನೀರು ಸಂಪರ್ಕವನ್ನು ಒದಗಿಸುವ ಗುರಿ ಹೊಂದಲಾಗಿದೆ.

ಜಲ ಜೀವನ್ ಮಿಷನ್ ಯೋಜನೆಯಡಿ 2022-23 ನೇ ಸಾಲಿನಲ್ಲಿ ಒಟ್ಟು 31.98 ಲಕ್ಷ ಗುರಿ ತಲುಪುವ ಸಂಬಂಧ ಅಕ್ಟೋಬರ್-2022 ರ ಅಂತ್ಯಕ್ಕೆ 11.26 ಲಕ್ಷ ಮನೆಗಳಿಗೆ ನಲ್ಲಿ ನೀರು ಸಂಪರ್ಕ ಕಲ್ಪಿಸಲಾಗಿದ್ದು, ಯೋಜನೆ ಜಾರಿಗೆ ಒಟ್ಟು 5478.39 ಕೋಟಿ ರೂಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಅಕ್ಟೋಬರ್-2022 ರ ಅಂತ್ಯಕ್ಕೆ ಒಟ್ಟು ರೂ.1522.25 ಕೋಟಿಗಳ ಅನುದಾನ ಇಲಾಖೆಗೆ ಹಂಚಿಕೆಯಾಗಿದ್ದು, ಜಲ ಜೀವನ್ ಮಿಷನ್ ಯೋಜನೆಗೆ ಸಂಬಂಧಿಸಿದಂತೆ 2022-23 ನೇ ಸಾಲಿನ ಒಟ್ಟು 31.98 ಲಕ್ಷ ಗುರಿಗೆ ಅಕ್ಟೋಬರ್ - 2022 ರ ಅಂತ್ಯಕ್ಕೆ 11.26 ಲಕ್ಷ ಮನೆಗಳಿಗೆ ಕಾರ್ಯಾತ್ಮಕ ನಲ್ಲಿ ನೀರು ಸಂಪರ್ಕ ಕಲ್ಪಿಸಲಾಗಿದೆ. ಗ್ರಾಮೀಣ ಜನರ ಮುಖದಲ್ಲಿ ಇದೀಗ ಮಂದಹಾಸ ಕಾಣುತ್ತಿದೆ. ಜಲ ಜೀವನ್ ಮಿಷನ್ ಯೋಜನೆಗೆ ಸಂಬಂಧಿಸಿದಂತೆ 2018-19 ರಿಂದ 2022-23 ನೇ ಸಾಲಿನಲ್ಲಿ ಅಕ್ಟೋಬರ್ -2022 ರ ಅಂತ್ಯಕ್ಕೆ ಒಟ್ಟು ರೂ.16481.35 ಕೋಟಿಗಳ ಅನುದಾನ ಇಲಾಖೆಗೆ ಬಿಡುಗಡೆಯಾಗಿದ್ದು ಒಟ್ಟು ರೂ.14451.58 ಕೋಟಿಗಳ ವೆಚ್ಚ ಭರಿಸಲಾಗಿದೆ.

### ಸ್ವಚ್ಛ ಗ್ರಾಮೀಣ ಭಾರತ

ಇದು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ. ಭಾರತದ ಹಳ್ಳಿಗಳು ಅನಾದಿ ಕಾಲದಿಂದಲೂ ನಡೆದು ಬಂದಿರುವ ಬಯಲು ಶೌಚಾಲಯ ಪದ್ಧತಿಯಿಂದ ಮುಕ್ತವಾಗಬೇಕು. ಹಳ್ಳಿಗಳ ಜನರು ತಮ್ಮ ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿಕೊಳ್ಳುವ ಮೂಲಕ ವೈಯಕ್ತಿಕ ಸ್ವಚ್ಛತೆ ಜತೆಗೆ ಉತ್ತಮ ಮತ್ತು ಶುದ್ಧ ಪರಿಸರ ರೂಪುಗೊಳ್ಳಲು ಕಾರಣರಾಗಬೇಕು ಎಂಬುದು ಈ ಯೋಜನೆಯ ಒಟ್ಟು ಉದ್ದೇಶ.

ನಾಗರಿಕತೆ ಬೆಳೆದಂತೆ ಹಳ್ಳಿಗಳ ಪರಿಸರದ ಮೇಲೂ ಅದರ ಪರಿಣಾಮ ಬೀರುವುದು ಸಹಜ. ಹಾಗೆಂದು ಅದು ಮಾಲಿನ್ಯಕ್ಕೆ ಕಾರಣ ಆಗಬಾರದು. ಅದರಲ್ಲೂ ಹಳ್ಳಿಗಳ ಪರಿಸರ ಉತ್ತಮವಾಗಿರಬೇಕು ಹಾಗೂ ಆರೋಗ್ಯ ಪೂರ್ಣವಾಗಿರಬೇಕೆಂಬುದು ಸರ್ಕಾರದ ಆಶಯವಾಗಿದೆ.

ಇದು ಬರೀ ಆಶಯಕಷ್ಟೇ ಸೀಮಿತವಾಗಿಲ್ಲ. ಸರ್ಕಾರ ದೃಢ ಸಂಕಲ್ಪದೊಂದಿಗೆ ಗ್ರಾಮೀಣ ಜನರ ಆರೋಗ್ಯ ಕುರಿತಾಗಿ ಕಾಳಜಿ ವಹಿಸುವುದರ ಜತೆಗೆ ಅವರಲ್ಲಿ ಶುಚಿತ್ವದ ಕುರಿತು ಅರಿವು ಮೂಡಿಸುವ ಮೂಲಕ ಸ್ವಚ್ಛ ಪರಿಸರವನ್ನು ನಿರ್ಮಾಣ ಮಾಡಲು ಹೊರಟಿದೆ.

ಗ್ರಾಮೀಣ ಜನರಿಗೆ ಶುಚಿತ್ವದ ಬಗ್ಗೆ ಅರಿವು ಹಾಗೂ ಆರೋಗ್ಯ ಶಿಕ್ಷಣ ನೀಡುವ ಮೂಲಕ ನೈರ್ಮಲ್ಯದ ಅಗತ್ಯತೆಯನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ. ಸ್ವಚ್ಛ




Downloaded From:www.kpscvaani.com



ಹಾವೇರಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಜಿಪಿಎಲ್‌ಎಫ್ ಫಲಾನುಭವಿಗಳಿಗೆ ಸಸಿಗಳ ವಿತರಣೆ.

ಪರಿಸರಕ್ಕಾಗಿ ಜನರಿಂದಲೇ ಬೇಡಿಕೆ ಸೃಷ್ಟಿಸಲಾಗುತ್ತಿದ್ದು, ಗ್ರಾಮೀಣ ಪ್ರದೇಶದ ಎಲ್ಲಾ ಕುಟುಂಬಗಳೂ ಶೌಚಾಲಯ ಹೊಂದುವಂತೆ ಹಾಗೂ ಬಳಸುವಂತೆ ಉತ್ತೇಜಿಸುವ ಮೂಲಕ ಗ್ರಾಮೀಣ ಜನರ ಜೀವನಮಟ್ಟದಲ್ಲಿ ಸುಧಾರಣೆ ತರಲಾಗುತ್ತಿದೆ.

ಹಳ್ಳಿಗಳ ಎಲ್ಲಾ ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ನೈರ್ಮಲ್ಯದ ಸೌಲಭ್ಯಗಳನ್ನು ನಿರ್ಮಿಸುವುದು ಹಾಗೂ ಮಕ್ಕಳಲ್ಲಿ ನೈರ್ಮಲ್ಯದ ಅಭ್ಯಾಸಗಳನ್ನು ರೂಢಿಸುವುದು. ಗ್ರಾಮ ಹಾಗೂ ಸಮುದಾಯ ಮಟ್ಟದಲ್ಲಿಯೇ ತ್ಯಾಜ್ಯಗಳ ಸೂಕ್ತ ವಿಲೇವಾರಿ ಹಾಗೂ ಸಮರ್ಪಕ ನಿರ್ವಹಣೆಯನ್ನು ಅಭಿವೃದ್ಧಿಪಡಿಸುವ ಮೂಲಕ ಇಡೀ ಗ್ರಾಮೀಣ ಪರಿಸರದಲ್ಲಿ ಸಂಪೂರ್ಣ ನೈರ್ಮಲ್ಯವನ್ನು ಸಾಧಿಸುವುದು ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ.

**ಬಹಿರ್ದೆಸೆ ಮುಕ್ತ ಕರ್ನಾಟಕ:**

ಸ್ವಚ್ಛ ಭಾರತ್ ಮಿಷನ್ ಎರಡನೇ ಹಂತದ ಮಾರ್ಗಸೂಚಿಯನ್ವಯ ಬಯಲು ಬಹಿರ್ದೆಸೆ ಮುಕ್ತ ಸ್ಥಿತಿಯನ್ನು ಕಾಪಾಡುವುದು ಈ ಯೋಜನೆಯ ಬಹುದೊಡ್ಡ ಸವಾಲು. ಕಾರಣ ಗ್ರಾಮೀಣ ಜನರ ಪರಂಪರಾನುಗತ ಪದ್ಧತಿಯಲ್ಲಿ ಬದಲಾವಣೆ ತರುವುದರ ಜತೆಗೇ ಅವರಲ್ಲಿ ಶುಚಿತ್ವದ ಅರಿವು ಮೂಡಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಸರ್ಕಾರದ ಮಟ್ಟಿಗೆ ಸವಾಲೆ ಸರಿ. ಹೊಸ ವ್ಯವಸ್ಥೆಯೊಂದನ್ನು ಒಪ್ಪಿಕೊಳ್ಳುವ ಮಟ್ಟಿಗೆ ಅವರನ್ನು ಸುಶಿಕ್ಷಿತರನ್ನಾಗಿಸುವುದು ಆ ಮೂಲಕ ಯೋಜನೆ ಜಾರಿ ಮಾಡುವುದು ಸರ್ಕಾರದ ಉದ್ದೇಶ.

ಈ ಹಿನ್ನೆಲೆಯಲ್ಲಿ ಕೇಂದ್ರ ಜಲ ಶಕ್ತಿ ಮಂತ್ರಾಲಯದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಹಳ್ಳಿಗಳಲ್ಲಿ ಬಯಲು ಬಹಿರ್ದೆಸೆ ಮುಕ್ತ ಸ್ಥಿತಿಯನ್ನು ಕಾಪಾಡಲು ಕೇಂದ್ರ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯ ಮುಂದುವರೆದ ಭಾಗವಾಗಿ ಎರಡನೇ ಹಂತದ ಯೋಜನೆಯನ್ನು 2020–21 ರಿಂದ 2024–25ರ ಅವಧಿಗೆ ಜಾರಿಗೆ ತಂದಿದೆ.

ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮಾರ್ಗಸೂಚಿಯನುಸಾರ ಈ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ಅದರಂತೆ ಹೊಸ ಶೌಚಾಲಯ ರಹಿತ ಮನೆಗಳಿಗೆ ವೈಯಕ್ತಿಕ ಗೃಹ ಶೌಚಾಲಯಗಳ ನಿರ್ಮಾಣ ಯೋಜನೆ ಇದರ ಮುಖ್ಯ ಉದ್ದೇಶ. ಇದಕ್ಕಾಗಿ ಸರ್ಕಾರ ಫಲಾನುಭವಿಗಳಿಗೆ ಪ್ರೋತ್ಸಾಹ ಧನವಾಗಿ ಸಾಮಾನ್ಯ ವರ್ಗದವರಿಗೆ 12000 ರೂಗಳನ್ನು ಪರಿಶಿಷ್ಟ ಜಾತಿ ವರ್ಗದವರಿಗೆ 20000 ರೂ.ನಂತೆ ನೀಡುತ್ತಿದೆ. ಯೋಜನೆ ಅನುಷ್ಠಾನ ಪ್ರಗತಿಯಲ್ಲಿದ್ದು ಗ್ರಾಮೀಣ ಜನತೆಯಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಸರ್ಕಾರದ ಯೋಜನೆಯೊಂದು ಹೇಗೆ ಯಶಸ್ವಿಯಾಗಿ ಜನರನ್ನು ಮುಟ್ಟುತ್ತದೆ ಎಂಬುದಕ್ಕೆ ಇದು ನೇರ ಉದಾಹರಣೆ. ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಯೋಜನೆ ಒಂದು ಕಡೆಯಾದರೆ, ಸಮುದಾಯ ಶೌಚಾಲಯಗಳ ನಿರ್ಮಾಣ ಯೋಜನೆಯನ್ನೂ ಸರ್ಕಾರ ಕೈಗೆತ್ತಿಕೊಂಡಿದೆ.

**ಘನ ಮತು ದ್ರವ ತ್ಯಾಜ್ಯ ನಿರ್ವಹಣೆ:**

ಗ್ರಾಮೀಣ ಮಟ್ಟದಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತಾದ ಯೋಜನೆಯೊಂದನ್ನು ಸರ್ಕಾರ ರೂಪಿಸಿ ಜಾರಿಗೊಳಿಸಿದೆ. ಗ್ರಾಮದ ಜನ ಸಂಖ್ಯೆ ಆಧರಿಸಿ ಅನುದಾನ ಬಿಡುಗಡೆ ಮಾಡುವ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಐನೂರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮ/ಗ್ರಾಮ ಪಂಚಾಯಿತಿಗೆ ಘನ ತ್ಯಾಜ್ಯ ನಿರ್ವಹಣೆಗೆ ಪ್ರತಿ ವ್ಯಕ್ತಿಗೆ ತಲಾ 60 ರೂ. ನಂತೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಐನೂರಕ್ಕಿಂತ ಅಧಿಕ ಜನಸಂಖ್ಯೆ ಇರುವ ಗ್ರಾಮ/ಗ್ರಾಮ ಪಂಚಾಯಿತಿಗೆ ಘನ ತ್ಯಾಜ್ಯ ನಿರ್ವಹಣೆಗೆ ಪ್ರತಿ ವ್ಯಕ್ತಿಗೆ ತಲಾ 45 ರೂಗಳು ಲಭ್ಯವಾಗುತ್ತದೆ. ಇದಲ್ಲದೇ ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಕ್ಕೆ 16

### ಗರ್ಭಿಣಿ ಮತ್ತು ಬಾಣಂತಿಯರಿಗೆ ರಿಯಾಯಿತಿ

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ನೀಡಿ ಗ್ರಾಮೀಣಾಭಿವೃದ್ಧಿ ಇಲಾಖೆಯು ಅಧಿಕೃತ ಜ್ಞಾಪನಾ ಪತ್ರ ಹೊರಡಿಸಿದೆ. 6 ತಿಂಗಳು ತುಂಬಿದ ಗರ್ಭಿಣಿಯರಿಗೆ ಮಗುವಿನ ಜನನದವರೆಗೆ ಹಾಗೂ ಬಾಣಂತಿಯರಿಗೆ ಮಗವಿನ ಜನನದ ದಿನಾಂಕದಿಂದ 6 ತಿಂಗಳವರೆಗೆ ನಿಗದಿತ ಕೂಲಿ ಪಡೆಯಲು ನಿಗದಿಪಡಿಸಲಾದ ಕೆಲಸದ ಪ್ರಮಾಣದಲ್ಲಿ ಶೇ. 50 ರಿಯಾಯಿತಿ ನೀಡಿ ಆದೇಶಿಸಲಾಗಿದೆ. ಈ ರಿಯಾಯಿತಿ ಪಡೆಯಲು ಆರೋಗ್ಯ ಇಲಾಖೆ ನೀಡುವ ತಾಯಿ ಕಾರ್ಡ್ ಅನ್ನು ಆಧಾರವಾಗಿ ಪರಿಗಣಿಸಲಾಗುತ್ತದೆ.



Downloaded From:www.kpscvaani.com



ಮುಖ್ಯಮಂತ್ರಿಗಳು ಹಾಗೂ ಗ್ರಾ.ಅ.&ಪಂ.ರಾಜ್ ಸಚಿವರಿಂದ ಗ್ರಾಮ ಡಿಜಿ ವಿಕಸನ 2022ರ ಉದ್ಘಾಟನೆ.

ಲಕ್ಷ ರೂ ವರೆಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

**ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ:**

ಹಳ್ಳಿಗಳಿಗೂ ಉತ್ತಮ ರಸ್ತೆಗಳು ಬೇಕು ಎಂಬುದು ಸರ್ಕಾರದ ಚಿಂತನೆ. ಗ್ರಾಮೀಣ ಪ್ರದೇಶಗಳ ಅಬಿವೃದ್ಧಿ ಹಾಗೂ ಅಭ್ಯುದಯಕ್ಕಾಗಿ ಗುಣಮಟ್ಟದ ಸರ್ವಋತು ಸಂಪರ್ಕ ರಸ್ತೆಗಳನ್ನು ಮಾಪಕ ಸಂಸ್ಥೆಗಳ ಮಾನದಂಡಕ್ಕನುಗುಣವಾಗಿ ನಿರ್ಮಿಸುವುದು. ಈ ರೀತಿ ನಿರ್ಮಿಸಿದ ರಸ್ತೆಗಳನ್ನು ಉತ್ತಮ ರೀತಿಯಲ್ಲಿ ಐದು ವರ್ಷಗಳವರೆಗೆ ವಾರ್ಷಿಕ ನಿರ್ವಹಣೆಯನ್ನು ಮತ್ತು ಆರನೇ ವರ್ಷದಲ್ಲಿ ಮರು ಡಾಂಬರೀಕರಣವನ್ನು ಈ ಯೋಜನೆಯಡಿ ಹಮ್ಮಿಕೊಳ್ಳಲಾಗುತ್ತದೆ.

ಈಗಾಗಲೇ ಯೋಜನೆಯ ಮೊದಲನೇ ಹಂತದಲ್ಲಿ 16,357.16 ಕಿಮೀ ಉದ್ದದ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ. ಎರಡನೇ ಹಂತದ ಯೋಜನೆ ಅಡಿಯಲ್ಲಿ 2218.16 ಕಿಮೀ ಉದ್ದದ ರಸ್ತೆ ಕಾಮಗಾರಿ ಪೂರ್ಣಗೊಂಡಿವೆ. ಮೂರನೇ ಹಂತದ ಯೋಜನೆಯನ್ನು ಭಾರತ ಸರ್ಕಾರವು ಪಿ.ಎಂ.ಜಿ.ಎಸ್.ವೈ III ಯೋಜನೆಯನ್ನು 2019–20ನೇ ಸಾಲಿನಲ್ಲಿ ಘೋಷಣೆ ಮಾಡಿದ್ದು, ಕರ್ನಾಟಕ ರಾಜ್ಯಕ್ಕೆ 5612.00 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳ ಹಂಚಿಕೆ ಮಾಡಲಾಗಿದೆ. ಈವರೆಗೂ ಹಂತ ಹಂತವಾಗಿ ಒಟ್ಟು 5377.63 ಕಿ.ಮೀ ಉದ್ದದ ರಸ್ತೆ ಹಾಗೂ 101 ಸೇತುವೆ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಅಕ್ಟೋಬರ್ 2022ರ ಅಂತ್ಯದವರೆಗೆ 3836.240 ಕಿ.ಮೀ ಉದ್ದದ ರಸ್ತೆ ಹಾಗೂ 50 ಸೇತುವೆ ಕಾಮಗಾರಿಯನ್ನು 2653.19 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

**ಅಮೃತ ಗ್ರಾಮ ಪಂಚಾಯಿತಿ ಯೋಜನೆ:**

ಭಾರತದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸವಿ ನೆನಪಿಗಾಗಿ ಸ್ವಾತಂತ್ರ್ಯ ದಿನೋತ್ಸವದ ದಿನವಾದ 2021ರ ಅಗಸ್ಟ್ 15 ರಂದು ಮುಖ್ಯಮಂತ್ರಿಗಳು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಘೋಷಿಸಿರುವಂತೆ 2021–22 ನೇ ಸಾಲಿನಲ್ಲಿ "ಅಮೃತ ಗ್ರಾಮ ಪಂಚಾಯಿತಿ ಯೋಜನೆ" ಯನ್ನು ಸೆಪ್ಟೆಂಬರ್ 23 ರಿಂದ ಜಾರಿಗೊಳಿಸಲಾಗಿದೆ. 2022–23 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ 750 ಗ್ರಾಮ ಪಂಚಾಯಿತಿಗಳಲ್ಲಿ ಯೋಜನೆಯ ಎರಡನೇ ಹಂತವನ್ನು ಜಾರಿಗೊಳಿಸಲಾಗಿದೆ. ಆಯ್ದ 750 ಗ್ರಾಮ ಪಂಚಾಯಿತಿಗಳಲ್ಲಿ ಸಮಗ್ರ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಕಡ್ಡಾಯ ಕಾರ್ಯಕ್ರಮಗಳು ಹಾಗೂ ಶಿಫಾರಸ್ಸು ಮಾಡಿದ ಚಟುವಟಿಕೆಗಳನ್ನು ಅನುಷ್ಠಾನ ಮಾಡಲು ಸರ್ಕಾರವು ಉದ್ದೇಶಿಸಿದೆ.

**15ನೇ ಹಣಕಾಸು ಆಯೋಗ ಅನುದಾನ :**

2020–21ನೇ ಸಾಲಿನಿಂದ 2025–26ನೇ ಸಾಲಿನವರೆಗಿನ 5 ವರ್ಷದ ಅವಧಿಗೆ ರೂ.12539.00 ಕೋಟಿಗಳನ್ನು ಭಾರತ ಸರ್ಕಾರವು ನಿಗದಿ ಪಡಿಸಿದೆ. ಅದರಂತೆ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಶೇ.90ರಷ್ಟು ಜನಸಂಖ್ಯೆ ಹಾಗೂ ಶೇ.10ರಷ್ಟು ಭೌಗೋಳಿಕ ಪ್ರದೇಶವನ್ನಾಧರಿಸಿ, ಹಂಚಿಕೆ ಮಾಡಬೇಕೆಂಬ ಷರತ್ತಿಗೊಳಪಟ್ಟು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಅನುಕ್ರಮವಾಗಿ 85:10:5ರ ಅನುಪಾತದಲ್ಲಿ ಅನುದಾನವನ್ನು ಬಿಡುಗಡೆಗೊಳಿಸಲಾಗುತ್ತದೆ.

2022–23ನೇ ಸಾಲಿಗೆ 15ನೇ ಹಣಕಾಸು ಆಯೋಗ ಅನುದಾನದಲ್ಲಿ ನಿಗದಿಪಡಿಸಿರುವ ಒಟ್ಟು ರೂ. 246300.00 ಲಕ್ಷಗಳಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ರೂ.1 65291.00 ಲಕ್ಷಗಳನ್ನು, ತಾಲ್ಲೂಕು ಪಂಚಾಯತಿಗಳಿಗೆ ರೂ.7131.00 ಲಕ್ಷಗಳನ್ನು ಹಾಗೂ ಜಿಲ್ಲಾ ಪಂಚಾಯತಿ ಗಳಿಗೆ ರೂ.3565.50 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.

**ಅನಿರ್ಬಂಧಿತ ಅನುದಾನ:**

2022–23ನೇ ಸಾಲಿಗೆ ಜಿಲ್ಲಾ ಪಂಚಾಯತಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ರಾಜ್ಯ ಹಣಕಾಸು ಆಯೋಗ ಜಿಲ್ಲಾ ಪಂಚಾಯತಿ ಅನಿರ್ಬಂಧಿತ ಅನುದಾನದಡಿ ನಿಗದಿಪಡಿಸಿರುವ ಒಟ್ಟು ರೂ.17507.24 ಲಕ್ಷಗಳಲ್ಲಿ ರಾಜ್ಯದ ಜಿಲ್ಲಾ ಪಂಚಾಯತಿಗಳಿಗೆ ರೂ.8753.62 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಹಾಗೆಯೇ 2022–23ನೇ ಸಾಲಿಗೆ ತಾಲ್ಲೂಕು ಪಂಚಾಯತಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ರಾಜ್ಯ ಹಣಕಾಸು ಆಯೋಗ ತಾಲ್ಲೂಕು ಪಂಚಾಯತಿ ಅನಿರ್ಬಂಧಿತ ಅನುದಾನದಡಿ ನಿಗದಿಪಡಿಸಿರುವ ಒಟ್ಟು ರೂ.51638.41 ಲಕ್ಷಗಳಲ್ಲಿ ರಾಜ್ಯದ ತಾಲ್ಲೂಕು ಪಂಚಾಯತಿಗಳಿಗೆ ರೂ.25819.20 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

ಗ್ರಾಮೀಣ ಮಟ್ಟದ ಸ್ಥಳೀಯ ಸಂಸ್ಥೆಗಳು ಸಶಕ್ತೀಕರಣಗೊಳ್ಳಬೇಕು ಎಂಬ ಆಶಯದಿಂದ ಗ್ರಾಮ ಸ್ವರಾಜ್ ಅಭಿಯಾನ ಯೋಜನೆಯಡಿ ಪಂಚಾಯ್ತಿ ವ್ಯವಸ್ಥೆಯನ್ನು ಮತ್ತಷ್ಟು ಬಲಯುತಗೊಳಿಸುವ ಕಾರ್ಯಕ್ಕೆ ರಾಜ್ಯ ಸರ್ಕಾರವು ಮುಂದಾಗಿದೆ. ಒಟ್ಟಿನಲ್ಲಿ ಈ ಎಲ್ಲಾ ಯೋಜನೆಗಳ ಮೂಲಕ ಗ್ರಾಮೀಣ ಜನರ ಬದುಕನ್ನು ಹಸನುಗೊಳಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ಮುನ್ನಡೆದಿದೆ.



Downloaded From:www.kpscvaani.com





## ಡಾ ವಿಷ್ಣುವರ್ಧನ್ ಸ್ಮಾರಕ :

# ಅಭಿಮಾನಿಗಳ ಪಾಲಿನ ನಾಕ !

ಡಿ. ಪಿ. ಮುರಳೀಧರ್

ಕಲಾವಿದರಿಗೆ ಅಭಿಮಾನಿಗಳೇ ದೇವರು ! ಅಂತೆಯೇ, ಅಭಿಮಾನಿಗಳಿಗೆ ಕಲಾವಿದರೇ ದೇವರು !! ಮಾಧ್ಯಮಗಳಲ್ಲಿಯೇ ಅತ್ಯಂತ ಪ್ರಭಾವಿ ಮಾಧ್ಯಮ ಎನಿಸಿರುವ ಚಿತ್ರೋದ್ಯಮದಲ್ಲಂತೂ ಈ ಮಾತು ಅಕ್ಷರಶಃ ನಿಜ !!!

ಒಂದು ನೂರಾ ಹತ್ತು ವರ್ಷಗಳ ಹಿಂದೆ ಅಂದರೆ 1913 ರಲ್ಲಿ ನಿರ್ಮಾಣಗೊಂಡ ಮೊದಲ ಚಿತ್ರ ರಾಜಾ ಹರಿಶ್ಚಂದ್ರ ಬೆಳ್ಳಿತೆರೆ ಏರಿದ ದಿನದಿಂದ ಇಂದಿನವರೆಗೂ ಆಗಸದಲ್ಲಿ ಇರುವಷ್ಟೇ ತಾರೆಗಳು ಭಾರತೀಯ ಚಿತ್ರರಂಗದಲ್ಲಿಯೂ ಕಾಣಿಸಿಕೊಂಡಿರುವುದು ಮಾತ್ರವಲ್ಲ, ಚಿತ್ರ ರಸಿಕರ ಹೃನ್ಮನಗಳಲ್ಲಿಯೂ ವಿಶೇಷ ಸ್ಥಾನ ಗಳಿಸಿರುವುದು ಸತ್ಯ.

ಸರಿ ಸುಮಾರು ತೊಂಬತ್ತು ವರ್ಷಗಳ ಅಂದರೆ 1934 ರಲ್ಲಿ ತೆರೆ ಕಂಡ ಕನ್ನಡದ ಮೊದಲ ವಾಕ್ಚಿತ್ರ, ಸತಿ ಸುಲೋಚನ ಚಿತ್ರದಿಂದ ಈವರೆಗೂ ತೆರೆ ಕಂಡ ಎಲ್ಲಾ ಚಿತ್ರಗಳಲ್ಲಿ ಅಭಿನಯಿಸಿದ ನಟ-ನಟಿಯರನ್ನು ಕಲಾ ರಸಿಕರು ಪ್ರೀತಿಸಿದ್ದಾರೆ, ಗೌರವಿಸಿದ್ದಾರೆ. ಈ ಎಲ್ಲಾ ಕಲಾವಿದರಲ್ಲಿ ಹಲವರು ಹಣ ಗಳಿಸಲಾಗದಿದ್ದರೂ, ಹೆಸರನ್ನಂತೂ ಸಂಪಾದಿಸಿದ್ದಾರೆ.

ಕನ್ನಡ ಚಿತ್ರರಂಗದಲ್ಲಿ ಹಣ ಮತ್ತು ಹೆಸರು ಎರಡನ್ನೂ ಗಳಿಸಿ ಮಿಂಚಿ ಮರೆಯಾದ ಮೇರು ನಟರಲ್ಲಿ ಡಾ ವಿಷ್ಣುವರ್ಧನ್ ಪ್ರಮುಖರು.

**ಮೈಸೂರು ಜಿಲ್ಲೆ : ಚಿತ್ರರಂಗದ ತವರು !**

ಹೌದು ! ಅರಮನೆ ನಗರಿಯನ್ನೆ ಜಿಲ್ಲಾ ಕೇಂದ್ರವನ್ನಾಗಿಸಿಕೊಂಡಿರುವ ಮೈಸೂರು ಜಿಲ್ಲೆ ಎಂದರೆ ಕನ್ನಡ ಚಿತ್ರರಂಗದ ತವರೂರು. ನಾಯಕ ನಟರಾದ ಡಾ ರಾಜ್ ಕುಮಾರ್ ಮತ್ತು ಡಾ ವಿಷ್ಣು ವರ್ಧನ್ ಮೈಸೂರು ಜಿಲ್ಲೆಯಲ್ಲೇ ಜನಿಸಿದರೆ ಡಾ ಅಂಬರೀಶ್ ಅವರು ಇಲ್ಲೇ ವ್ಯಾಸಂಗ ಮಾಡಿದ್ದು. ಕೆ ಎಸ್ ಅಶ್ವಥ್, ಎಂ ಪಿ ಶಂಕರ್, ತೂಗುದೀಪ ಶ್ರೀನಿವಾಸ್, ಸಂಪತ್, ಜೈ ಜಗದೀಶ್ ಮತ್ತು ರಾಜಾನಂದ್ ಸೇರಿದಂತೆ ಹಲವು ಪೋಷಕ ನಟರೂ ಕೂಡಾ ಹುಟ್ಟಿ ಬೆಳೆದದ್ದೂ ಮೈಸೂರಿನಲ್ಲೇ.

Downloaded From:www.kpscvaani.com



ಡಿ ಶಂಕರ್ ಸಿಂಗ್, ಜಿ ವಿ ಅಯ್ಯರ್, ಹುಣಸೂರು ಕೃಷ್ಣಮೂರ್ತಿ, ಪುಟ್ಟಣ್ಣ ಕಣಗಾಲ್, ಹೆಚ್ ಆರ್ ಭಾರ್ಗವ (ಭಾಗ್ಯ ಚಂದ್ರ), ಕೆ ಎಸ್ ಎಲ್ ಸ್ವಾಮಿ (ರವೀ), ಎಸ್ ವಿ ರಾಜೇಂದ್ರ ಸಿಂಗ್ ಬಾಬು ಒಳಗೊಂಡಂತೆ ಪ್ರಭಾವೀ ನಿರ್ದೇಶಕರು ಅರಮನೆ ನಗರಿಯವರು. ಪ್ರತಿಭೆಯ ಪ್ರಭೆ ನಟ ನಿರ್ಮಾಪಕ ಬಿ ಎಸ್ ದ್ವಾರಕೀಶ್. ರಾಜನ್-ನಾಗೇಂದ್ರ ಅಂತಹ ಪ್ರತಿಭಾವಂತ ಸಂಗೀತ ನಿರ್ದೇಶಕರು ಮೈಸೂರಿನವರು. ಕಣಗಾಲ್ ಪ್ರಭಾಕರ ಶಾಸ್ತ್ರಿ ಮತ್ತು ಆರ್ ಎನ್ ಜಯಗೋಪಾಲ್ ಅವರಂತಹ ಚಿತ್ರ ಸಾಹಿತಿಗಳು ಹುಟ್ಟಿ ಬೆಳೆದ ನೆಲ ಮೈಸೂರು. ಅರಮನೆ ನಗರಿಯಲ್ಲಿ ಪ್ರೀಮಿಯರ್ ಸ್ಟುಡಿಯೋ ಹೆಸರಿನಲ್ಲಿ ಸ್ಟುಡಿಯೋ ನಿರ್ಮಿಸಿದ ಎಂ ಎನ್ ಬಸವರಾಜಯ್ಯ ಅವರೂ ಮೈಸೂರಿನವರೇ. ಹೀಗೆ ದಾಖಲಿಸುತ್ತಾ ಹೋದರೆ, ಮೈಸೂರಿಗರ ಪ್ರತಿಭೆ ಅನಾವರಣಗೊಳ್ಳುತ್ತಲೇ ಇರುತ್ತದೆ. ಇದಕ್ಕೆ ವಿರಾಮವೇ ಇರುವುದಿಲ್ಲ !

**ಮೈಸೂರಿನ ಸಂಪತ್ತು ಕರ್ನಾಟಕದ ಸಂಪತ್ತು ಆದದ್ದು ಹೀಗೆ !**

ಕನ್ನಡ ಚಿತ್ರರಂಗದ ಸಾಹಿತಿ ಹಾಗೂ ಸಂಭಾಷಣಾಕಾರ ಹೆಚ್ ಎಲ್ ನಾರಾಯಣ ರಾವ್ ಮತ್ತು ಆಕಾಶವಾಣಿ ಕಲಾವಿದೆ ಕಾಮಾಕ್ಷಮ್ಮ ಅವರ ಪುತ್ರನಾಗಿ 1950 ರ ಸೆಪ್ಟೆಂಬರ್ 18 ರಂದು ಮೈಸೂರಿನಲ್ಲಿ ಜನಿಸಿದ ಸಂಪತ್ ಕುಮಾರ್ ಬಾಲ ನಟರಾಗಿ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದರು.

ಮೊದಲು 1955 ರಲ್ಲಿ ತೆರೆ ಕಂಡ ಶಿವಶರಣೆ ನಂಬಿಯಕ್ಕ ಹಾಗೂ 1956 ರಲ್ಲಿ ತೆರೆ ಕಂಡ ಕೋಕಿಲ ವಾಣಿ ಚಿತ್ರಗಳಲ್ಲಿ ಸಂಪತ್ ಕುಮಾರ್ ಕಾಣಿಸಿಕೊಂಡದ್ದು. ನಂತರ, ಯುವ ನಟನಾಗಿ ಕಂಡದ್ದು ಗಿರೀಶ್ ಕಾರ್ನಾಡ್ ಮತ್ತು ಬಿ ವಿ ಕಾರಂತ್ ಅವರ ವಂಶ ವೃಕ್ಷ ಚಿತ್ರದಲ್ಲಿ. ತದ ನಂತರ, ಮಿಂಚಿದ್ದು 1972 ರಲ್ಲಿ ತೆರೆ ಕಂಡ ಪುಟ್ಟಣ್ಣ ಕಣಗಾಲ್ ಅವರ ನಾಗರ ಹಾವು ಚಿತ್ರದಲ್ಲಿ ಮಿಂಚಿದ್ದು ಮಾತ್ರವಲ್ಲ, ವಿಷ್ಣುವರ್ಧನ್ ಎಂಬ ಹೆಸರಿನಲ್ಲಿ ಜನಪ್ರಿಯತೆ ಗಳಿಸಿ, ತಮ್ಮದೇ ಆದ ಪ್ರೇಕ್ಷಕ ವರ್ಗವನ್ನು ಸೃಷ್ಟಿಸಿಕೊಂಡರು.

ಜಾತಿಗಿಂತಲೂ ಪ್ರೀತಿ ದೊಡ್ಡದು, ಪ್ರೀತಿಗಿಂತಲೂ ಅಕ್ಷರ ಕಲಿಸಿದ ಗುರುವಿನ ಮಾತು ದೊಡ್ಡದು ಎಂಬ ಸಾರಾಂಶವನ್ನು ಒಳಗೊಂಡ ನಾಗರ ಹಾವು ಚಿತ್ರದಲ್ಲಿ ರಾಮಾಚಾರಿ ಹೆಸರಿನ ಕೋಪೋದ್ರಿಕ್ತ ಯುವಕ (ಆಂಗ್ರಿ ಯಂಗ್ ಮ್ಯಾನ್) ನ ಪಾತ್ರಕ್ಕೆ ಜೀವ ತುಂಬಿದ್ದ ವಿಷ್ಣುವರ್ಧನ್ ಚಿತ್ರದ ಯಶಸ್ಸಿಗೆ ಕಾರಣರಾದರು.

ನಾಗರ ಹಾವು ಚಿತ್ರದಲ್ಲಿ ಬಾರೇ ಬಾರೇ ಚಂದದ ಚೆಲುವಿನ ತಾರೇ_..... ಬಾರೇ ಬಾರೇ ಒಲವಿನ ಚಿಲುಮೆಯ ಧಾರೇ_.. ಕನ್ನಡ ಭಾಷೆಯಲ್ಲಿ ನಿಧಾನ ಚಲನೆ (ಸ್ಲೋ ಮೋಷನ್) ಯಲ್ಲಿ ಚಿತ್ರೀಕರಿಸಿದ ಮೊದಲ ಹಾಡು. ಈ ಚಿತ್ರವು ಅತೀ ಹೆಚ್ಚು ದಿನಗಳ ಕಾಲ ತುಂಬು ಗೃಹಗಳಲ್ಲಿ ಪ್ರದರ್ಶನಗೊಂಡ ಚಿತ್ರ ಎಂಬ ಖ್ಯಾತಿಗೂ ಪಾತ್ರವಾಯಿತು.

ಅಂತೆಯೇ, ನಾಗರ ಹಾವು ಚಿತ್ರವು ಅದೇ ವರ್ಷ ತೆರೆ ಕಂಡ ಚಿತ್ರಗಳಲ್ಲಿ ದ್ವಿತೀಯ ಅತ್ಯುತ್ತಮ ಚಿತ್ರ ಎಂದು ರಾಜ್ಯ ಸರ್ಕಾರದಿಂದ ಮನ್ನಣೆ ಪಡೆಯಿತು. ಅಲ್ಲದೆ, ಅತ್ಯುತ್ತಮ ನಾಯಕ ನಟನಾಗಿ ವಿಷ್ಣುವರ್ಧನ್, ಅತ್ಯುತ್ತಮ ನಾಯಕಿ ನಟಿಯಾಗಿ ಆರತಿ, ಅತ್ಯುತ್ತಮ ಪೋಷಕ ನಟರಾಗಿ ಕೆ ಎಸ್ ಅಶ್ವಥ್, ಅತ್ಯುತ್ತಮ ಪೋಷಕ ನಟಿಯಾಗಿ ಶುಭ, ಶ್ರೇಷ್ಠ ಕಥಾ ಲೇಖಕರಾಗಿ ತ ರಾ ಸುಬ್ಬರಾವ್, ಶ್ರೇಷ್ಠ ಚಿತ್ರಕಥೆಗಾರರಾಗಿ ಪುಟ್ಟಣ್ಣ ಕಣಗಾಲ್, ಅತ್ಯುತ್ತಮ ಸಂಭಾಷಣಾಕಾರರಾಗಿ ಚಿ ಉದಯ ಶಂಕರ್ ಹೀಗೆ ಈ ಚಿತ್ರಕ್ಕೆ ಪ್ರಶಸ್ತಿಗಳ ಸರಮಾಲೆಯೇ ಲಭಿಸಿತು.

ನಾಗರಹಾವು ಚಿತ್ರದಿಂದ ಪ್ರಾರಂಭಗೊಂಡ ವಿಷ್ಣುವರ್ಧನ್ ಅವರ ಯಶೋಗಾಥೆ ಕೊನೆಯ ಉಸಿರು ಇರುವವರೆಗೂ ಮುಂದುವರೆಯಿತು. ವಿಷ್ಣುವರ್ಧನ್ ಅವರು ಎರಡು ನೂರು ಚಿತ್ರಗಳಿಗೂ ಹೆಚ್ಚು ಕನ್ನಡ ಭಾಷೆಯ ಚಿತ್ರಗಳಲ್ಲಿ ಅಭಿನಯಿಸಿ, ತಮಿಳು, ತೆಲುಗು, ಮಲೆಯಾಳಂ ಮಾತ್ರವಲ್ಲದೆ ಹಿಂದಿ ಚಿತ್ರರಂಗದಲ್ಲೂ ತಮ್ಮ ಅಭಿನಯದ ಕಲಾ ಕೌಶಲವನ್ನು ತೋರಿ ಯಶಸ್ಸಿನ ಮೆಟ್ಟಿಲುಗಳನ್ನು ಏರುತ್ತಾ ದಾಖಲೆಯ ಮೇಲೆ ದಾಖಲೆಯನ್ನು ಸ್ಥಾಪಿಸ ಹೊರಟರೇ ವಿನಃ ಎಂದೂ ಸೋಲಿನತ್ತ ಹಿಂತಿರುಗಿ ನೋಡಲೇ ಇಲ್ಲ ! ವಿಷ್ಣುವರ್ಧನ್ ಅವರು ಒಟ್ಟಾರೆ 220 ಚಿತ್ರಗಳಲ್ಲಿ ನಟಿಸಿದ್ದಾರೆ ಎಂಬುದು ಕನ್ನಡಿಗರಲ್ಲಿ ಅಭಿಮಾನ ಚಿಮ್ಮಿಸುವ ವಿಷಯ. ಅಷ್ಟೇ ಅಲ್ಲ ! ಹೆಮ್ಮೆ ಮೂಡಿಸುವ ವಿಚಾರವೂ ಹೌದು !!

**ಆಡು ಮುಟ್ಟದ ಸೊಪ್ಪು !**

ಕನ್ನಡ ಚಿತ್ರರಂಗದಲ್ಲಿ ಮೂರೂವರೆ ದಶಕಗಳ ತಮ್ಮ ಪಯಣದಲ್ಲಿ ಆಡು ಮುಟ್ಟದ ಸೊಪ್ಪಿಲ್ಲ ವಿಷ್ಣುವರ್ಧನ್ ಅವರ ಜೊತೆಗೆ ಅಭಿನಯಿಸದ ನಟ-ನಟಿಯರೇ ಇಲ್ಲ ಎಂಬುದು ಪ್ರಚಲಿತ ಮಾತು. ಉದಾಹರಣೆಗೆ : ಗಂಧದ ಗುಡಿ ಚಿತ್ರದಲ್ಲಿ ನಟ ಸಾರ್ವಭೌಮ ಡಾ ರಾಜ್ ಕುಮಾರ್, ಕಿಲಾಡಿ ಜೋಡಿ ಚಿತ್ರದಲ್ಲಿ ಪ್ರಣಯ ರಾಜ ಶ್ರೀನಾಥ್, ಭೂತಯ್ಯನ ಮಗ ಅಯ್ಯು ಚಿತ್ರದಲ್ಲಿ ಲೋಕೇಶ್, ದೇವರ ಗುಡಿ ಚಿತ್ರದಲ್ಲಿ ರಾಜೇಶ್, ದಿಗ್ಗಜರು ಚಿತ್ರದಲ್ಲಿ ಅಂಬರೀಶ್, ಸಹೋದರರ ಸವಾಲ್ ಚಿತ್ರದಲ್ಲಿ ರಜನೀಕಾಂತ್, ಮತ್ತೆ ಹಾಡಿತು ಕೋಗಿಲೆ ಚಿತ್ರದಲ್ಲಿ ಅನಂತ್ ನಾಗ್, ಕಾರ್ಮಿಕ ಕಳ್ಳನಲ್ಲ ಚಿತ್ರದಲ್ಲಿ ಶಂಕರ್ ನಾಗ್, ಕಳ್ಳ ಕುಳ್ಳ ಚಿತ್ರದಲ್ಲಿ





Downloaded From:www.kpscvaani.com



ದ್ವಾರಕೀಶ್, ಪ್ರೇಮಲೋಕ ಚಿತ್ರದಲ್ಲಿ ರವಿಚಂದ್ರನ್, ಬಂಧನ ಚಿತ್ರದಲ್ಲಿ ಜೈ ಜಗದೀಶ್, ವಿದುತಲೈ ಎಂಬ ಹೆಸರಿನ ತಮಿಳು ಚಿತ್ರದಲ್ಲಿ ತಮಿಳು ಚಿತ್ರರಂಗದ ಮೇರು ನಟ ನಡಿಗರ್ ತಿಲಕಂ ಶಿವಾಜಿ ಗಣೇಶನ್ ಅವರೊಂದಿಗೆ, ಶ್ರೀ ರಾಘವೇಂದ್ರರ್ ತಮಿಳು ಚಿತ್ರದಲ್ಲಿ ರಜನೀಕಾಂತ್ ಅವರ ಜೊತೆಗೆ, ಜಾಲಿಮ್ ಹಿಂದಿ ಚಿತ್ರದಲ್ಲಿ ಬಾಲಿವುಡ್ ನಟ ಅಕ್ಷಯ್ ಕುಮಾರ್ ಅವರೊಡನೆ ಹೀಗೆ ಪ್ರಮುಖ ನಟರೊಂದಿಗೆ ವಿಷ್ಣುವರ್ಧನ್ ಅಭಿನಯಿಸಿದ್ದಾರೆ.

ಭಾಗ್ಯ ಜ್ಯೋತಿ, ದೇವರ ಗುಡಿ ಮತ್ತು ಒಂದೇ ರೂಪ ಎರಡು ಗುಣ ಚಿತ್ರಗಳಲ್ಲಿ ಭಾರತಿ, ನಾಗರ ಹಾವು ಮತ್ತು ಹೊಂಬಿಸಿಲು ಚಿತ್ರಗಳಲ್ಲಿ ಆರತಿ, ಭೂತಯ್ಯನ ಮಗ ಅಯ್ಯು ಚಿತ್ರದಲ್ಲಿ ಶುಭ, ಕಿಟ್ಟು ಪುಟ್ಟು ಚಿತ್ರದಲ್ಲಿ ಮಂಜುಳಾ, ಬಂಧನ, ಮುತ್ತಿನ ಹಾರ ಮತ್ತು ಸುಪ್ರಭಾತ ಚಿತ್ರಗಳಲ್ಲಿ ಸುಹಾಸಿನಿ, ಹಿಂದಿ ಭಾಷೆಯ ಏಕ್ ನಯಾ ಇತಿಹಾಸ್ ಚಿತ್ರದಲ್ಲಿ ಕನಸಿನ ರಾಣಿ ( ಡ್ರೀಮ್ ಗರ್ಲ್ ) ಎಂಬ ಖ್ಯಾತಿಯ ಹೇಮಾ ಮಾಲಿನಿ, ಆಪ್ತಮಿತ್ರ ಚಿತ್ರದಲ್ಲಿ ಸೌಂದರ್ಯ, ಚಿನ್ನದಂತ ಮಗ ಚಿತ್ರದಲ್ಲಿ ಮಾಧವಿ, ಯಜಮಾನ ಚಿತ್ರದಲ್ಲಿ ಪ್ರೇಮಾ ಅವರೊಂದಿಗೆ ವಿಷ್ಣುವರ್ಧನ್ ಅಭಿನಯಿಸಿದ್ದಾರೆ.

ಕನ್ನಡ ಭಾಷೆಯ ಪ್ರಪ್ರಥಮ ಸಿನಿಮಾ ಸ್ಕೋಪ್ ಚಿತ್ರ ಸೊಸೆ ತಂದ ಸೌಭಾಗ್ಯ ದ ತಾರಾಗಣದಲ್ಲಿ ವಿಷ್ಣುವರ್ಧನ್ ನಾಯಕ ನಟರಾಗಿ ಕಾಣಿಸಿಕೊಂಡಿದ್ದಾರೆ. ಕನ್ನಡ ಭಾಷೆಯಲ್ಲಿ ಪ್ರಪ್ರಥಮ ಬಾರಿಗೆ

**ಕಲಾವಿದನಿಗೆ ಗೌರವ**

ಸಾಹಸ ಸಿಂಹನ ಗೌರವಾರ್ಥ ಬೆಂಗಳೂರಿನ ಬನಶಂಕರಿಯಿಂದ ಕೆಂಗೇರಿವರೆಗೆ ಸಂಪರ್ಕ ಕಲ್ಪಿಸುವ 14.4 ಕಿ ಮೀ ಉದ್ದದ ರಸ್ತೆಗೆ ಡಾ ವಿಷ್ಣುವರ್ಧನ್ ರಸ್ತೆ ಎಂದು ನಾಮಕರಣ ಮಾಡಲಾಗಿದೆ. ಇದು ಓರ್ವ ಕಲಾವಿದನ ಹೆಸರಲ್ಲಿ ನಾಮಕರಣ ಮಾಡಿರುವ ಭಾರತದಲ್ಲೇ ಅತೀ ಉದ್ದದ ರಸ್ತೆಯಾಗಿದೆ.

ವಿದೇಶದಲ್ಲಿ ಚಿತ್ರೀಕರಣಗೊಂಡ ಸಿಂಗಾಪುರದಲ್ಲಿ ರಾಜಾ ಕುಳ್ಳ ಚಿತ್ರದಲ್ಲೂ ವಿಷ್ಣುವರ್ಧನ್ ಅವರೇ ನಾಯಕ ನಟರು. ವಿಷ್ಣುವರ್ಧನ್ ಅವರ ದ್ವಿ–ಪಾತ್ರಾಭಿನಯದ ಚಿತ್ರಗಳಲ್ಲಿ ಒಂದೇ ರೂಪ ಎರಡು ಗುಣ, ಶಿವ ಶಂಕರ್, ವಿಜಯ್ ವಿಕ್ರಂ ಹಾಗೂ ಲಯನ್ ಜಗಪತಿ ರಾವ್ ಗಮನಾರ್ಹ. ಸತ್ಯಂ, ಶಿವಂ, ಸುಂದರಂ ಮತ್ತು ಸಿಂಹಾದ್ರಿ ಸಿಂಹ ಚಿತ್ರಗಳಲ್ಲಿ ವಿಷ್ಣುವರ್ಧನ್ ಅವರು ತ್ರಿ–ಪಾತ್ರದಲ್ಲಿ ನಟಿಸಿದ್ದಾರೆ ಎಂಬುದೂ ದಾಖಲಾರ್ಹ. ವಿಷ್ಣುವರ್ಧನ್ ಅವರು ಅಭಿನಯಿಸಿದ ಅತೀ ಹೆಚ್ಚು ಚಿತ್ರಗಳು ಅಂದರೆ 23 ಚಿತ್ರಗಳನ್ನು ನಿರ್ದೇಶಿಸಿದ ಕೀರ್ತಿ ಹೆಚ್ ಆರ್ ಭಾರ್ಗವ ಅವರಿಗೆ ಸಲ್ಲುತ್ತದೆ.

**ನಾಯಕ ಮತ್ತು ಗಾಯಕ !**

ಗಾನ ಗಂಧರ್ವ ಡಾ ರಾಜ್ ಕುಮಾರ್ ಅವರಂತೆಯೇ ವಿಷ್ಣುವರ್ಧನ್ ಅವರೂ ಕೂಡಾ ನಾಯಕರಲ್ಲಿ ಗಾಯಕರು ಹಾಗೂ ಗಾಯಕರಲ್ಲಿ ನಾಯಕರು ಆಗಿದ್ದರು.ಪ್ರಪ್ರಥಮ ಬಾರಿಗೆ ನಾಗರ ಹೊಳೆ ಚಿತ್ರದಲ್ಲಿ ಈ ನೋಟಕೆ ಮೈ ಮಾಟಕೆ ಹಾಡನ್ನು ಹಾಡಿದ ವಿಷ್ಣುವರ್ಧನ್ ಅವರು ಕಿಲಾಡಿ ಕಿಟ್ಟು ಚಿತ್ರದ ಮಡಿಲಲ್ಲಿ ಮಗುವಾಗಿ ನಾನು, ಜಿಮ್ಮಿಗಲ್ಲು ಚಿತ್ರದ ತುತ್ತು ಅನ್ನ ತಿನ್ನೋಕೆ ಬೊಗಸೇ ನೀರು ಕುಡಿಯೋಕೆ ತುಂಡು ಬಟ್ಟೆ ಸಾಕು ನಮ್ಮ ಮಾನಾ ಮುಚ್ಚೋಕೆ, ನಾಗಾ ಕಾಳಾ ಭೈರವ ಚಿತ್ರದಲ್ಲಿ ನಗುವುದೇ ಸ್ವರ್ಗ ಹಾಗೂ ಸಾಹಸ ಸಿಂಹ ಚಿತ್ರದಲ್ಲಿ ಹೇಗಿದ್ದರೂ ನೀನೆ ಚೆನ್ನ ಹಾಡುಗಳನ್ನು ಹಾಡಿ ಗಾಯಕರಾಗಿಯೂ ಶ್ರೋತೃಗಳ ಪ್ರೀತಿ ಮತ್ತು ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ.

ಸಿರಿತನಕ್ಕೆ ಸವಾಲು, ಹಂತಕನ ಸಂಚು, ಕಲ್ಲು ವೀಣೆ ನುಡಿಯಿತು, ಮತ್ತೆ ವಸಂತ, ಸಿಡಿದೆದ್ದ ಸಹೋದರ, ಗಂಡು ಗಲಿ ರಾಮ, ಚಿನ್ನದಂತ ಮಗ, ಸಿಂಹ ಘರ್ಜನೆ, ರುದ್ರ ನಾಗ, ಖೈದಿ, ಬೆಂಕಿ ಬಿರುಗಾಳಿ, ಹುಲಿ ಹೆಜ್ಜೆ, ಮಹಾ ಪುರುಷ, ನಮ್ಮೂರ ರಾಜ, ಮೋಜುಗಾರ ಸೊಗಸುಗಾರ, ಸೂರ್ಯವಂಶ, ವಿಷ್ಣು ಸೇನಾ ಒಳಗೊಂಡಂತೆ ಹಲವು ಚಿತ್ರಗಳ ಸುಶ್ರಾವ್ಯ ಗೀತೆಗಳಿಗೆ ವಿಷ್ಣುವರ್ಧನ್ ಧ್ವನಿಯಾಗಿದ್ದಾರೆ.

**ಬತ್ತಳಿಕೆಯ ತುಂಬಾ ಪ್ರಶಸ್ತಿಗಳು**

ಕನ್ನಡ ಚಿತ್ರರಂಗದಲ್ಲಿ ವರ ನಟ ಡಾ. ರಾಜ್ ಕುಮಾರ್ ಅವರನ್ನು ಹೊರತುಪಡಿಸಿದರೆ ಅತೀ ಹೆಚ್ಚು ಪ್ರಶಸ್ತಿಗಳನ್ನು ತಮ್ಮ ಬತ್ತಳಿಕೆಯಲ್ಲಿ ತುಂಬಿಸಿಕೊಂಡವರು ವಿಷ್ಣುವರ್ಧನ್ ಅವರೇ. ನಾಗರ ಹಾವು, ಹೊಂಬಿಸಿಲು, ಬಂಧನ, ಲಯನ್ ಜಗಪತಿ ರಾವ್, ಲಾಲಿ, ವೀರಪ್ಪ ನಾಯಕ ಮತ್ತು ಆಪ್ತರಕ್ಷಕ ಚಿತ್ರಗಳಲ್ಲಿನ ತಮ್ಮ ಅಭಿನಯಕ್ಕೆ ರಾಜ್ಯ ಸರ್ಕಾರದಿಂದ ಒಟ್ಟಾರೆ ಏಳು ಬಾರಿ ವಿಷ್ಣುವರ್ಧನ್ ಅವರು ಅತ್ಯುತ್ತಮ ನಟ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಲ್ಲದೆ, 1990 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದ ವಿಷ್ಣುವರ್ಧನ್ ಅವರಿಗೆ 2005 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ತನ್ನ ಗೌರವವನ್ನು ಹೆಚ್ಚಿಸಿಕೊಂಡಿದೆ. ಚಿತ್ರರಂಗದಲ್ಲಿನ ಜೀವಮಾನ ಸಾಧನೆಗೆ 2007 ರಲ್ಲಿ ಡಾ ರಾಜ್ ಕುಮಾರ್ ಪ್ರಶಸ್ತಿಯನ್ನೂ ತನ್ನದಾಗಿಸಿಕೊಂಡ ವಿಷ್ಣುವರ್ಧನ್ ಅವರು 2009 ರಲ್ಲಿ ಕಾಲವಾದ ನಂತರ ಕನ್ನಡ ಚಿತ್ರರಂಗದಲ್ಲಿ ಸುದೀರ್ಘ ಕಾಲ ಕಲಾ ಸೇವೆಯಲ್ಲಿ ತೊಡಗಿಸಿಕೊಂಡವರಿಗೆ ಡಾ ವಿಷ್ಣುವರ್ಧನ್ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಕೊಡ ಮಾಡಲು ಪ್ರಾರಂಭಿಸಿದೆ. ನಾಲ್ಕು ಬಾರಿ ಫಿಲಂ ಫೇರ್ ಪ್ರಶಸ್ತಿ, ಎರಡು ಬಾರಿ ಸಿನಿಮಾ ಎಕ್ಸ್‌ಪ್ರೆಸ್ ಪ್ರಶಸ್ತಿ ಪುರಸ್ಕೃತರಾದ ವಿಷ್ಣುವರ್ಧನ್ ಅವರ ಸಂಸ್ಮರಣೆಯಲ್ಲಿ ಕೇಂದ್ರ ಸರ್ಕಾರವು 2013 ರಲ್ಲಿ ಐದು ರೂಪಾಯಿ ಮೌಲ್ಯದ ಅಂಚೆ ಚೀಟಿಯನ್ನೂ





Downloaded From:www.kpscvaani.com

ಹೊರ ತಂದಿದೆ. ವಿಷ್ಣುವರ್ಧನ್ ಎಂದೊಡನೆಯೇ ಸಾಹಸ ಸಿಂಹ, ಅಭಿನಯ ಭಾರ್ಗವ ಎಂಬ ಬಿರುದು ಬಾವಲಿಗಳು ಕನ್ನಡ ಚಿತ್ರ ರಸಿಕರ ಮನದಲ್ಲಿ ಥಟ್ಟನೆ ಸುಳಿದಾಡುತ್ತವೆ.

**ಕರಾಳ ದಿನ !**

ಅಂದು ಡಿಸೆಂಬರ್ 30, 2009. ಸ್ಥಳ ಮೈಸೂರು. ಬೆಳಿಗ್ಗೆ ಸೂರ್ಯ ಉದಯಿಸುವ ಕಾಲಕ್ಕಾಗಲೇ ಡಾ. ವಿಷ್ಣುವರ್ಧನ್ ಅವರು ತೀವ್ರ ಹೃದಯ ಸ್ಥಂಬನಕ್ಕೆ ಒಳಗಾಗಿ ಅಸ್ತಂಗತರಾಗಿದ್ದರು. ಸೂರ್ಯ ಉದಯಿಸುವ ಮುನ್ನವೇ ಕನ್ನಡ ಚಿತ್ರರಂಗ, ಕನ್ನಡ ಚಿತ್ರ ರಸಿಕರು ಕಗ್ಗತ್ತಲ್ಲಿ ಮುಳುಗಿ ಹೋದರು. ಕನ್ನಡ ಚಿತ್ರರಂಗದಲ್ಲಿ ಸುಮಾರು 37 ವರ್ಷಗಳ ಕಾಲ ಪ್ರಜ್ವಲಿಸಿದ್ದ ಹಾಗೂ ಆಗಸದಲ್ಲಿ ಪ್ರಕಾಶಿಸುವ ತಾರೆಗಳಿಗೆ ದಶಕಗಳ ಕಾಲ ಸ್ಪರ್ಧೆಯೊಡ್ಡಿದ್ದ ಅತ್ಯಂತ ಪ್ರತಿಭಾನ್ವಿತ ತಾರೆಯೊಂದು ಕಾರ್ಗತ್ತಲಲ್ಲೇ ಕಣ್ಮರೆಯಾಗಿತ್ತು. ವಿಷ್ಣುವರ್ಧನ್ ಅವರ ಪಾರ್ಥಿವ ಶರೀರವನ್ನು ಅವರು ವ್ಯಾಸಂಗ ಮಾಡಿದ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲೇ ಸಾರ್ವಜನಿಕ ದರ್ಶನಕ್ಕಾಗಿ ಇಡಲಾಗಿತ್ತು. ಅದೇ ದಿನ ಸಂಜೆ ಉತ್ತರ ಹಳ್ಳಿ ರಸ್ತೆಯಲ್ಲಿ ಅದ್ಭುತ ಹಾಸ್ಯ ನಟ, ಅತ್ಯದ್ಭುತ ಖಳ ನಟ ಹಾಗೂ ಮನೋಜ್ಞ ಅಭಿನಯಕ್ಕೆ ಮತ್ತೊಂದು ಹೆಸರಾಗಿದ್ದ ಪೋಷಕ ನಟ ಬಾಲಕೃಷ್ಣ ಅವರ ಅಭಿಮಾನ್ ಸ್ಟುಡಿಯೋದಲ್ಲಿ ಸಕಲ ಸರ್ಕಾರಿ ಗೌರವಗಳ ನಡುವೆ ಅಗ್ನಿ ಸ್ಪರ್ಶ ಮಾಡುವ ಮೂಲಕ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು.

ಕನ್ನಡಿಗರು ಎಂದೂ ಮರೆಯಲಾಗದ ನಟ ಡಾ ವಿಷ್ಣುವರ್ಧನ್ ಅವರ ಸಂಸ್ಮರಣೆಗೆ ಸರ್ಕಾರದ ವತಿಯಿಂದ ಸ್ಮಾರಕ ನಿರ್ಮಿಸುವುದಾಗಿ ಘೋಷಿಸಿದ ಅಂದಿನ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರು ಹೊಸ ದಿನದರ್ಶಿ ವರ್ಷದ ಆಗಮನದ ಸಂತಸವನ್ನೇ ಕಸಿದು ಕೊಂಡಿದ್ದ ಆ ಕಹಿ ಘಟನೆಯಿಂದ ನೊಂದ ಅಭಿಮಾನಿಗಳಿಗೆ ಸಾಂತ್ವನ ನೀಡಿದರು. ಅಂತ್ಯ ಸಂಸ್ಕಾರ ನೆರವೇರಿಸಿದ ಜಮೀನಿಗೆ ಸಂಬಂಧಿಸಿದಂತೆ ಉಂಟಾದ ವಿವಾದ ಕಗ್ಗಂಟಾಗಿ ಪರಿಣಮಿಸಿದಾಗ ಭಾರತಿ ವಿಷ್ಣುವರ್ಧನ್ ಮತ್ತವರ ಅನುಮತಿ ಹಾಗೂ ಸಹಮತಿಯೊಡನೆ ಬೆಂಗಳೂರಿನ ಬದಲು ಮೈಸೂರಿನಲ್ಲಿ ಡಾ ವಿಷ್ಣುವರ್ಧನ್ ಸ್ಮಾರಕವನ್ನು ನಿರ್ಮಿಸಲು ಡಾ ವಿಷ್ಣುವರ್ಧನ್ ಪ್ರತಿಷ್ಠಾನ ಸ್ಥಾಪಿಸಿ ರಾಜ್ಯ ಸರ್ಕಾರ ಮುಂದಡಿ ಇಟ್ಟಿತು.

**ಡಾ ವಿಷ್ಣುವರ್ಧನ್ ಸ್ಮಾರಕ !**

ಮೈಸೂರು ತಾಲ್ಲೂಕಿನ ಹೆಗ್ಗಡ ದೇವನ ಕೋಟೆ ರಸ್ತೆಯ ಉದ್ಬೂರು ದ್ವಾರದ ಬಳಿಯ ಕಸಬಾ ಹೋಬಳಿಗೆ ಸೇರಿದ ಹಾಲಾಳು ಗ್ರಾಮದ ಸರ್ವೆ ಸಂಖ್ಯೆ 8 ರಲ್ಲಿನ ಐದು ಎಕರೆ ಸರ್ಕಾರಿ ಜಾಗದಲ್ಲಿ ಇದೀಗ 14.46 ಕೋಟಿ ರೂಪಾಯಿ ವೆಚ್ಚದಲ್ಲಿ ಡಾ ವಿಷ್ಣುವರ್ಧನ್ ಸ್ಮಾರಕ ಮೇಲೈಸಿದೆ.

**ಸ್ಮಾರಕದಲ್ಲಿ ಏನೇನಿದೆ ?**

ಸ್ಮಾರಕವನ್ನು ಪ್ರವೇಶಿಸಿದೊಡನೆಯೇ 5.2 ಮೀಟರ್ ಅಗಲದ 120 ಮೀಟರ್ ಉದ್ದದ ವರ್ತುಲಾಕಾರದಲ್ಲಿ ಪಾದಚಾರಿ ಮಾರ್ಗ ಇರುವ ಗೋಡೆಯ ಇಕ್ಕೆಲೆಗಳಲ್ಲಿ ಛಾಯಾಚಿತ್ರಗಳನ್ನು ಅಳವಡಿಸಿರುವ ಚಿತ್ರ ವೇದಿಕೆ (ಇಮೇಜ್ ಗ್ಯಾಲರಿ) ಇದೆ. ಡಾ ವಿಷ್ಣುವರ್ಧನ್ ಅವರ ಚಿತ್ರ ಪಯಣ ಮತ್ತು ಕುಟುಂಬ ಯಾನದ 728 ಚಿತ್ರಗಳು ಸದ್ಯಕ್ಕೆ ಚಿತ್ರ ವೇದಿಕೆಯನ್ನು ಅಲಂಕರಿಸಿದೆ. ಮುಂದಿನ ದಿನಗಳಲ್ಲಿ ಡಾ ವಿಷ್ಣುವರ್ಧನ್ ಅವರು ಅಭಿನಯಿಸಿದ ಚಿತ್ರಗಳಿಂದ ಆಯ್ದ ಹಾಡು ಮತ್ತು ಸಂಭಾಷಣೆಗಳನ್ನು ಧ್ವನಿ ಮತ್ತು ದೃಶ್ಯ ರೂಪದಲ್ಲಿ ಕೇಳಿಸುವ ಮತ್ತು ತೋರಿಸುವ ಪ್ರಯತ್ನ ನಡೆಯುತ್ತಿದೆ.

ಪ್ರವೇಶ ದ್ವಾರದ ನೇರಕ್ಕೆ ಡಾ ವಿಷ್ಣುವರ್ಧನ್ ಅವರ ಪ್ರತಿಮೆ ಕಾಣುತ್ತದೆ. ಆದರೆ, ಪ್ರವೇಶ ದ್ವಾರ ಮತ್ತು ಪ್ರತಿಮೆಯ ನಡುವೆ ಕಾರಂಜಿಯನ್ನು ಸ್ಥಾಪಿಸಲಾಗಿದೆ. ಕಾರಂಜಿ ಇರುವ ಆವರಣದಲ್ಲಿ ಡಾ ವಿಷ್ಣುವರ್ಧನ್ ಅವರ ಆಯ್ದ ಸಂಭಾಷಣೆಗಳನ್ನು ಉಕ್ಕಿನ ಅಕ್ಷರಗಳಲ್ಲಿನ ಕೆತ್ತನೆಯಲ್ಲಿ ಅಳವಡಿಸಲಾಗಿದೆ.

ಈ ಪ್ರತಿಮೆಯ ಹಿಂಬದಿಯಲ್ಲಿ ಸ್ವಾಗತಕಾರರ ಕೇಂದ್ರ, ನಿರ್ದೇಶಕರು ಅಥವಾ ವ್ಯವಸ್ಥಾಪಕರ ಕೊಠಡಿ, 240 ಆಸನಗಳ ಸಾಹಸ ಸಿಂಹ ಸಭಾಂಗಣವಿದೆ. ಪ್ರಶಸ್ತಿ ಪ್ರದಾನ, ಪುಸ್ತಕ ಬಿಡುಗಡೆ, ಕಮ್ಮಟ, ವಿಚಾರ ಸಂಕಿರಣ, ಸಂವಾದ, ನಾಟಕ ಪ್ರದರ್ಶನ ಹಾಗೂ ಚಿತ್ರ ಪ್ರದರ್ಶನ ಹೀಗೆ ವಿವಿಧೋದ್ದೇಶಗಳಿಗೆ ಈ ಸಭಾಂಗಣವನ್ನು ಬಳಸಿಕೊಳ್ಳಲು ಚಿಂತನೆ ನಡೆದಿದೆ. ಸಭಾಂಗಣದ ವೇದಿಕೆಯ ಇಕ್ಕೆಲೆಗಳಲ್ಲಿ ಪ್ರಸಾದನಾ ಕೊಠಡಿಗಳಿವೆ.

ಸಭಾಂಗಣದ ಸಮಿಪದಲ್ಲೇ ನಟನೆ, ನಿರ್ದೇಶನ, ಹಾಡುಗಾರಿಕೆ ಮತ್ತು ಸಂಗೀತ ಪಾಠ ತರಗತಿಗಳನ್ನು ನಡೆಸಲು ಅನುಕೂಲವಾಗುವಂತೆ 60 ಆಸನ ಸಾಮರ್ಥ್ಯದ ಎರಡು ಕೊಠಡಿಗಳಿವೆ. ಅದರ ಪಕ್ಕದಲ್ಲೇ ಪಾಕಶಾಲೆಯಿದ್ದು, ಪಾಕಶಾಲೆಗೆ ಹೊಂದಿಕೊಂಡಂತೆ ತಿನಿಸು ಧಾಮಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರ ಜೊತೆ ಜೊತೆಯಲ್ಲೇ ವಿಶಾಲ ಪಡಸಾಲೆ, ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯಗಳು, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸುವ ಗಣ್ಯಾತಿಗಣ್ಯರು ಹಾಗೂ ಅತಿಥಿಗಳು ವಾಸ್ತವ್ಯ ಹೂಡಲು ಹಿತವಾದ ವಸತಿ ವ್ಯವಸ್ಥೆ ಕಲ್ಪಿಸುವ ನಾಲ್ಕು ಕೊಠಡಿಗಳಿವೆ. ಆಕರ್ಷಕ ಭೂ ದೃಶ್ಯ (ಲ್ಯಾಂಡ್ ಸ್ಕೇಪ್) ಹಾಗೂ ಮೇಲ್ಛಾವಣಿ ಒಳಗೊಂಡಂತೆ ಎಲ್ಲೆಡೆ ಹಸಿರು ಬಳ್ಳಿಗಳಲ್ಲಿ ಹೂವುಗಳು ಬೆಳೆಸುವ ಪರಿಕಲ್ಪನೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಡಾ ವಿಷ್ಣುವರ್ಧನ್ ಸ್ಮಾರಕವನ್ನು ಪ್ರತಿದಿನವೂ ಅಭಿಮಾನಿಗಳೂ ಒಳಗೊಂಡಂತೆ ಎಲ್ಲರಿಗೂ ಸಾರ್ವಜನಿಕ ವೀಕ್ಷಣೆಗೆ ಅನುವುಮಾಡಿಕೊಡಲು ರೂಪು-ರೇಷೆಗಳು ಸಿದ್ಧವಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಡಾ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣ ಯೋಜನೆಯನ್ನು ಕರ್ನಾಟಕ ಪೋಲಿಸ್ ವಸತಿ ನಿಗಮವು ಕೋವಿಡ್-19 ರ ಉಪಟಳದ ಸಂದರ್ಭದಲ್ಲಿ 2019 ರ ಸೆಪ್ಟೆಂಬರ್ 30 ರಂದು ಪ್ರಾರಂಭಿಸಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇರ ಮಾರ್ಗದರ್ಶನದಲ್ಲಿ ಅತಿ ಕಡಿಮೆ ಅವಧಿಯಲ್ಲಿ ಅಚ್ಚುಕಟ್ಟಾಗಿ ಪೂರ್ಣಗೊಳಿಸಿದೆ.

ಡಾ ವಿಷ್ಣುವರ್ಧನ್ ಅವರು ನಮ್ಮನ್ನಗಲಿ ಹದಿಮೂರು ವರ್ಷಗಳ ನಂತರ ಡಾ ವಿಷ್ಣುವರ್ಧನ್ ಸ್ಮಾರಕ ಸಿದ್ಧವಾಗಿದೆ ನಿಜ. ಸಾಹಸ ಸಿಂಹನ ಅಗಲಿಕೆಯನ್ನು ಇಂದಿಗೂ ಅರಗಿಸಿಕೊಳ್ಳಲಾಗದ ಅಭಿಮಾನಿಗಳ ಪಾಲಿಗೆ ಡಾ ವಿಷ್ಣುವರ್ಧನ್ ಸ್ಮಾರಕವು ನಾಕವೇ ಆಗಿದೆ.

ಮೈಸೂರಿನಲ್ಲಿ ಜನಿಸಿ, ಕೊನೆಗೆ ಮೈಸೂರಿನಲ್ಲೇ ಅಂತ್ಯ ಕಂಡ ಮಹಾನ್ ಕಲಾವಿದ ಡಾ ವಿಷ್ಣುವರ್ಧನ್ ಅವರ ಸ್ಮಾರಕವನ್ನು ಮೈಸೂರಿನಲ್ಲೇ ನಿರ್ಮಿಸಿ ಗೌರವ ಸಲ್ಲಿಸಿದ ಕರ್ನಾಟಕ ಸರ್ಕಾರದ ಕಳಕಳಿ ಮತ್ತು ಕಾಳಜಿಗೆ ಕನ್ನಡಿಗರು ಕೃತಜ್ಞತೆ ಸಲ್ಲಿಸಿದ್ದಾರೆ ಮಾತ್ರವಲ್ಲದೆ, ಅಭಾರಿಯಾಗಿದ್ದಾರೆ. ■


Downloaded From:www.kpscvaani.com

# ಸುಶಿಕ್ಷಿತ ಸಮಾಜ ನಿರ್ಮಾಣ ಸರ್ಕಾರದ ಆದ್ಯತೆ

ಮಂಜುನಾಥ್ ನಾಯ್ಕ್

**ಶಿಕ್ಷಣದಿಂದ ಯಾರೊಬ್ಬರು ವಂಚಿತರಾಗಬಾರದು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರವು ವಿವಿಧ ಯೋಜನೆಗಳನ್ನು ಹಮ್ಮಿಕೊಂಡು, ಸರ್ಕಾರಿ ಶಾಲಾ-ಕಾಲೇಜುಗಳ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡುತ್ತಿದೆ.**

ಶಿಕ್ಷಣ ಎಂದ ಕೂಡಲೇ ನಮ್ಮ ಕಣ್ಮುಂದೆ ಬರುವುದು ಸರ್ಕಾರಿ ಶಾಲಾ ಕಾಲೇಜುಗಳ ಚಿತ್ರಣ. ಶಿಕ್ಷಣ ಕಲಿಯಲು ಉತ್ತಮ ವಾತಾವರಣ ಇರುವುದು ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಇದನ್ನು ಮನಗಂಡ ಸರ್ಕಾರವು ಮೊದಲು ಶಾಲಾ ಕಟ್ಟಡದ ದುರಸ್ತಿ ಮಾಡುವ ಜೊತೆಗೆ ಕುಡಿಯುವ ನೀರು, ಸ್ವಚ್ಛ ಶೌಚಾಲಯ, ಆಟದ ಮೈದಾನ ಇವೇ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮುಂದಾಗಿದೆ. ಸರ್ಕಾರಿ ಶಾಲೆಗಳ ದುರಸ್ತಿಗೆ ಹಿಂದಿನ ಸರ್ಕಾರಗಳು ನಿರ್ಲಕ್ಷ್ಯ ವಹಿಸಿದ್ದವು. ಆದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುವುದರಿಂದ ಶಿಕ್ಷಣ ಸಚಿವರಾದ ಬಿ.ಸಿ.ನಾಗೇಶ್ ಅವರ ಜೊತೆಗೂಡಿ ಶಿಕ್ಷಣ ಕ್ಷೇತ್ರದಲ್ಲಿ ವಿವಿಧ ಹೊಸ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

ಹಾಗಾಗಿ ಪ್ರಸ್ತುತ ಸರ್ಕಾರವು ರಾಜ್ಯದ ಒಟ್ಟು 42,239 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 13,107 ಕೊಠಡಿಗಳ ಸಣ್ಣ–ಪುಟ್ಟ ಮತ್ತು 14,373 ಕೊಠಡಿಗಳ ದೊಡ್ಡ ಮಟ್ಟದ ದುರಸ್ತಿ ಮಾಡಲು ಯೋಜನೆ ತಯಾರಿಸಿದೆ.





Downloaded From:www.kpscvaani.com



ಅದೇ ರೀತಿ 4,819 ಪ್ರೌಢಶಾಲೆಗಳ 1,365 ಕೊಠಡಿಗಳ ಸಣ್ಣಮಟ್ಟದ ದುರಸ್ತಿ ಹಾಗೂ 1,059 ಪ್ರೌಢ ಶಾಲಾ ಕೊಠಡಿಗಳ ದೊಡ್ಡ ಪ್ರಮಾಣದ ದುರಸ್ತಿಗೆ ಕ್ರಮಕೈಗೊಳ್ಳಲಾಗಿದೆ. ಅದೇ ಪ್ರಕಾರ ವಿವೇಕ ಯೋಜನೆಯಡಿಯಲ್ಲಿ 1412 ಕೋಟಿ ರೂಪಾಯಿ ವೆಚ್ಚದಲ್ಲಿ 8,100 ಹೊಸ ಶಾಲಾ ಕಟ್ಟಡಗಳ ನಿರ್ಮಾಣಕ್ಕೂ ಇಲಾಖೆ ನಿರ್ಧರಿಸಿದೆ ಎಂದು ಸಚಿವ ಬಿ.ಸಿ.ನಾಗೇಶ್ ಅವರು ತಿಳಿಸಿದ್ದಾರೆ.

ಉತ್ತಮ ಕಲಿಕಾ ವಾತಾವರಣದ ನಂತರ ಪ್ರಮುಖವಾಗಿ ಶಿಕ್ಷಣಕ್ಕೆ ಬೇಕಿರುವುದು ವಿದ್ಯೆ ಕಲಿಸಲು ಅಗತ್ಯವಿರುವ ಶಿಕ್ಷಕರು. ಕೆಲವು ರಾಜ್ಯ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿಂದ ಮಕ್ಕಳ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರುವುದರಿಂದ ತಾತ್ಕಾಲಿಕ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಶಿಕ್ಷಕರ ಕೊರತೆಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಖಾಲಿಯಿರುವ 15 ಸಾವಿರ ಪದವೀಧರ ಶಿಕ್ಷಕರ ನೇಮಕಾತಿಗೆ ಇಲಾಖೆ ಕ್ರಮಕೈಗೊಂಡಿದೆ.

ಉದ್ಯಾನ ನಗರಿ, ಮಾಹಿತಿ ತಂತ್ರಜ್ಞಾನ ನಗರಿ ಎಂದು ಖ್ಯಾತಿ ಪಡೆದಿರುವ ಬೆಂಗಳೂರು ನಗರದಲ್ಲಿ ಹೆಚ್ಚಿನ ಪಾಲಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸಲು ಪ್ರಥಮ ಆದ್ಯತೆ ನೀಡುತ್ತಾರೆ. ಖಾಸಗಿ ಶಾಲೆಗಳಿಗೆ ಸಡ್ಡು ಹೊಡೆಯುವ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಆಯ್ದ 20 ಸರ್ಕಾರಿ ಶಾಲೆಗಳಿಗೆ 89 ಕೋಟಿ ರೂಪಾಯಿ ವೆಚ್ಚದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ.

ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆಯ ಸಂಭ್ರಮದ ಅಂಗವಾಗಿ ಅಮೃತ ಶಾಲಾ ಸೌಲಭ್ಯ ಯೋಜನೆಯಡಿ 750 ಸರ್ಕಾರಿ ಶಾಲೆಗಳಿಗೆ 75 ಕೋಟಿ ರೂಪಾಯಿ ವೆಚ್ಚದಲ್ಲಿ ಸಮಗ್ರ ಮೂಲಭೂತ ಸೌಲಭ್ಯ ಒದಗಿಸಲು ಯೋಜನೆ ರೂಪಿಸಿ ಕಾರ್ಯಗತಗೊಳಿಸಲಾಗುತ್ತಿದೆ.

ರಾಷ್ಟ್ರಕವಿ ಕುವೆಂಪು ಸೇರಿದಂತೆ ಎಲ್ಲಾ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಅಧ್ಯಯನ ಮಾಡಿದ ಶಾಲೆಗಳನ್ನು ಉನ್ನತ ದರ್ಜೆಗೇರಿಸಿ ಮಾದರಿ ಶಾಲೆಯಾಗಿ ಸಮಗ್ರ ಅಭಿವೃದ್ಧಿ ಮಾಡಲು 16 ಕೋಟಿ ರೂಪಾಯಿ ವೆಚ್ಚದಲ್ಲಿ ಶಿಕ್ಷಣ ಇಲಾಖೆಯು ಯೋಜನೆ ರೂಪಿಸಿದೆ. ಹಾಗೆಯೇ ರಾಜ್ಯದಲ್ಲಿ ಶತಮಾನ ಪೂರೈಸುತ್ತಿರುವ 143 ಶಾಲೆಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಸರ್ಕಾರ ನಿರ್ಧರಿಸಿದೆ.

ವಿದ್ಯೆ ತಲೆಗೆ ಹತ್ತಬೇಕಾದರೆ ಮಕ್ಕಳ ಹೊಟ್ಟೆ ತುಂಬಿರಬೇಕು. ಹಸಿದ ಹೊಟ್ಟೆಯಲ್ಲಿ ಮಕ್ಕಳು ಶಾಲೆಗೆ ಬಂದರೆ ಅವರಿಗೆ ಶಿಕ್ಷಣ ದೊಡ್ಡ ಹೊರೆಯಾಗುತ್ತದೆ. ಜೊತೆಗೆ ಅಪೌಷ್ಟಿಕತೆಯಿಂದ ನಾನಾ ರೀತಿಯ ಮಾನಸಿಕ ಮತ್ತು ದೈಹಿಕ ಕಾಯಿಲೆಗೆ ತುತ್ತಾಗುವುದರಿಂದ ಶಾಲೆ ಬಿಡುವವರ ಸಂಖ್ಯೆ ಹೆಚ್ಚಾಗುತ್ತದೆ. ಆದ್ದರಿಂದ ಈ ಎಲ್ಲಾ ಸಮಸ್ಯೆಗೆ ಪರಿಹಾರ ಒದಗಿಸಲು ಒಂದರಿಂದ ಹತ್ತನೆ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 56 ಲಕ್ಷ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ 2251.39 ಕೋಟಿ ರೂಪಾಯಿ ವೆಚ್ಚಮಾಡಲಾಗುತ್ತಿದೆ. ಅಲ್ಲದೆ ಪೌಷ್ಟಿಕಾಂಶಯುಕ್ತ ಹಾಲನ್ನು ಮಕ್ಕಳಿಗೆ ಒದಗಿಸಲಾಗುತ್ತಿದೆ. 1 ರಿಂದ 8ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ **'ಪ್ರಧಾನಮಂತ್ರಿ ಪೋಷಣ್ ಶಕ್ತಿ ಅಭಿಯಾನ'** ಯೋಜನೆಯಡಿ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ/ ಬಾಳೆಹಣ್ಣು / ಚಿಕ್ಕಿ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ.

**ರಾಜ್ಯ ಸರ್ಕಾರವು ಪ್ರಥಮ ಬಾರಿಗೆ ಮಂಗಳೂರು, ಧಾರವಾಡ, ಮೈಸೂರು, ಕಲಬುರಗಿ ಮತ್ತು ಬೆಂಗಳೂರಿನಲ್ಲಿನ ಮೆಗಾ ಹಾಸ್ಟೆಲ್‌ಗಳನ್ನು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರಾರಂಭಿಸಲಾಗುವುದೆಂದು ಮುಖ್ಯಮಂತ್ರಿ ಅವರು ವಿಧಾನ ಪರಿಷತ್‌ನ 2022–23 ನೇ ಸಾಲಿನ ಪೂರಕ ಅಂದಾಜಿನ ಎರಡನೇ ಕಂತಿನ ಬೇಡಿಕೆಗಳ ಮೇಲಿನ ಚರ್ಚೆಯ ಸಂದರ್ಭದಲ್ಲಿ ತಿಳಿಸಿದ್ದಾರೆ. ಈ ಯೋಜನೆಯಿಂದ ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ.**

ಶಿಕ್ಷಣಕ್ಕೆ ಅತ್ಯಂತ ಅಗತ್ಯವಿರುವ ಪಠ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಕೂಡ ಸರ್ಕಾರವು ಕ್ರಮ ತೆಗೆದುಕೊಂಡಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ಪೂರಕವಾಗಿ 1 ರಿಂದ 10ನೇ ತರಗತಿಯ 56 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ಪೂರೈಸಲು 159.60 ಕೋಟಿ ರೂಪಾಯಿಗಳನ್ನು, ಉಚಿತ ಸಮವಸ್ತ್ರ ಒದಗಿಸಲು 93–27 ಕೋಟಿ ರೂಪಾಯಿ ಹಾಗೂ ಉಚಿತ ಶೂ ಮತ್ತು



Downloaded From:www.kpscvaani.com



ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರಾಜ್ಯ ಶೌರ್ಯ ಪ್ರಶಸ್ತಿಗೆ ಮಕ್ಕಳನ್ನು ಆಯ್ಕೆ ಮಾಡುತ್ತದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯ ವತಿಯಿಂದ 2,500 ರೂಪಾಯಿ ನಗದು ಪುರಸ್ಕಾರ ನೀಡಲಾಗುತ್ತದೆ.




## ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾನಿಧಿ ಯೋಜನೆ

ಮುಖ್ಯಮಂತ್ರಿ ಅವರು ರೈತರ ಮಕ್ಕಳು ಆರ್ಥಿಕ ತೊಂದರೆಯಿಂದ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸುತ್ತಿರುವುದನ್ನು ಅರಿತು ರೈತ ವಿದ್ಯಾನಿಧಿ ಯೋಜನೆಯನ್ನು ಘೋಷಿಸಿದರು. ರೈತರ ಮಕ್ಕಳೂ ಕೂಡ ಓದಿ ಉನ್ನತ ಹುದ್ದೆಯನ್ನು ಅಲಂಕರಿಸಬೇಕು ಎಂಬುದು ಅವರ ಆಶಯವಾಗಿದೆ. ಮುಂದೆ ಅವರು ಈ ಯೋಜನೆಯನ್ನು ನೇಕಾರರು, ಮೀನುಗಾರರು, ಟ್ಯಾಕ್ಸಿ ಚಾಲಕರ ಮಕ್ಕಳಿಗೂ ವಿಸ್ತರಿಸಿದರು. ಒಟ್ಟಿನಲ್ಲಿ ಆರ್ಥಿಕ ಸಂಕಷ್ಟದಲ್ಲಿ ಇರುವವರ ಮಕ್ಕಳು ವಿದ್ಯಾಭ್ಯಾಸದಿಂದ ಹೊರಗುಳಿಯಬಾರದು ಎಂಬುದು ಅವರ ಉದ್ದೇಶ.

ಸಾಕ್ಸ್ ಒದಗಿಸಲು 132 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ.

ಪಠ್ಯಪುಸ್ತಕ, ಊಟ ದೊರಕಿದ ಮೇಲೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಿಸಬೇಕಾದುದು ಸರ್ಕಾರದ ಆದ್ಯ ಕರ್ತವ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವು ಸರಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸಲು ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿದೆಯಲ್ಲದೆ ಅತಿಥಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರ ಗೌರವ ಸಂಭಾವನೆಯನ್ನು 2,500 ರೂ. ಹೆಚ್ಚಳ ಮಾಡಲಾಗಿದೆ.

2022–23 ರಲ್ಲಿ 32,159 ಅತಿಥಿ ಶಿಕ್ಷಕರ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ 3,708 ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲಾಗುತ್ತಿದೆ. ಅಕ್ಷರ ದಾಸೋಹ ಯೋಜನೆಯಡಿ ಬಿಸಿಯೂಟ ತಯಾರಿಸುವ ಸಿಬ್ಬಂದಿಗಳು ಅತ್ಯಂತ ಕಡಿಮೆ ವೇತನ ಪಡೆಯುತ್ತಿದ್ದು, ಅವರ ಗೌರವ ಸಂಭಾವನೆಯನ್ನೂ ಕೂಡ ಸಾವಿರ ರೂ. ಹೆಚ್ಚಳ ಮಾಡಲಾಗಿದೆ.

ಖಾಸಗೀ ಶಾಲೆಗೆ ಸೆಡ್ಡು ಒಡೆಯುವಂತೆ ವ್ಯವಸ್ಥೆಗಳನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಸರ್ಕಾರಿ ಶಾಲೆಗಳಿಗೆ ದೂರದಿಂದ ಬರುವ ಮಕ್ಕಳನ್ನು ಕರೆದೊಯ್ಯಲು ಶಾಲಾ ವಾಹನ ಖರೀದಿಗೆ 'ಶಾಸಕರ ಪ್ರದೇಶಾಭಿವೃದ್ಧಿ ನಿಧಿ' ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ.

ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಸರ್ಕಾರಿ ಪಿಯು ಕಾಲೇಜುಗಳಿಗೆ ವಿದ್ಯಾರ್ಥಿನಿಯರಿಗೆ ದಾಖಲಾತಿ ಶುಲ್ಕ ಪಾವತಿಯಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ಇದರಿಂದ ಪದವಿ ಪೂರ್ವ ಶಿಕ್ಷಣಕ್ಕೆ ದಾಖಲಾಗುವ ವಿದ್ಯಾರ್ಥಿನಿಯರ ಸಂಖ್ಯೆ ಹಚ್ಚಿದೆ.

ಪ್ರತಿ ವರ್ಷ ಶಿಕ್ಷಕರ ವರ್ಗಾವಣೆ ಸರ್ಕಾರಕ್ಕೆ ದೊಡ್ಡ ತಲೆನೋವಿನ ವಿಷಯವಾಗಿತ್ತು. ಇದಕ್ಕಾಗಿ ಹಲವಾರು ರೀತಿಯ ಕಸರತ್ತುಗಳು ನಡೆಸಬೇಕಾಗುತಿತ್ತು. ಹಳೆಯ ಪದ್ಧತಿಗೆ ತಿಲಾಂಜಲಿ ಹೇಳಿದ ಸರ್ಕಾರ ವೈಜ್ಞಾನಿಕ ರೀತಿಯಲ್ಲಿ ಕೌನ್ಸಿಲಿಂಗ್ ನಡೆಸುವ ಮೂಲಕ ಯಾವುದೇ ರೀತಿಯ ಗೊಂದಲಕ್ಕೆ ಆಸ್ಪದ ನೀಡದೆ 23 ಸಾವಿರಕ್ಕೂ ಹೆಚ್ಚು ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ



Downloaded From:www.kpscvaani.com



ಪೂರ್ಣಗೊಳಿಸಲಾಗಿದೆ. ಅದೇ ಪ್ರಕಾರ ಅನುದಾನಿತ ಶಾಲೆಗಳಲ್ಲಿ 2015 ರ ಡಿಸೆಂಬರ್ 31ರ ಪೂರ್ವದಲ್ಲಿ ಖಾಲಿಯಾಗಿರುವ ಬೋಧಕರ ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗಿದೆ. ಎರಡು ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸಾಧ್ಯವಾಗಲಿದೆ.

ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿನ ಮಕ್ಕಳ ಇಂಗ್ಲೀಷ್ ಭಾಷಾ ಜ್ಞಾನ ಉತ್ತಮ ಪಡಿಸಲು 'ಸ್ಪೋಕನ್ ಇಂಗ್ಲೀಷ್' ತರಗತಿಗಳನ್ನು ಆರಂಭಿಸುವ ಉದ್ದೇಶವಿದ್ದು, ಮುಂದಿನ ದಿನಗಳಲ್ಲಿ ಮಾದರಿ ಶಾಲೆಗಳಲ್ಲಿ ಹಾಗೂ ಹೊಸ ನೇಮಕಾತಿಯಿಂದ ಲಭ್ಯವಾಗುವ ಇಂಗ್ಲೀಷ್ ಶಿಕ್ಷಕರ ಹುದ್ದೆಗಳ ಸಂಖ್ಯೆ ಆಧಾರದ ಮೇಲೆ ಹಂತ ಹಂತವಾಗಿ ಸ್ಪೋಕನ್ ಇಂಗ್ಲೀಷ್ ತರಗತಿ ಆರಂಭಿಸಲಾಗುತ್ತದೆ. ಅದೇ ಪ್ರಕಾರ ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಶಾಲೆಗಳಲ್ಲಿ ನೈತಿಕ ವಿಜ್ಞಾನ ತರಗತಿಗಳನ್ನು ಆರಂಭಿಸುವ ಉದ್ದೇಶವಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವರು ಹೇಳಿದ್ದಾರೆ.

**ಸಮಗ್ರ ಶಿಕ್ಷಣ ಯೋಜನೆಯ ಮೂಲಕ ಶಿಕ್ಷಣದ ಗುಣಮಟ್ಟ ಸುಧಾರಣೆ**

ಸಮಗ್ರ ಶಿಕ್ಷಣ ಯೋಜನೆಯು ಶಾಲಾ ಶಿಕ್ಷಣಕ್ಕಾಗಿ ಒಂದು ಸಮಗ್ರ ಯೋಜನೆಯಾಗಿದ್ದು, ಇದು ಪೂರ್ವ ಪ್ರಾಥಮಿಕ ಶಾಲೆಯಿಂದ ಹನ್ನೆರಡನೇ ತರಗತಿಯವರೆಗೆ ಸಂಪೂರ್ಣ ಶ್ರೇಣಿಯನ್ನು ಒಳಗೊಂಡಿದೆ. ಈ ಯೋಜನೆಯು ಶಾಲಾ ಶಿಕ್ಷಣವನ್ನು ನಿರಂತರವೆಂದು ಪರಿಗಣಿಸುತ್ತದೆ ಮತ್ತು ಶಿಕ್ಷಣದ ಸುಸ್ಥಿರ ಅಭಿವೃದ್ಧಿ ಗುರಿಗೆ ಅನುಗುಣವಾಗಿದೆ. ಈ ಯೋಜನೆಯು ಶಿಕ್ಷಣ ಹಕ್ಕು (ಆರ್.ಟಿ.ಇ) ಕಾಯ್ದೆಯ ಅನುಷ್ಠಾನಕ್ಕೆ ಬೆಂಬಲವನ್ನು ಒದಗಿಸುವುದಷ್ಟೇ ಅಲ್ಲದೆ, ಮಕ್ಕಳ ವೈವಿಧ್ಯಮಯ ಹಿನ್ನೆಲೆ, ಬಹುಭಾಷಾ ಅಗತ್ಯಗಳು, ವಿಭಿನ್ನ ಶೈಕ್ಷಣಿಕ ಸಾಮರ್ಥ್ಯಗಳನ್ನು ಕಾಳಜಿವಹಿಸಿ, ಅವರು ಕಲಿಕಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವ ಸಮಾನ ಮತ್ತು ಅಂತರ್ಗತ ತರಗತಿ ವಾತಾವರಣದೊಂದಿಗೆ ಗುಣಮಟ್ಟದ ಶಿಕ್ಷಣ ಪಡೆಯುವುದನ್ನು ಖಾತ್ರಿಪಡಿಸಿಕೊಳ್ಳಲು ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020ರ ಶಿಫಾರಸ್ಸುಗಳಿಗೆ ಪೂರಕವಾಗಿದೆ.

ಈ ಯೋಜನೆಗೆ ರಾಜ್ಯ ಸರ್ಕಾರ 2022-23 ರಲ್ಲಿ 2624.90 ಕೋಟಿ ರೂಪಾಯಿ ನಿಗದಿಪಡಿಸಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು 861.52 ಕೋಟಿ ರೂಪಾಯಿ. ರಾಜ್ಯ ಸರ್ಕಾರದ ಪಾಲು 1763.38 ಕೋಟಿ ರೂಪಾಯಿ.

**ಸರ್ಕಾರ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಹಲವು ಸೌಲಭ್ಯಗಳು**

ಸರ್ಕಾರ ವಿವಿಧ ತರಗತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಕ್ರೀಡಾ ಸಾಧನೆಗೆ ಆರ್ಥಿಕ ಪ್ರೋತ್ಸಾಹ ನೀಡಲು ಅಲ್ಲದೆ ವೈದ್ಯಕೀಯ ನೆರವು ನೀಡಲು ಹಲವಾರು ಯೋಜನೆ ರೂಪಿಸಿದೆ. ಈ ಯೋಜನೆಯ ಲಾಭ ಪಡೆಯಲು ವಿದ್ಯಾರ್ಥಿಗಳು ಶೈಕ್ಷಣಿಕ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುವ ಅಗತ್ಯವಿದೆ. ರಾಜ್ಯ ಮಟ್ಟದ ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ (ಎನ್ ಟಿ ಎಸ್ ಇ ) ಉತ್ತೀರ್ಣರಾಗಿ ರಾಷ್ಟ್ರಮಟ್ಟದಲ್ಲಿ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯ ವತಿಯಿಂದ ವರ್ಷಕ್ಕೆ 2,000 ರೂಪಾಯಿಯಂತೆ ಎರಡು ವರ್ಷಗಳ ಕಾಲ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದ ಮೂವತ್ತಕ್ಕಿಂತ ಹೆಚ್ಚು ಮಕ್ಕಳು ಅಭ್ಯಾಸ ಮಾಡುತ್ತಿರುವಂತಹ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಈ ಯೋಜನೆಯಲ್ಲಿ 10,000 ರೂಪಾಯಿ ಪ್ರೋತ್ಸಾಹಧನ ನೀಡಲಾಗುತ್ತಿದೆ. ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಅಭಿನಂದನಾ ಫಲಕ ನೀಡಿ ಜಿಲ್ಲಾ ಮಟ್ಟದಲ್ಲಿ ಗೌರವಿಸಲಾಗುತ್ತಿದೆ. ಹಾಗೆಯೇ ಅಪಾಯದ ಸನ್ನಿವೇಶಗಳಲ್ಲಿ ಅಸಾಧರಣ ಧೈರ್ಯ, ಸಮಯ ಪ್ರಜ್ಞೆ ಮತ್ತು ಸಾಹಸ





Downloaded From:www.kpscvaani.com



**ಕೋವಿಡ್–19 ಸಾಂಕ್ರಾಮಿಕ ರೋಗವು ಉಲ್ಬಣಗೊಂಡಿದ್ದ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯು ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ ಮತ್ತು ಸಿ.ಇ.ಟಿ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿತ್ತು.**

ಪ್ರದರ್ಶಿಸಿದ ಮಕ್ಕಳನ್ನು ಗುರುತಿಸಿ ಶೌರ್ಯ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕ್ರೀಡಾ ಪ್ರಶಸ್ತಿ ನೀಡಲಾಗುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಆಯೋಜಿಸಲಾಗುವ ಶಾಲಾ ಕ್ರೀಡೆಗಳಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ 3 ಪ್ರಶಸ್ತಿಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಈ ಪ್ರಶಸ್ತಿ ನೀಡಲಾಗುವುದು. ಈ ಪ್ರಶಸ್ತಿಯನ್ನು ಕ್ರಮವಾಗಿ 3,000 ರೂಪಾಯಿ, 2,500 ರೂಪಾಯಿ ಹಾಗೂ 2,000 ರೂಪಾಯಿಗಳನ್ನು ವೈಯಕ್ತಿಕ ಬಹುಮಾನವಾಗಿ ನೀಡಲಾಗುವುದು. ಹಾಗೂ ಪ್ರಥಮ 3 ಪ್ರಶಸ್ತಿಗಳನ್ನು ಪಡೆದ ತಂಡಗಳಿಗೆ ಕ್ರಮವಾಗಿ 2,000 ರೂಪಾಯಿ, 1,500 ರೂಪಾಯಿ, 1,000 ರೂಪಾಯಿಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತದೆ.

ಅದೇ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುತ್ತದೆ. ಎಸ್ ಎಸ್ ಎಲ್ ಸಿ ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರಿಗೆ 2,000 ರೂಪಾಯಿಯಂತೆ ಪ್ರತಿ ಜಿಲ್ಲೆಗೆ ಹತ್ತು ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಅದರಲ್ಲಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ 5 ಪ್ರಶಸ್ತಿ ನೀಡಿದರೆ, ಇನ್ನುಳಿದ 5 ಪ್ರಶಸ್ತಿಯನ್ನು ಇತರ ಮಾಧ್ಯಮದ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.

ಪಿಯುಸಿಯಲ್ಲಿ ಜಿಲ್ಲೆಗೆ ಅತಿ ಹೆಚ್ಚು ಅಂಕ ಪಡೆದ ಆರು ವಿದ್ಯಾರ್ಥಿಗಳಿಗೆ ತಲಾ 3,000 ರೂಪಾಯಿ ನೀಡಲಾಗುತ್ತದೆ. ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಎರಡು ಪ್ರಶಸ್ತಿ, ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಎರಡು ಪ್ರಶಸ್ತಿ, ಹಾಗೂ ವಾಣಿಜ್ಯ ವಿಷಯದ ವಿದ್ಯಾರ್ಥಿಗಳಿಗೆ ಎರಡು ಪ್ರಶಸ್ತಿಗಳನ್ನು ನೀಡಲಾಗುತ್ತದೆ.

**ವಿದ್ಯಾರ್ಥಿಗಳಿಗೆ "ಸುರಕ್ಷಾ ಪರಿಹಾರ ಯೋಜನೆ"**

ಪ್ರಾಥಮಿಕ ಶಾಲಾ ಹಂತದಿಂದ ಪದವಿ ಹಂತದವರಗೆ ವ್ಯಾಸಂಗ ಮಾಡುತ್ತಿರುವ ರೆಗ್ಯೂಲರ್ ವಿದ್ಯಾರ್ಥಿಗಳು ಈ ಯೋಜನೆಯಡಿ ಬರುತ್ತಾರೆ. ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ವತಿಯಿಂದ **"ವಿದ್ಯಾರ್ಥಿ ಪರಿಹಾರ ಯೋಜನೆ"** ಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ ವಿದ್ಯಾರ್ಥಿಗಳು ಅಪಘಾತಗಳಿಂದ ಮೃತ ಪಟ್ಟರೆ, ವಿದ್ಯಾರ್ಥಿಯ ಪೋಷಕರಿಗೆ 50,000 ರೂಪಾಯಿ ಪರಿಹಾರ ಧನ ನೀಡಲಾಗುತ್ತದೆ.

ಅಪಘಾತ, ವಿದ್ಯುತ್ ಸ್ಪರ್ಶ, ಬೆಂಕಿ ಅನಾಹುತ, ಅನಾರೋಗ್ಯ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಮರಣ ಹೊಂದುವ ವಿದ್ಯಾರ್ಥಿಗಳಿಗೆ ಪರಿಹಾರ ಧನ ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ಮಿಸಲಿಟ್ಟಿರುತ್ತದೆ.

**ವಿದ್ಯಾರ್ಥಿಗಳಿಗೆ ವೈದ್ಯಕೀಯ ಧನಸಹಾಯ**

ಪ್ರಾಥಮಿಕ ಶಾಲಾ ಹಂತದಿಂದ ವಿಶ್ವವಿದ್ಯಾಲಯದ ಹಂತದವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿಯಿಂದ ಧನ ಸಹಾಯ ನೀಡಲಾಗುತ್ತದೆ. ಸುಟ್ಟಗಾಯ, ದೀರ್ಘಕಾಲದ ಅನಾರೋಗ್ಯ, ಅಪಘಾತದಲ್ಲಿ ಗಾಯಗೊಂಡ ವಿದ್ಯಾರ್ಥಿಗಳಿಗೆ ವೈದ್ಯಕೀಯ ಚಿಕಿತ್ಸೆಗಾಗಿ 25 ಸಾವಿರ ಸಹಾಯಧನ ನೀಡಲಾಗುತ್ತದೆ. ಅನಾರೋಗ್ಯಕ್ಕೆ ಒಳಗಾದ ವಿದ್ಯಾರ್ಥಿಗಳು ವೈದ್ಯಕೀಯ ಚಿಕಿತ್ಸೆಯ ಸಮಗ್ರ ವಿವರಗಳನ್ನು ಸಲ್ಲಿಸಬೇಕು. ಮರಣ ಹೊಂದಿದ ವಿದ್ಯಾರ್ಥಿಗಳ ಪೋಷಕರು ಎಫ್ ಐ ಆರ್ ವರದಿ, ಮರಣೋತ್ತರ ಪರೀಕ್ಷಾ ವರದಿ ಮತ್ತು ಸ್ಥಳೀಯ ಪಂಚನಾಮೆ ವರದಿಗಳನ್ನು ಶಾಲಾ ಮುಖ್ಯೋಪಾಧ್ಯಾಯರ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಬೇಕು. ಈ ದುರ್ಘಟನೆಗಳು ನಡೆದ ಆರು ತಿಂಗಳ ಒಳಗೆ ಈ ವರದಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ರಾಜ್ಯದಲ್ಲಿ ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಹಾಗೂ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಎಲ್ಲಾ ರೀತಿಯ ಯೋಜನೆಗಳಿಗೆ ಸರ್ಕಾರ ವಿಶೇಷ ಒತ್ತು ನೀಡಿದೆ. ಕುಟುಂಬದ ಆರ್ಥಿಕ ಸಂಕಷ್ಟದ ಕಾರಣಕ್ಕಾಗಿ ಶಿಕ್ಷಣದಿಂದ ಮಗುವು ವಂಚಿತವಾಗಬಾರದು ಎಂಬ ಉದ್ದೇಶ ಇರಿಸಿಕೊಂಡಿರುವ ಸರ್ಕಾರ ಅದಕ್ಕೆ ಪೂರಕವಾದ ಎಲ್ಲಾ ರೀತಿಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುತ್ತಿದೆ. ಒಟ್ಟಿನಲ್ಲಿ ಸರ್ಕಾರವು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ನಿಟ್ಟಿನಲ್ಲಿ ಉತ್ತಮ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ.



Downloaded From:www.kpscvaani.com

# ಅಲ್ಲಮನ ವಾರಸುದಾರ ಶ್ರೀ ಸಿದ್ದೇಶ್ವರ ಶ್ರೀ

ಜ್ಞಾನ ಋಷಿ ಜೀವನ ನಡೆಸಿದ ಶ್ರೀ ಸಿದ್ದೇಶ್ವರ ಶ್ರೀಗಳ ಬದುಕಿನ ಸೌಂದರ್ಯ ಮತ್ತು ಅಂತಿಮ ವಂದನಾ ನಿವೇದನೆಯು ವಿಶ್ವದ ಆಧ್ಯಾತ್ಮ ವಲಯಕ್ಕೆ ವಿಸ್ಮಯವೆನಿಸಿದ್ದು ವಿಶ್ವ ದಾರ್ಶನಿಕರಾದ ಸಾಕ್ರೆಟಿಸ್, ಪ್ಲಾಟೊ, ಅರಿಸ್ಟಾಟಲ್, ಝೆನ್ ರವರ ಸಾಲಿಗೆ ಸೇರಿದ್ದು ನಮ್ಮ ನೆಲದ ಹೆಮ್ಮೆ, ಗೌರವ...

ವಿಜಯಪುರ ಜಿಲ್ಲೆಯ ಬಿಜ್ಜರಗಿ ಗ್ರಾಮದವರಾದ ಶ್ರೀಗಳು 1940 ರ ಅಕ್ಟೋಬರ್ 24 ರಂದು ಓಗೇಪ್ಪಗೌಡರು ಮತ್ತು ಸಂಗಮ್ಮನವರ ಚೊಚ್ಚಲ ಸುಪುತ್ರರಾಗಿ ಬಸವನಬಾಗೇವಾಡಿ ತಾಲೂಕಿನ ನಂದ್ಯಾಳದ ತಾಯಿಯ ತವರು ಮನೆಯಲ್ಲಿ ಜನಿಸಿದರು. ಬಿಜ್ಜರಗಿಯಲ್ಲಿಯೇ ಪ್ರಾಥಮಿಕ ಶಾಲೆಯ ವಿದ್ಯೆ. 14 ಅಂಕಣದ ಮನೆ ಮತ್ತು 200 ಎಕರೆ ಜಮೀನಿನ ಒಡೆತನವಿದ್ದ ರೈತ ಮನೆತನದ ಹಿರಿಯ ಮಗನಾದರೂ ಆಧ್ಯಾತ್ಮದ ಕಡೆ ಒಲವು. ತಮ್ಮೂರಿನ ಈಶ್ವರ ದೇವಸ್ಥಾನದಲ್ಲಿ ದಿನ ನಿತ್ಯ 2 ರಿಂದ 3 ಗಂಟೆ ಬಾಲ್ಯದಲ್ಲಿಯೇ ಧ್ಯಾನಾವಸ್ತೆ. ವಿಜಯಪುರದಲ್ಲಿ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಯವರ ಪ್ರಭಾವಕ್ಕೆ ಒಳಗಾಗಿ, ಅವರೊಂದಿಗೆ ಆಧ್ಯಾತ್ಮದ ಬದುಕಿನೆಡೆಗೆ ನಡೆದರು.

**ಸತ್ಯವೂ ಇಲ್ಲ, ಅಸತ್ಯವೂ ಇಲ್ಲ, ಸಹಜವೂ ಇಲ್ಲ ಅಸಹಜವೂ ಇಲ್ಲ, ನಾನೂ ಇಲ್ಲ, ನೀನೂ ಇಲ್ಲ, ಇಲ್ಲ, ಇಲ್ಲ ಇಲ್ಲ ಎಂಬುದು ತಾನಿಲ್ಲ, ಗುಹೇಶ್ವರನೆಂಬುದು ತಾ ಬಯಲು.**

ಜಿ.ಬಿ.ಸಾಲಕ್ಕಿ







Downloaded From:www.kpscvaani.com









ಆಧ್ಯಾತ್ಮದೆಡೆಗೆ ಒಲವು ಹೊಂದಿದ್ದ ಸಿದ್ಧೇಶ್ವರರನ್ನು ತಮ್ಮ ಬಳಿಯೇ ಇರಿಸಿಕೊಂಡು ಚಡಚಣದಲ್ಲಿ ಪ್ರವಚನದಲ್ಲಿದ್ದಾಗ ಗುರು ಮಲ್ಲಿಕಾರ್ಜುನ ಶ್ರೀ ಅವರೇ ಅವರ ವಿದ್ಯಾಭ್ಯಾಸದ ಹೊಣೆಯನ್ನು ಹೊತ್ತುಕೊಂಡದ್ದನ್ನು ಆದೇಶಿಸಿದರು.

ನಂತರ ವಿಜಯಪುರದ ವಿಜಯ ಕಾಲೇಜಿನಲ್ಲಿ ಪದವಿ, ಕೊಲ್ಹಾಪುರದ ವಿಶ್ವ ವಿದ್ಯಾಲಯದಿಂದ ತತ್ವಶಾತ್ತ್ರದಲ್ಲಿ ಸ್ನಾತಕೋತ್ತರ ಪದವಿ. ಇವೆಲ್ಲವೂ ಗುರು ಮಲ್ಲಿಕಾರ್ಜುನರ ಪ್ರೇರಣೆಯಲ್ಲಿಯೇ. ತಮ್ಮ 19 ನೆಯ ವಯಸ್ಸಿನಲ್ಲೇ 1959 ರಲ್ಲಿ ಗುರು ಮಲ್ಲಿಕಾರ್ಜುನರ ಪ್ರವಚನ ಮಾಲಿಕೆಯನ್ನು ಲಿಖಿತರೂಪದಲ್ಲಿ ಮುದ್ರಣ ಮಾಡಿ ಕೇವಲ 10 ರೂ. ಗೊಂದು ಪುಸ್ತಕ ಮಾರಿ ಆ ದುಡ್ಡಿನಿಂದ ಗದಗದ ಗುರು ಶ್ರೀ ಶಿವಾನಂದರ ಮಠದ ನಿರ್ಮಾಣ. ಮಲ್ಲಿಕಾರ್ಜುನ ಗುರುಗಳ ಇಚ್ಚೆಯಂತೆ ಶ್ರೀ ಸಿದ್ಧೇಶ್ವರ ಸಂಸ್ಥೆಯಿಂದ ದೇವಸ್ಥಾದ ಪಕ್ಕ ಶ್ರೀ ಶಿವಾನುಭವ ಮಂಟಪದ ಸ್ಥಾಪನೆ. ಅಲ್ಲಿಯೇ ನಿತ್ಯ ಬೆಳಿಗ್ಗೆ ಹಾಗೂ ಸಾಯಂಕಾಲದ ಪ್ರವಚನ. ಶ್ರೀ ಸಿದ್ಧೇಶ್ವರರು ಸಿದ್ಧೇಶ್ವರ ದೇವಸ್ಥಾನದ ಪಕ್ಕದ ಕಪೀಲೇಶ್ವರ ದೇವಸ್ಥಾನದಲ್ಲಿ ದಿನನಿತ್ಯ 4–5 ಗಂಟೆ ಧ್ಯಾನ. ಸಿದ್ಧೇಶ್ವರ ಶ್ರೀಗಳ ಪಠಣಕ್ಕೆ ಮಲ್ಲಿಕಾರ್ಜುನ ಗುರುಗಳ ವಿಶ್ಲೇಷಣೆಯು ವಿಜಯಪುರ ನಗರದ ನಾಗರಿಕ ಸಮಾಜವನ್ನು ಆಧ್ಯಾತ್ಮಿಕ ಶ್ರೀಮಂತಿಕೆಗೆ ಪ್ರೇರೇಪಿಸಿತು.

1980 ರ ನಂತರದಲ್ಲಿ ಗುರು ಮಲ್ಲಿಕಾರ್ಜುನರ ಇಚ್ಚೆಯಂತೆ ನಿರ್ಮಾಣವಾದ ನಗರದ ಉತ್ತರ ದಿಕ್ಕಿನ ವಿಶಾಲವಾದ ನಿವೇಶನದಲ್ಲಿ ಜ್ಞಾನ ಯೋಗಾಶ್ರಮದ ಸ್ಥಾಪನೆ. ಅಲ್ಲಿಯೇ 1985 ರಲ್ಲಿ ಲಿ0ಗೈಕ್ಯ ರಾದ ಗುರು ಮಲ್ಲಿಕಾರ್ಜುನ ಶ್ರೀಗಳ ಸಮಾಧಿ ಪ್ರಣವ ಮಂಟಪ. 70ರ ದಶಕದಿಂದ ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ಪ್ರವಚನ ಜ್ಞಾನಯೋಗಾಶ್ರಮಕ್ಕೆ ಸ್ಥಳಾಂತರ. ಅಲ್ಲಿಂದ ಶ್ರೀ ಮಲ್ಲಿಕಾರ್ಜುನ ಶ್ರೀಗಳ ಜ್ಞಾನ ದಾಸೋಹದ ಸಂಪೂರ್ಣ ಜವಾಬ್ದಾರಿ ಸಿದ್ಧೇಶ್ವರ ಶ್ರೀಗಳ ಮೇಲೆ ಬಿತ್ತು.

ಸ್ವಾಮೀಜಿಗಳು ಬರೆದಿರುವ ಸಿದ್ಧಾಂತ ಶಿಖಾಮಣಿ, ನಿಜಗುಣರ ತತ್ವ, ಭಗವತ್ ಚಿಂತನ, ಪಥಂಜಲಿ ಯೋಗ ಸೂತ್ರ, ನಾರದ ಭಕ್ತಿ ಸೂತ್ರ ಇತ್ತೀಚಿನ ಸೂರ್ಯೋಪನಿಷತ್ತು ಭಕ್ತ ಸಂಕುಲಕ್ಕೆ ಆಧ್ಯಾತ್ಮ ನೆಲೆಯನ್ನು ನೀಡಿತು. ದೇಶ ವಿದೇಶಗಳಲ್ಲಿ ಇವರ ಜ್ಞಾನದಾಸೋಹ ಹೆಸರಾಯಿತು. ಗಹನವಾದ ವೇದಾಂತ

> **ಸಾಧಕನಿಗೆ ಸಾವು ಅಂತ್ಯವಲ್ಲ, ಸಾವಿನ ನಂತರವೂ ಬದುಕುವವನು ಸಾಧಕ ಎಂದು ಸ್ವಾಮಿ ವಿವೇಕಾನಂದರು ಹೇಳಿರುವ ಮಾತು ಸಿದ್ಧೇಶ್ವರ ಸ್ವಾಮೀಜಿ ಅವರಿಗೆ ಅನ್ವಯವಾಗುತ್ತದೆ. ಸ್ವಾಮೀಜಿ ಅವರ ಕಾಲದಲ್ಲಿ ನಾವಿದ್ದೆವು ಎನ್ನುವುದೇ ನಮ್ಮ ಭಾಗ್ಯ. ಅವರು ಯಾವುದೇ ಪಂಥ, ಮತ ಪಾಲಿಸಿದವರಲ್ಲ. ಅವರ ನಡೆ ನುಡಿಯಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ. ಅವರು ಯಾರಿಂದಲೂ ಏನನ್ನೂ ಬೇಡಿಲ್ಲ. ಅವರು ನಮಗೆಲ್ಲಾ ಅಪಾರ ಜ್ಞಾನ ಭಂಡಾರವನ್ನು ಕೊಟ್ಟು ಹೋಗಿದ್ದಾರೆ. ಸಿದ್ಧೇಶ್ವರ ಗುರುಗಳು ನಮಗೆಲ್ಲಾ ಪ್ರೀತಿ, ವಿಶ್ವಾಸ ಹಾಗೂ ಸಂಸ್ಕೃತಿಯನ್ನು ಬಿಟ್ಟು ಹೋಗಿದ್ದಾರೆ. ಅವರ ವಿಚಾರ, ತತ್ವ, ಸಿದ್ಧಾಂತ, ನಡೆ–ನುಡಿಯಲ್ಲಿ ಅವರು ಸದಾಕಾಲ ನಮ್ಮೊಂದಿಗೆ ಇರುತ್ತಾರೆ.**
>
> ಬಸವರಾಜ ಬೊಮ್ಮಾಯಿ
> ಮುಖ್ಯಮಂತ್ರಿಗಳು



Downloaded From:www.kpscvaani.com



ತತ್ವಗಳನ್ನು ಅತ್ಯಂತ ಸರಳವಾಗಿ ಜನಮಾನಸದಲ್ಲಿ ಉಳಿಯುವಂತೆ ವಿವರಿಸುವುದು ಅವರ ವೈಶಿಷ್ಟ್ಯ. ಅವರ ಪ್ರವಚನದ ಭಾಷೆ, ಧಾಟಿ, ಪದ ಪ್ರಯೋಗ, ಉದಾಹರಣೆಗಳ ಮೂಲಕ ಪ್ರಚಲಿತ ಸಂಗತಿಗಳನ್ನು ಸಮ್ಮಿಳಿತಗೊಳಿಸುತ್ತಿದ್ದುದು ಜನರನ್ನು ಸೂಜಿಗಲ್ಲಿನಂತೆ ಸೆಳೆಯುತಿತ್ತು. ಸುಮಾರು 120 ಪುಸ್ತಕಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ ಭಗವತ್ ಚಿಂತನ, ಪಥಂಜಲಿ ಯೋಗ ಸೂತ್ರ, ವಚನ ಸೂತ್ರ ಕುರಿತ ಪುಸ್ತಕಗಳು ಅದ್ಭುತವಾದವು. ಕಾವಿ ಹಾಕಲಿಲ್ಲ, ಬಾಹ್ಯ ಪೂಜೆ ಮಾಡಲಿಲ್ಲ, ಪಾದ ಪೂಜೆಯೂ ಇಲ್ಲ, ದುಡ್ಡು ಮುಟ್ಟಲಿಲ್ಲ, ಆಸ್ತಿ ಮಾಡಲಿಲ್ಲ, ಹಾರ ತುರಾಯಿ ಪಲ್ಲಕ್ಕಿಗಳೂ ಇಲ್ಲ. ಆಧಾರ್, ಚುನಾವಣೆ ಕಾರ್ಡ್‌ಗಳು ಇಲ್ಲ. ಒಟ್ಟಿನಲ್ಲಿ ಅವರ ಆಶಯ "ಇಲ್ಲ, ಇಲ್ಲ ವೆಂಬ ಅಲ್ಲಮರ ಶೂನ್ಯದೆಡೆಗೆ.

> **ತಾವು ಬರೆದ ಪುಸ್ತಕಕ್ಕೆ ಗುರು ಮಲ್ಲಿಕಾರ್ಜುನರ ಹೆಸರು**
>
> ಜ್ಞಾನ ಹಂಚುವ ಮೂಲಕವೇ ಸಂತರೆನಿಸಿಕೊಂಡ ಸಿದ್ದೇಶ್ವರ ಶ್ರೀಗಳು ಅತ್ಯಂತ ಸರಳ ವ್ಯಕ್ತಿಗಳು. ಬೇರೆಯವರಿಂದ ಪುಸ್ತಕ ಬರೆಸಿಕೊಂಡು ತಮ್ಮ ಹೆಸರನ್ನು ಹಾಕಿಕೊಳ್ಳುವವರಿರುವಾಗ ಸಿದ್ದೇಶ್ವರರು 19 ನೇ ವಯಸ್ಸಿನಲ್ಲಿಯೇ ಗುರು ಮಲ್ಲಿಕಾರ್ಜುನ ಸ್ವಾಮಿಗಳ ಪ್ರವಚನಗಳನ್ನು ಬರೆದು ಮಲ್ಲಿಕಾರ್ಜುನ ಸ್ವಾಮಿಗಳ ಹೆಸರಿನಲ್ಲಿ ಪುಸ್ತಕವನ್ನು ಪ್ರಕಟಿಸಿದರು.

ನನ್ನದು-ತನ್ನದೆಂಬ ಮಮಕಾರ ತೊರೆದ ಮಹಾಪುರುಷರಾದ ಶ್ರೀ ಸಿದ್ದೇಶ್ವರ ಸ್ವಾಮಿಗಳು ಸಂತರಷ್ಟೇ ಅಲ್ಲ, ಜ್ಞಾನೋಪಾಸಕರು. ಸಂತರು ಈ ನಾಡಿನಲ್ಲಿ ಬಹಳಷ್ಟು ಜನರು ಇದ್ದಾರೆ, ಆದರೆ ಜ್ಞಾನ ಯೋಗಿಗಳು ಬಹಳ ಅಪರೂಪ. ಹಾಗಾಗಿ ವಿಜಯಪುರದ ಜ್ಞಾನಯೋಗಾಶ್ರಮವು ಜನತೆಗೆ ಜ್ಞಾನದ ದಾಸೋಹವನ್ನು ನೀಡುವ ವಿಶಿಷ್ಟ ಕೇಂದ್ರವಾಗಿದೆ. ಸುತ್ತಮುತ್ತಲಿನ ಜನರು ಇವರ ಪ್ರವಚನ ಕೇಳಲು ಕಾತುರರಾಗಿರುತ್ತಿದ್ದರು. ಯಾವುದೇ ಗ್ರಾಮದಿಂದ ಪ್ರವಚನಕ್ಕೆ ಆಮಂತ್ರಣ ಬಂದರೆ ಇವರು ಗ್ರಾಮವನ್ನು ಸ್ವಚ್ಛ ಗ್ರಾಮ ಮಾಡಿದ ನಂತರ ಬರುತ್ತೇನೆ ಎಂದು ಹೇಳುತ್ತಿದ್ದರಂತೆ.

ಅವರ ಪ್ರವಚನ ಕೇಳುವುದಕ್ಕಾಗಿ ಗ್ರಾಮಸ್ಥರೆಲ್ಲಾ ಸೇರಿಕೊಂಡು ಗ್ರಾಮವನ್ನು ಸ್ವಚ್ಛಗೊಳಿಸುತ್ತಿದ್ದರಂತೆ. ಅವರ ಪ್ರವಚನ ಕೇಳಿದವರು ಅದರಲ್ಲೇ ಅನುರಕ್ತರಾಗಿ ಬಿಡುತ್ತಿದ್ದರು. ಅವರ ಪ್ರವಚನ ಅಷ್ಟು ಪ್ರಭಾವ ಬೀರುತಿತ್ತು. ಪ್ರವಚನವನ್ನು ಎಲ್ಲೇ ಏರ್ಪಡಿಸಿದ್ದರೂ ಸಹ ಅಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಜನ ಸೇರುತ್ತಿದ್ದರು. ಸರಳ ಬದುಕಿನ ಜೊತೆಗೆ ಸಿದ್ದೇಶ್ವರ ಸ್ವಾಮೀಜಿ ಅವರು ಪ್ರಕೃತಿ, ಪ್ರಾಣಿ-ಪಕ್ಷಿ ಮತ್ತು ಸ್ವಚ್ಛತೆಯ ಕುರಿತು ಹೆಚ್ಚಿನ ಕಾಳಜಿ ಹೊಂದಿದ್ದರು. ಅವರ ಪ್ರವಚನ ಪ್ರತಿಯೊಬ್ಬರ ಜೀವನದಲ್ಲಿ ಪರಿವರ್ತನೆಯನ್ನು ತರುತಿದ್ದುದಲ್ಲದೆ ಶಾಂತಿಯುತ ಮತ್ತು ಸಂತೋಷದ ಜೀವನಕ್ಕೆ ಕಾರಣವಾಗುತಿತ್ತು. ಪ್ರಸಕ್ತದಲ್ಲಿ ನಾಗರಿಕ ಸಮಾಜವನ್ನು ಕಾಡುವ ವಾಸ್ತು ಶಾಸ್ತ್ರವೆಂಬುದನ್ನು ವೈಚಾರಿಕವಾಗಿ ತಿಳಿಗೊಳಿಸುತ್ತ ಬಾಗಿಲು, ಕಿಟಕಿಯ ದಿಕ್ಕುಗಳ ಅನಾವಶ್ಯ ವಿಚಾರಗಳನ್ನು "ಕಲ್ಲು ದೇವರಲ್ಲ, ಮಣ್ಣು ದೇವರಲ್ಲ......ತನ್ನ ತಾ ತಿಳಿದಡೆ ತಾನೇ ದೇವರು ನೋಡಾ ಅಪ್ರಮಾಣ ಕೂಡಲಸಂಗಮದೇವಾ" ಎಂಬ ಬಸವ ತತ್ವವನ್ನು ಸಾರಿದ ಮಹಾ ನಿರಾಡಂಬರ ಸುಜ್ಞಾನ ಮಹಾಂತ ಮೂರ್ತಿ ಶ್ರೀ ಗುರು ಸಿದ್ದೇಶ್ವರರು.






Downloaded From:www.kpscvaani.com

## ಅಂತಿಮ ಅಭಿವಂದನ ಪತ್ರ

ಸ್ವಾಮೀಜಿಗಳು ತಮ್ಮ ಸಾವಿನ ನಂತರ ಅಂತ್ಯಸಂಸ್ಕಾರವು ಹೇಗಿರಬೇಕೆಂದು ಕಾಡಸಿದ್ದೇಶ್ವರ ಸ್ವಾಮೀಜಿ ಮತ್ತು ಇಬ್ಬರು ನ್ಯಾಯಾಧೀಶರ ಸಮ್ಮುಖದಲ್ಲಿ ಅಂತಿಮ ಅಭಿವಂದನ ಪತ್ರವನ್ನು ಬರೆದಿಟ್ಟಿದ್ದರು. ದೇಹವನ್ನು ಹೂಳುವುದು ಬೇಡ. ದೇಹವನ್ನು ಅಗ್ನಿಗೆ ಅರ್ಪಿಸಿ, ಅಸ್ಥಿಯನ್ನು ನದಿ ಅಥವಾ ಸಮುದ್ರದಲ್ಲಿ ಬಿಡಬೇಕು. ಸ್ಮಾರಕ ಮಾಡಿ ಪೂಜೆ ಮಾಡಬಾರದು ಎಂದು ತಿಳಿಸಿದ್ದಾರೆ. ಅದರಂತೆ ಅವರ ಅಂತಿಮ ಸಂಸ್ಕಾರವನ್ನು ಸರ್ಕಾರಿ ಗೌರವದೊಂದಿಗೆ ನೆರವೇರಿಸಲಾಯಿತು.



ಕಳೆದ ವರ್ಷ ಆಶ್ರಮದಲ್ಲಿ ಸಿರಿಧಾನ್ಯ ಹಾಗೂ ಶಾಖಾಹಾರದ ಪ್ರದರ್ಶನದ ಮೂಲಕ ಅನ್ನದಾತನ ಸ್ಮರಣೆ, ಸ್ವಾತಂತ್ರ್ಯದ ಅಮೃತ ಮಹೋತ್ಸವದ 15/8/22 ರಂದು ದೇಶ ಕಾಯ್ದ ನೂರಕ್ಕೂ ಹೆಚ್ಚು ಮಾಜಿ ಸೈನಿಕರಿಗೆ ಸನ್ಮಾನ ಮತ್ತು 100 ಸಂವತ್ಸರ ಕಂಡ ಹಿರಿಯರ ಸ್ಮರಣೆ "ನೂರರ ಅಂಗಳದಲ್ಲಿ ಹಿರಿಯರು" ಎಂಬ ವಿನೂತನ ಸನ್ಮಾನ ಸಮಾರಂಭ ಬುದ್ಧೀಜಿಗಳಿಗೆ ಬಹಳೇ ಸಂತೋಷ ತಂದಿತ್ತು. ಯಾವುದೇ ಬಿರುದು, ಗೌರವ, ಪ್ರಶಸ್ತಿ ಮತ್ತು ಸನ್ಮಾನಗಳು ತಮಗೆ ಬೇಡವೆಂದು ಹೇಳಿದ ಅತ್ಯಂತ ಸರಳ ಜೀವಿ. ಸರ್ಕಾರವು ಆಶ್ರಮಕ್ಕೆ ಅನುದಾನ ನೀಡಲು ಮುಂದೆ ಬಂದಾಗ ನಯವಾಗಿ

## ಪದ್ಮಶ್ರೀ ಪ್ರಶಸ್ತಿ ನಿರಾಕರಿಸಿದ ಸ್ವಾಮೀಜಿ

ಭಾರತ ಸರ್ಕಾರವು ನೀಡುವ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಗಳ ಮೇಲೆ ನನಗೆ ಅಪಾರ ಗೌರವವಿದೆ. ಪದ್ಮಶ್ರೀ ಪ್ರಶಸ್ತಿ ಘೋಷಿಸಿದ್ದಕ್ಕೆ ಧನ್ಯವಾದಗಳು. ಆದರೆ ನಾನೊಬ್ಬ ಸರಳ ವ್ಯಕ್ತಿ. ಸಾಮಾನ್ಯ ಜೀವನ ನಡೆಸುತ್ತಾ, ಆಧ್ಯಾತ್ಮಿಕ ಬೋಧನೆಯ ಮೂಲಕ ಜನರ ಜೀವನ ಉದಾತ್ತಗೊಳಿಸುವುದು ನನ್ನ ಉದ್ದೇಶ . ಹಾಗಾಗಿ ಪ್ರಶಸ್ತಿಗಳ ಅವಶ್ಯಕತೆಯು ನನಗಿಲ್ಲ. ಎಲ್ಲ ಗೌರವಾದರಗಳೊಂದಿಗೆ ಈ ಪ್ರಶಸ್ತಿಯನ್ನು ಹಿಂದಿರುಗಿಸುತ್ತಿದ್ದೇನೆ. ಅನ್ಯಥಾ ಭಾವಿಸದಿರಿ ಎಂದು ಹೇಳುವ ಮೂಲಕ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ಪದ್ಮಶ್ರೀ ಪ್ರಶಸ್ತಿಯನ್ನು ನಿರಾಕರಿಸಿದರು.

ನಿರಾಕರಿಸಿದ್ದರು. ಭಕ್ತರ ಆಶ್ರಮ ಭಕ್ತರಿಂದಲೇ ನಡೆಯಬೇಕೆಂಬುದು ಅವರ ಆಶಯ.

ಕೆರೆಯ ನೀರನ್ನು ಕೆರೆಗೆ ಚೆಲ್ಲಿ, ಎಂಬ ದಾಸ ವಾಣಿಯಂತೆ ನನ್ನದೇನಿದೆ, ಎಲ್ಲವೂ ಭಗವಂತನದು, ಇಲ್ಲಿರುವ ಎಲ್ಲಾ ಮನುಷ್ಯನಲ್ಲೂ ದೇವರನ್ನು ಕಾಣಬೇಕು. ನಾನು ನನ್ನದೆಂಬ ಮಮಕಾರ ಸಲ್ಲದು. ಇಹಪರ ಎರಡೂ ಒಂದೆ ಎಂದು ಸಾರುತ್ತಾ ಅದರಂತೆ ನಡೆದರು ಸಿದ್ದೇಶ್ವರ ಯೋಗಿಗಳು.

ಈ ವಿಶ್ವಸಿರಿಯತ್ತ ನೋಡಿದಾಗ ಯಾರೂ ಬಡವರಲ್ಲ, ಸಿರಿವಂತರಲ್ಲ, ನಾವೆಲ್ಲರೂ ಸಮಾನರು, ಸಂತೋಷಿಗಳು. ತನ್ನನ್ನೂ, ತನ್ನ ಸೌಖ್ಯವನ್ನೂ ಮರೆತು ಪರರ ಹಿತಕ್ಕಾಗಿ ಮಾಡುವ ಕಾರ್ಯವೇ ತಪಸ್ಸು. ಅದರಿಂದ ಸತ್ಯ ಸಾಕ್ಷಾತ್ಕಾರ. ನಾವೀ ಜಗತ್ತಿನಲ್ಲಿ ಸ್ವಲ್ಪ ನಿರ್ಭಯರಾಗಿರಬೇಕು. ಯಾವುದಕ್ಕೂ ಬಹಳ ಹೆದರಬಾರದು. ಇಲ್ಲಿ ಪ್ರಿಯ, ಅಪ್ರಿಯ, ಬೇಕಾದ, ಬೇಡಾದ ಸಂಗತಿ ಎಲ್ಲಾ ಇದೆ. ನಾವೇ ಈ ಜಗತ್ತಿನ ಕೇಂದ್ರ ಬಿಂದುವಲ್ಲ, ನಮ್ಮಂಥ ಅಸಂಖ್ಯ ಜೀವರಾಶಿಗಳಿವೆ. ಕಾರಣ ನಮಗಾಗಿ ಈ ಜಗತ್ತಲ್ಲ, ಈ ಜಗತ್ತಿನಲ್ಲಿ ನಾವು ನಮ್ಮ ಬದುಕನ್ನು ಕಟ್ಟಿಕೊಂಡಿದ್ದೇವೆ. ಆದ್ದರಿಂದ ನಾವೀ ಜಗತ್ತಿನೊಂದಿಗೆ ಹೊಂದಿಕೊಂಡು ಬಾಳಬೇಕು. ಕತ್ತಲೆ ಬಂದಾಗ ಕತ್ತಲನ್ನೇ ಸ್ವೀಕರಿಸಬೇಕು. ಬೆಳಕು ಬಂದಾಗ ಬೆಳಕನ್ನು ಸ್ವೀಕರಿಸಬೇಕು. ಹಾಗೆಯೇ ಜೀವನದಲ್ಲಿ ಸುಖ-ದುಃಖ, ಮಾನಾ-ಪಮಾನ ಏನೇ ಬರಲಿ ಅದನ್ನು ಸ್ವೀಕರಿಸುವ ಮನಸ್ಥಿತಿ ನಮಗಿರಬೇಕು ಎಂದು ಶ್ರೀಗಳು ಹೇಳಿದ್ದಾರೆ.

'ಎರಡನೇ ವಿವೇಕಾನಂದರು', 'ನಡೆದಾಡುವ ದೇವರು', 'ಜೇಬಿಲ್ಲದ ಅಂಗಿಯ ಸಂತ' ಎಂದೆಲ್ಲಾ ಭಕ್ತರಲ್ಲಿ ಪ್ರಸಿದ್ಧರಾಗಿದ್ದ ಸಿದ್ದೇಶ್ವರರು ತಮ್ಮ ಅಂತಿಮ ಕಾಲ ಸನಿಹಿಸುತ್ತಿರುವುದಕ್ಕೆ ಒಂದು ಚೂರು ಅಂಜಲಿಲ್ಲ. ತಾವು ಹೋಗುವ ಸಮಯ ಬಂದಾಗಿದೆ ಎಂದು ಹೇಳಿ, ವೈದ್ಯಕೀಯ ಸೌಲಭ್ಯ ಪಡೆಯಲು ಕೂಡ ನಿರಾಕರಿಸಿದರು. ಜೈನ ಧರ್ಮದಂತೆ ಆಹಾರ ಮತ್ತು ಜಲವನ್ನು ತ್ಯಜಿಸುವ ಮೂಲಕ ಸಲ್ಲೇಖನ ವ್ರತ ಕೈಗೊಂಡು ವೈಕುಂಠ ಏಕಾದಶಿ (2/1/2023) ಯಂದು ಬಯಲಲ್ಲಿ ಬಯಲಾದರು. ಅವರ ಅಂತಿಮ ಯಾತ್ರೆಯು 25 ಲಕ್ಷ ಭಕ್ತರ ಸಮೂಹದಲ್ಲಿ ನಡೆದಿದು ಒಂದು ದಾಖಲೆ. ತಾವು ಅಗ್ನಿಗೆ ಸೇರಿ ಆಶ್ರಮದ ಗಿಡ, ಗಂಟಿ, ಹೂ ಗಳಿಲ್ಲಿರುವುದಾಗಿ ಹೇಳಿ ವಿಶ್ವ ದಾರ್ಶನಿಕರ ಸಾಲಿಗೆ ನಡೆದರು.

ನುಡಿದಂತೆ ನಡೆದ, ನಡೆದಂತೆ ನುಡಿಯುವ ಮೂಲಕ ಲಕ್ಷಾಂತರ ಜನರ ಸಹೃದಯಲ್ಲಿ ನೆಲೆಸಿರುವ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ಇಹಲೋಕವನ್ನು ತ್ಯಜಿಸಿ ನಿಸರ್ಗದಲ್ಲಿ ಲೀನರಾಗಿರುವುದರಿಂದ ನಿಸರ್ಗ ಇರುವವರೆಗೂ ಅವರು ನಿಸರ್ಗದೊಟ್ಟಿಗೆ ನಮ್ಮೊಂದಿಗೆ ನೆಲೆಸಿರುತ್ತಾರೆ. ■



Downloaded From:www.kpscvaani.com



# ನೇಕಾರರ ಶ್ರೇಯೋಭಿವೃದ್ಧಿಗಾಗಿ ಸರ್ಕಾರದ ಕ್ರಮಗಳು

**ಜವಳಿ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡುತ್ತಿರುವ ನೇಕಾರರ ಶ್ರೇಯೋಭಿವೃದ್ಧಿಗಾಗಿ ಸರ್ಕಾರವು ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳನ್ನು ಒದಗಿಸುತ್ತಿದೆ.**

ಬಿ.ಜಿ.ಪೂರ್ಣಿಮ

ರಾಜ್ಯವನ್ನು ಜವಳಿ ಉದ್ಯಮದಲ್ಲಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸುವ ಸಲುವಾಗಿ ನೇಕಾರರ ಉತ್ಪನ್ನಗಳಿಗೆ ಬ್ರಾಂಡಿಂಗ್ ಒದಗಿಸಲು ಸರ್ಕಾರ ತೀರ್ಮಾನಿಸಿದೆ.

ಇಳಕಲ್ ಸೀರೆ ಸೇರಿದಂತೆ ನೇಕಾರರ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಬ್ರ್ಯಾಂಡಿಂಗ್ ದೊರೆತಾಗ ಉತ್ಪಾದನೆ ಹಾಗೂ ಆರ್ಥಿಕತೆ ಹೆಚ್ಚಾಗುತ್ತದೆ. ಹಾಗಾಗಿ ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗೆ ಬೆಳಗಾವಿಯಲ್ಲಿ ತಿಳಿಸಿದ್ದಾರೆ.

ಸರ್ಕಾರವು ನೇಕಾರರ ಅನೇಕ ಬೇಡಿಕೆಗಳನ್ನು ಈಡೇರಿಸಿದ ಸಲುವಾಗಿ ನೇಕಾರರ ಮುಖಂಡರು ಸುವರ್ಣ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸನ್ಮಾನಿಸಿದರು. ಸನ್ಮಾನವನ್ನು ಸ್ವೀಕರಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ನೇಕಾರರಿಗೆ ಈ ಭರವಸೆ ನೀಡಿದ್ದಾರೆ.

ಕರ್ನಾಟಕವು ದೇಶದಲ್ಲೇ ಅತಿಹೆಚ್ಚು ಜವಳಿ ರಫ್ತು ಮಾಡುವ ರಾಜ್ಯವಾಗಿದೆ. ಹಾಗಾಗಿ ಮುಂಬರುವ ದಿನಗಳಲ್ಲಿ ಜವಳಿ ನೀತಿಯಲ್ಲಿ ಸಾಕಷ್ಟು ಬದಲಾವಣೆ ತರುವ ಜೊತೆಗೆ ಜವಳಿ ಉತ್ಪನ್ನಗಳಿಗೆ ಬ್ರಾಂಡಿಂಗ್ ದೊರಕಿಸಿಕೊಡುವ ಮೂಲಕ ರಾಜ್ಯವನ್ನು ಜವಳಿ ಉದ್ಯಮದಲ್ಲಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸಲು ಮುಖ್ಯಮಂತ್ರಿ ಅವರು ಮತ್ತು ಕೈಮಗ್ಗ ಮತ್ತು ಜವಳಿ ಇಲಾಖೆಯ ಸಚಿವರಾದ ಶಂಕರ್ ಬ. ಪಾಟೀಲ್ ಮುನೇನಕೊಪ್ಪ ಅವರು ನಿರ್ಧರಿಸಿದ್ದಾರೆ. ನಮ್ಮ ರಾಜ್ಯದ ಇಳಕಲ್ ಸೇರೆ ಸಾಕಷ್ಟು ಪ್ರಸಿದ್ಧಿ ಹೊಂದಿದ್ದು, ಈ ಸೀರೆಗಳು ರಾಷ್ಟ್ರಮಟ್ಟಕ್ಕೆ ಬ್ರಾಂಡಿಂಗ್ ಮಾಡುವುದಕ್ಕಾಗಿ ಅಮೇಜಾನ್ ನಂತಹ ಆನ್‌ಲೈನ್ ವೇದಿಕೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ.



Downloaded From:www.kpscvaani.com



## ಪವರ್ ಲೂಮ್ ನೇಕಾರರಿಗೂ ನೇಕಾರ ಸಮ್ಮಾನ್ ಯೋಜನೆ

ನೇಕಾರ ಸಮ್ಮಾನ ಯೋಜನೆಯನ್ನು ವಿದ್ಯುತ್ ಕೈಮಗ್ಗದಲ್ಲಿ ಕೆಲಸ ಮಾಡುವ ನೇಕಾರರಿಗೂ ವಿಸ್ತರಿಸಲಾಗಿದೆ. ಇದು ನೇಕಾರರಿಗೆ ಸಂಕ್ರಾಂತಿ ಹಬ್ಬದ ಕಾಣಿಕೆಯಾಗಿದೆ. ವೃತ್ತಿಪರ ನೇಕಾರ ಸಮುದಾಯಕ್ಕೆ ನೀಡಲಾಗುತ್ತಿದ್ದ ಶೇ. 30 ರ ಸಹಾಯಧನವನ್ನು ಶೇ. 50 ಕ್ಕೆ ಹೆಚ್ಚಿಸಲಾಗಿದ್ದು, ನೇಕಾರರ ಕಾಲೋನಿಗಳಲ್ಲಿ ವಾಸಿಸುವವರಿಗೆ ರಹವಾಸಿ ಪತ್ರಗಳನ್ನು ನೀಡಲು ಸರ್ಕಾರವು ತೀರ್ಮಾನಿಸಿದೆ.



ತಮ್ಮ ವೃತ್ತಿಯಿಂದಾಗಿ ನೇಕಾರರ ಆರೋಗ್ಯ ಕ್ಷೀಣಿಸುತ್ತಿರುವ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆ. ನೇಕಾರರು ತಯಾರು ಮಾಡಿದ ಸೀರೆ 50 ಸಾವಿರ ರೂ. ಗಳವರೆಗೂ ಮಾರಾಟವಾಗಬಹುದು. ಆದರೆ ನೇಕಾರರಿಗೆ ಲಾಭಾಂಶ ದೊರೆಯುವುದಿಲ್ಲ. ಅಮೇಜಾನ್ ನಂತಹ ಆನ್‌ಲೈನ್ ಮಾರಾಟದ ವ್ಯವಸ್ಥೆ ದೊರಕಿಸಿದರೆ ನೇಕಾರರಿಗೆ ಹೆಚ್ಚಿನ ಲಾಭಾಂಶ ದೊರಕಲಿದೆ ಎಂಬುದು ಸರ್ಕಾರದ ಉದ್ದೇಶವಾಗಿದೆ.

ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ನೇಕಾರರಿಗೆ ಸ್ಪಂದಿಸಿದಂತೆ ಬೇರೆ ಯಾವ ಸರ್ಕಾರವೂ ಸ್ಪಂದಿಸಿಲ್ಲ. ನೇಕಾರರ ಕಷ್ಟದ ಅರಿವು ಹೊಂದಿರುವುದರಿಂದಲೇ ಸರ್ಕಾರವು ನೇಕಾರರ ಅಭಿವೃದ್ಧಿಗಾಗಿ ಹಲವು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಬ್ರಾಂಡಿಂಗ್ ಒದಗಿಸಿಕೊಡುವ ಹೊಸ ಯೋಜನೆಯ ಜೊತೆಗೆ ಸಚಿವರಾದ ಶಂಕರ ಪಾಟೀಲ್ ಮುನೇನಕೊಪ್ಪ ಅವರು ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚನೆ ನಡೆಸಿ ನೇಕಾರರ ಶ್ರೇಯೋಭಿವೃದ್ಧಿಗಾಗಿ ಮತ್ತಷ್ಟು ಯೋಜನೆಗಳನ್ನು ಹಮ್ಮಿಕೊಳ್ಳಲು ಮುಂದಾಗಿದ್ದಾರೆ.

**ನೇಕಾರರಿಂದ ಸಮವಸ್ತ್ರ ಖರೀದಿ:**

ಮನೆಯಲ್ಲಿ ನೇಕಾರಿಕೆ ಮಾಡುವುದನ್ನು ಗುಡಿಕೈಗಾರಿಕೆ ಎಂದು ಪರಿಗಣಿಸಿ, ರಾಜ್ಯ

> ನೇಕಾರರಿಗೆ ನೂರಾರು ವರ್ಷಗಳ ಇತಿಹಾಸವಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ವಿದೇಶಿ ಬಟ್ಟೆಯನ್ನು ತ್ಯಜಿಸುವ ಸಂದರ್ಭದಲ್ಲಿ ಸ್ವದೇಶಿ ಬಟ್ಟೆ ತಯಾರಿಕೆಯಲ್ಲಿ ಸಂಪೂರ್ಣ ಬೆಂಬಲ ನೀಡಿದರು. ನೇಕಾರಿಕೆ ಸಮಾಜ ಅತ್ಯಂತ ಪ್ರಾಮಾಣಿಕ ಹಾಗೂ ಸರಳ ಸಜ್ಜನ ಸಮಾಜ. ದೊಡ್ಡ ಪ್ರಮಾಣದ ಕೈಗಾರಿಕೆಗಿಂತ, ಹೆಚ್ಚು ಜನರಿಗೆ ಉದ್ಯೋಗ ನೀಡುವ ಕೆಲಸವೇ ಮೇಲು ಎಂದು ಮಹಾತ್ಮಾ ಗಾಂಧಿ ಹೇಳಿದ್ದಾರೆ. ಜವಳಿ ಕ್ಷೇತ್ರದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳಿವೆ. ಪಾರಂಪರಿಕವಾದ, ನವೀಕರಣಗೊಳ್ಳುತ್ತಿರುವ ನೇಕಾರಿಕೆಯನ್ನು ಪೋಷಿಸುವುದು ದೇಶ ಹಾಗೂ ರಾಜ್ಯದ ಆರ್ಥಿಕತೆಯ ಹಿತದೃಷ್ಟಿಯಿಂದ ಬಹಳ ಮುಖ್ಯವಾಗಿದೆ.
>
> | ಬಸವರಾಜ ಬೊಮ್ಮಾಯಿ
> ಮುಖ್ಯಮಂತ್ರಿಗಳು





Downloaded From:www.kpscvaani.com

ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ವಿನಾಯ್ತಿ ಮಾಡಲಾಗಿದೆ. ನೇಕಾರರ ಉತ್ಪನ್ನಗಳು ಶಿಕ್ಷಣ ಇಲಾಖೆಯ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಖರೀದಿಸಲಾಗುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ನೀಡಲಾಗುವ ಸಮವಸ್ತ್ರಗಳ ತಯಾರಿಕೆಗೆ ಆದೇಶ ನೀಡಲಾಗುತ್ತಿದೆ. ಸರ್ಕಾರ ನೇಕಾರ ನಿಗಮಗಳ ಉತ್ಪಾದನಾ ಸಾಮರ್ಥ್ಯದ ಅನುಗುಣವಾಗಿ ಸಮವಸ್ತ್ರ ಪೂರೈಕೆ ಪ್ರಮಾಣ ನಿಗದಿಪಡಿಸಿ, ಉಳಿದ ಪ್ರಮಾಣಕ್ಕೆ ಟೆಂಡರ್ ಕರೆಯಲಾಗುತ್ತದೆ. ವಿವಿಧ ಇಲಾಖೆಗಳ ಸಮವಸ್ತ್ರದ ಅಗತ್ಯತೆಯ ಶೇ. 25 ರಷ್ಟನ್ನು ಕೈಮಗ್ಗ ನಿಗಮದ ಮೂಲಕ ಖರೀದಿಸಲು ತೀರ್ಮಾನಿಸಲಾಗಿದೆ.



**ನೇಕಾರರಿಗೆ 2 ಲಕ್ಷ ರೂ.ವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ:**

ನೇಕಾರರಿಗೆ 2 ಲಕ್ಷ ರೂ.ವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಒದಗಿಸಲು ಸರ್ಕಾರವು ನಿರ್ಧರಿಸಿದೆ. ತಮಿಳುನಾಡು ರಾಜ್ಯದ ಮಾದರಿಯಲ್ಲಿ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ವಿದ್ಯುತ್ ಹಾಗೂ ಫಿಕ್ಸೆಡ್ ಡೆಪಾಸಿಟ್‌ನಲ್ಲಿ ಶೇ.50 ರಷ್ಟು ರಿಯಾಯ್ತಿ ನೀಡಲು ತೀರ್ಮಾನಿಸಲಾಗಿದೆ. ಅಸಂಘಟಿತ ವಲಯದಲ್ಲಿರುವ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳನ್ನು ವೃತ್ತಿಪರ ಕೂಲಿ ನೇಕಾರರು ಸೇರಿದಂತೆ ಅಸಂಘಟಿತ ಕಾರ್ಮಿಕರಿಗೆ ಈ ಸೌಲಭ್ಯ ದೊರೆಯುವಂತೆ ಯೋಜನೆಯನ್ನು ಮುಂದಿನ ಆಯವ್ಯಯದಲ್ಲಿ ರೂಪಿಸಲಾಗುತ್ತಿದೆ. ಘೋಷಣೆ ಮಾಡಿರುವ ಯೋಜನೆಗಳಿಗೆ ಶೀಘ್ರದಲ್ಲೇ ಆದೇಶ ಹೊರಡಿಸಲಾಗುತ್ತದೆ.

**ನೇಕಾರರ ಮಕ್ಕಳಿಗೆ ವಿದ್ಯಾನಿಧಿ:**

ನೇಕಾರರ ಮಕ್ಕಳಿಗೂ ವಿದ್ಯಾನಿಧಿ ಯೋಜನೆಯನ್ನು ವಿಸ್ತರಿಸಲು ನಿರ್ಧರಿಸಿರುವ ಸರ್ಕಾರವು ಜನವರಿ ಮಾಹೆಯ ಅಂತ್ಯದೊಳಗೆ ನೇಕಾರರ ಮಕ್ಕಳಿಗೆ ವಿದ್ಯಾನಿಧಿ ಯೋಜನೆಯಡಿ ಪ್ರೋತ್ಸಾಹಕ ಧನವನ್ನು ಒದಗಿಸಲಿದೆ. ಮೊದಲ ಹಂತದಲ್ಲಿ 46 ಸಾವಿರ ನೇಕಾರ ಕುಟುಂಬಗಳ ವಿದ್ಯಾರ್ಥಿಗಳು ವಿದ್ಯಾನಿಧಿ ಯೋಜನೆಯಡಿ ಸೌಲಭ್ಯವನ್ನು ಪಡೆದುಕೊಳ್ಳಲಿದ್ದಾರೆ.

**ನೇಕಾರ ಸಮ್ಮಾನ್ ಯೋಜನೆ:**

ನೇಕಾರರ ಕಸುಬನ್ನು ಉನ್ನತೀಕರಿಸಿ ಉಳಿಸುವುದು ಬಹಳ ಮುಖ್ಯ. ಬಹಳ ಗಂಟೆಗಳ ಕಾಲ ಹತ್ತಿಯ ಮಧ್ಯೆಯೆ ಕೆಲಸ ಮಾಡಬೇಕಾಗುವುದರಿಂದ ನೇಕಾರರಿಗೆ ಅಸ್ತಮಾ, ಟಿಬಿಯಂತಹ ಸಮಸ್ಯೆಗಳು ಕಾಡುತ್ತವೆ. ಆದ್ದರಿಂದ ಕೈಮಗ್ಗ ನೇಕಾರರ ಕಾಳಜಿ ವಹಿಸಲು ನೇಕಾರ ಸಮ್ಮಾನ್ ಯೋಜನೆಯಡಿ 2000 ರೂ.ಗಳ ಆರ್ಥಿಕ ನೆರವನ್ನು 5000 ರೂ.ಗಳಿಗೆ ಸರ್ಕಾರವು ಹೆಚ್ಚಿಸಿದೆ. ಡಿಸೆಂಬರ್ 16 ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೇಕಾರ ಸಮ್ಮಾನ್ ಯೋಜನೆಯಡಿ 46,864 ಫಲಾನುಭವಿಗಳಿಗೆ ತಲಾ 5000 ರೂ.ಗಳಂತೆ ಒಟ್ಟು 23.43 ಕೋಟಿ ರೂಗಳ ಆರ್ಥಿಕ ನೆರವನ್ನು ನೇರವಾಗಿ ಕೈಮಗ್ಗ ನೇಕಾರರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಸಹಾಯಧನವನ್ನು ವರ್ಗಾವಣೆ ಮಾಡಿದರು.

ಅಲ್ಲದೆ ವಿದ್ಯುತ್ ಕೈಮಗ್ಗದಲ್ಲಿ ಕೆಲಸ ಮಾಡುತ್ತಿರುವ ನೇಕಾರರಿಗೂ ನೇಕಾರ ಸಮ್ಮಾನ ಯೋಜನೆಯನ್ನು ವಿಸ್ತರಿಸಲಾಗಿದೆ. 2 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ, 5 ಎಚ್.ಪಿ ವರೆಗೆ ಉಚಿತ ವಿದ್ಯುತ್ ನೀಡಲು ಕೂಡ ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದ್ದಾರೆ.

ಆರ್ಥಿಕ ಸಂಕಷ್ಟದಲ್ಲಿರುವ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಚಟುವಟಿಕೆಯಲ್ಲಿ ತೊಡಗಿರುವ ನೇಕಾರರು ಮತ್ತು ಕಾರ್ಮಿಕರಿಗೂ 'ನೇಕಾರ ಸಮ್ಮಾನ್' ಯೋಜನೆಯಡಿ 5000 ರೂ. ಆರ್ಥಿಕ ನೆರವನ್ನು ಒದಗಿಸುವುದಾಗಿ ಸರ್ಕಾರವು ಭರವಸೆಯನ್ನು ನೀಡಿತ್ತು. ಆ ಭರವಸೆಯನ್ನು ಮುಖ್ಯಮಂತ್ರಿ ಅವರು ಈಡೇರಿಸಿದ್ದಾರೆ. ಅವರು ಜನವರಿ 11 ರಂದು ಈ ಯೋಜನೆಯಡಿ ನೋಂದಾಯಿತ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಚಟುವಟಿಕೆಯಲ್ಲಿ ತೊಡಗಿರುವ ಒಟ್ಟು 102980 ನೇಕಾರರು ಹಾಗೂ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮುಖಾಂತರ ವಾರ್ಷಿಕ ಆರ್ಥಿಕ ನೆರವು 5000 ರೂ.ಗಳಂತೆ ಒಟ್ಟು ರೂ.5149.00 ಲಕ್ಷಗಳನ್ನು ವರ್ಗಾವಣೆ ಮಾಡಿದರು.

**ವೃತ್ತಿಪರ ನೇಕಾರರಿಗೆ ನೀಡುವ ಸಹಾಯಧನ ಶೇ.50 ರಷ್ಟಕ್ಕೆ ಹೆಚ್ಚಳ:**

ವೃತ್ತಿಪರ ನೇಕಾರರ ಕೈಮಗ್ಗಕ್ಕೆ ಕೈಗಾರಿಕಾ ಇಲಾಖೆಯಿಂದ ನೀಡಲಾಗುತ್ತಿದ್ದ ಶೇ. 30 ರಷ್ಟು ಸಹಾಯಧನವನ್ನು ಶೇ. 50 ರಷ್ಟು ಹೆಚ್ಚಿಸಬೇಕು ಎಂಬ ನೇಕಾರರ ಬೇಡಿಕೆಗೆ ಸರ್ಕಾರವು ಒಪ್ಪಿಗೆ ನೀಡಿದೆ. ಇನ್ನು ಜನವಸತಿ ಪ್ರದೇಶದಲ್ಲಿರುವ ನೇಕಾರರಿಗೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ನೀಡಲು ತೀರ್ಮಾನಿಸಲಾಗಿದೆ. ಮನೆಯಲ್ಲಿಯೇ ಉದ್ಯೋಗ ನಡೆಸುತ್ತಿರುವ ನೇಕಾರರಿಗೆ "ಗುಡಿ ಕೈಗಾರಿಕೆ"ಗಳೆಂದು ಪರಿಗಣಿಸಿ, ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿಯಿಂದ ವಿನಾಯಿತಿ ನೀಡಲು ಸರ್ಕಾರವು ತೀರ್ಮಾನಿಸಿದೆ.


Downloaded From:www.kpscvaani.com



## ಆರ್.ವಿ. ದೇಶಪಾಂಡೆ ಅವರಿಗೆ

# ಅತ್ಯುತ್ತಮ ಶಾಸಕ ಪ್ರಶಸ್ತಿ

ಹೆಚ್. ಹರ್ಷಿತಾ

ಸಂಸದೀಯ ಸದಸ್ಯರುಗಳ ನಡವಳಿಕೆಗೆ ಉತ್ತೇಜನ ನೀಡುವ ಸಲುವಾಗಿ ಲೋಕಸಭೆಯಲ್ಲಿ ನೀಡಲಾಗುತ್ತಿರುವ ಪ್ರಶಸ್ತಿಯಂತೆ ರಾಜ್ಯದಲ್ಲೂ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ಕಳೆದ ಸಾಲಿನಿಂದ ನೀಡಲು ಆರಂಭಿಸಲಾಯಿತು.

ದೇಶದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆಯ ಅಂಗವಾಗಿ ರಾಜ್ಯ ಸರ್ಕಾರದ ಆಹ್ವಾನದ ಮೇರೆಗೆ ಆಗಮಿಸಿದ್ದ ಲೋಕಸಭಾಧ್ಯಕ್ಷರಾದ ಓಂ ಬಿರ್ಲಾ ಅವರು ಸೆಪ್ಟೆಂಬರ್ 24, 2021 ರಂದು ರಾಜ್ಯ ವಿಧಾನ ಮಂಡಲದ ಜಂಟಿ ಸದನವನ್ನು ಉದ್ದೇಶಿಸಿ ಭಾಷಣವನ್ನು ಮಾಡಿದ ಸಂದರ್ಭದಲ್ಲಿ 2021 ನೇ ಸಾಲಿನ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ಮೊದಲ ಬಾರಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ನೀಡಿ ಸನ್ಮಾನಿಸಿದ್ದರು.

ಬೆಳಗಾವಿಯ ಸುವರ್ಣಸೌಧದಲ್ಲಿ ಜರುಗಿದ ಚಳಿಗಾಲದ ಅಧಿವೇಶನ ಸಂದರ್ಭದಲ್ಲಿ ಡಿಸೆಂಬರ್ 28 ರಂದು ಹಿರಿಯ ಶಾಸಕರಾದ ಆರ್.ವಿ. ದೇಶಪಾಂಡೆ ಅವರಿಗೆ 2022 ನೇ ಸಾಲಿನ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಪ್ರದಾನ ಮಾಡಿ ಸನ್ಮಾನಿಸಿದರು.

ವಿಧಾನ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾನೂನು ಮತ್ತು



**ಸದನದ ಹಿರಿಯ ಶಾಸಕರಾದ ಆರ್.ವಿ. ದೇಶಪಾಂಡೆ ಅವರು 2022ನೇ ಸಾಲಿನ ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.**



Downloaded From:www.kpscvaani.com

ದೇಶಪಾಂಡೆ ಅವರು ಅಭಿವೃದ್ಧಿಯಲ್ಲಿ ಹಿನ್ನೆಡೆಯಾಗಿದ್ದ ಕ್ಷೇತ್ರದಿಂದ ಬಂದು, ಆ ಕ್ಷೇತ್ರವನ್ನು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಮಾಡಿ ಜನಮಾನಸವನ್ನು ಗೆದ್ದಿದ್ದಾರೆ. ಬಹಳ ಕಾಳಜಿಯಿಂದ ಜನರ ಕೆಲಸವನ್ನು ಮಾಡುತ್ತಾರೆ. ಜನರು ಅರ್ಜಿ ಕೊಟ್ಟರೆ ಅದರ ಬಗ್ಗೆ ಆಸಕ್ತಿಯಿಂದ ಕ್ರಮ ಕೈಗೊಳ್ಳುವ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ವಿಧಾನಮಂಡಲದ ವಿಧಾನಸಭೆಯ ನಡವಳಿಕೆಗಳನ್ನು ಎತ್ತರದ ಮಟ್ಟದಲ್ಲಿ ಹೇಗೆ ನಿಭಾಯಿಸುವುದು ಎಂಬುದನ್ನು ತಮ್ಮ ನಡೆತೆಯಿಂದ ತೋರಿಸಿಕೊಟ್ಟಿದ್ದಾರೆ. ಅವರು ನಡೆದು ಬಂದ ದಾರಿ ನಮಗೆಲ್ಲರಿಗೂ ಮಾದರಿಯಾಗಿದ್ದು, ಅನುಕರಣೀಯವಾಗಿದೆ. ಹೊಸದಾಗಿ ಬಂದ ಶಾಸಕರು ಇವರ ಕೊಡುಗೆ, ಅವರು ನಡೆಸಿದ ಚರ್ಚೆಗಳ ಬಗ್ಗೆ ತಿಳಿದುಕೊಳ್ಳುವ ಅವಶ್ಯಕತೆ ಇದೆ. ಇತಂಹ ದಕ್ಷ ಹಾಗೂ ಪ್ರಮಾಣಿಕ ವ್ಯಕ್ತಿಗೆ ಈ ಸಾಲಿನ ಅತ್ಯುತ್ತಮ ಶಾಸಕ ಪ್ರಶಸ್ತಿ ದೊರಕಿರುವುದು ಪ್ರಶಸ್ತಿಯ ಗೌರವ ಹಾಗೂ ಮೌಲ್ಯವನ್ನು ಹೆಚ್ಚಿಸಿದೆ.

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿಗಳು

ರಾಜಕಾರಣದಲ್ಲಿ ಅಜಾತಶತ್ರು ಎನಿಸಿಕೊಂಡಿರುವ ದೇಶಪಾಂಡೆ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಿರುವುದು ಅತ್ಯಂತ ಸ್ತುತ್ಯಾರ್ಹವಾದುದು. ಇತ್ತೀಚಿನ ದಿನಗಳಲ್ಲಿ ಸದನದ ಚರ್ಚೆಯಲ್ಲಿ ಗುಣಮಟ್ಟ ಕಡಿಮೆಯಾಗುತ್ತಿದೆ ಎಂಬುದು ಕೇಳಿಬರುತ್ತಿರುವಾಗ ದೇಶಪಾಂಡೆ ಅವರು ಚರ್ಚೆಯ ಗುಣಮಟ್ಟ ಹಾಗೂ ಸದನದ ಗೌರವ ಎತ್ತಿಹಿಡಿಯುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಎಂಟು ಬಾರಿ ಶಾಸಕರಾಗಿರುವ ಅವರು ರಾಜ್ಯ ಹಾಗೂ ದೇಶದ ಒಳಿತಿಗಾಗಿ ಹಗಲಿರುಳು ಶ್ರಮಿಸಿದ್ದಾರೆ. ವಿಧಾನಸಭೆಗೆ ನಿರಂತರವಾಗಿ ಹಾಜರಾಗಿ ಅರ್ಥಪೂರ್ಣ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ರಾಜ್ಯದಲ್ಲಿ ಕೈಗಾರಿಕೆ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅತ್ಯುತ್ತಮ ಸಂಸದೀಯ ಪಟುವಾಗಿರುವ ಆರ್.ವಿ. ದೇಶಪಾಂಡೆ ಅವರು ಪ್ರಶಸ್ತಿಗೆ ಆಯ್ಕೆಯಾಗಿರುವುದು ಅತ್ಯಂತ ಸಂತಸದ ವಿಷಯ.

**ಸಿದ್ದರಾಮಯ್ಯ**
ವಿರೋಧ ಪಕ್ಷದ ನಾಯಕರು

ಸಂಸದೀಯ ವ್ಯವಹಾರಗಳ ಸಚಿವರಾದ ಜೆ.ಸಿ. ಮಾಧುಸ್ವಾಮಿ, ಹಾಗೂ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಅವರನ್ನೊಳಗೊಂಡ ಸಮಿತಿಯು ಈ ಸಾಲಿನ ಪ್ರಶಸ್ತಿಗೆ ಶಾಸಕರನ್ನು ಆಯ್ಕೆ ಮಾಡಿತ್ತು.

ಎಂಟು ಬಾರಿ ಶಾಸಕರಾಗಿ ಆಯ್ಕೆಯಾಗಿರುವ 75 ವರ್ಷ ವಯಸ್ಸಿನ ಆರ್.ವಿ. ದೇಶಪಾಂಡೆ ಅವರು ಉತ್ತರ ಕರ್ನಾಟಕ ಜಿಲ್ಲೆಯ ಹಳಿಯಾಳು ಕ್ಷೇತ್ರದ ಶಾಸಕರಾಗಿದ್ದಾರೆ. ಅತ್ಯಂತ ಸರಳ, ಸಜ್ಜನ ವ್ಯಕ್ತಿತ್ವವನ್ನು ಹೊಂದಿರುವ ಅವರು ತಮ್ಮ ರಾಜಕೀಯ ಜೀವನವನ್ನು 1980 ರಲ್ಲಿ ಎಪಿಎಂಸಿ ನಿರ್ದೇಶಕರಾಗುವ ಮೂಲಕ ಆರಂಭಿಸಿದರು. 1983 ರ ಚುನಾವಣೆಯಲ್ಲಿ ಹಳಿಯಾಳ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು.

ತಮ್ಮ ಕ್ಷೇತ್ರದ ಜನರ ಸಮಸ್ಯೆಯನ್ನು ಪರಿಹರಿಸುತ್ತಾ ಕಾಳಜಿಯಿಂದ ಅಭಿವೃದ್ಧಿ ಕೆಲಸಗಳನ್ನು ಮಾಡಿದ ಫಲವಾಗಿ ಅವರು ಆ ಕ್ಷೇತ್ರದ ಜನರ ಮನಸ್ಸು ಗೆದ್ದು ಸತತ ಎಂಟು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅರಣ್ಯಕ್ಕೆ ಹೊಂದಿಕೊಂಡಿರುವಂತಹ ಕ್ಷೇತ್ರವಾಗಿದ್ದರಿಂದ ಹಳಿಯಾಳ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುವುದು ಸವಾಲಿನ ಕೆಲಸವಾಗಿತ್ತು. ಆದರೆ ದೇಶಪಾಂಡೆ ಅವರು ಹಳಿಯಾಳ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ ಪರಿಣಾಮ ಕ್ಷೇತ್ರದ ಜನರು ವಿಶ್ವಾಸವನ್ನು ಗಳಿಸಿದರು.

ಶ್ರಮಜೀವಿಯಾಗಿ, ಸ್ನೇಹಜೀವಿಯಾಗಿರುವ ದೇಶಪಾಂಡೆ ಅವರು ಪಕ್ಷಾತೀತವಾಗಿ ಎಲ್ಲರೊಂದಿಗೆ ಆಪ್ತವಾಗಿದ್ದಾರೆ. ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ತಪ್ಪದೇ ಹಾಜರಾಗಿ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ ಅವರು ರಾಜ್ಯದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅಲ್ಲದೆ ಅವರು ವಿವಿಧ ಖಾತೆಗಳನ್ನು ಅಚ್ಚುಕಟ್ಟಾಗಿ ಶ್ರದ್ಧೆ ಮತ್ತು ನಿಷ್ಠೆಯಿಂದ ನಿಭಾಯಿಸಿದ್ದಾರೆ.

ಅವರು ಸುಮಾರು ಹತ್ತು ವರ್ಷಗಳ ಕಾಲ ಕೈಗಾರಿಕಾ ಸಚಿವರಾಗಿದ್ದ ಹಿನ್ನೆಲೆಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಆ ಮೂಲಕ ಅವರು ನೂತನ ಶಾಸಕರುಗಳಿಗೆ ರೋಲ್ ಮಾಡಲ್ ಆಗಿ ಕಾಣಿಸುತ್ತಾರೆ.

ಕರ್ನಾಟಕದಲ್ಲಿ ಕೈಗಾರೀಕರಣ ಹಾಗೂ ಕೈಗಾರಿಕಾ ನೀತಿ ರೂಪಿಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಪ್ರಗತಿಪರ ಚಿಂತನೆಯುಳ್ಳ ಅವರು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಆರ್ಥಿಕತೆ ಬದಲಾವಣೆ ಉದಾರೀಕರಣ ಹಾಗೂ ಜಾಗತೀಕರಣದ ಲಾಭವನ್ನು ರಾಜ್ಯಕ್ಕೆ ಲಭಿಸುವಂತೆ ಮಾಡುವಲ್ಲಿ ಅವರು ಪ್ರಾಮಾಣಿಕ ಪರಿಶ್ರಮ ಹಾಕಿದ್ದಾರೆ. ಅಲ್ಲದೆ ರಾಜ್ಯದಲ್ಲಿ ಟೊಯೊಟಾ ಕಾರ್ಖಾನೆ ಸ್ಥಾಪನೆಗೆ ಪ್ರಮುಖ ಪಾತ್ರವಹಿಸಿದ್ದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಆರ್.ವಿ. ದೇಶಪಾಂಡೆ ಅವರು ಸಾರ್ವಜನಿಕ ಜೀವನದಲ್ಲಿ ಮೌಲ್ಯಗಳು ಕಡಿಮೆಯಾಗುತ್ತಿದೆ. ಹಾಗೆಯೇ ಜನರಿಗೆ ರಾಜಕಾರಣಿಗಳ ಮೇಲೆ ಇರುವ ಗೌರವವೂ ಕಡಿಮೆಯಾಗುತ್ತಿದೆ. ಶಾಸಕರಾಗಿ ಆಯ್ಕೆಯಾದವರು ತಮ್ಮ ಕ್ಷೇತ್ರದ ಜನರ ಸೇವೆ ಮಾಡುವುದು ನಮ್ಮ ಮೊದಲ ಕರ್ತವ್ಯ ಎಂದು ಭಾವಿಸಬೇಕು. ಸದನದಲ್ಲಿ ಶಿಸ್ತು ಪಾಲಿಸಬೇಕು. ಸಭಾಧ್ಯಕ್ಷರ ಸೂಚನೆಗಳಿಗೆ ಗೌರವ ಸಲ್ಲಿಸಿ, ಸಾರ್ವಜನಿಕ ಹಿತಾಸಕ್ತಿ ವಿಚಾರದ ಕುರಿತು ಚರ್ಚೆ ನಡೆಸುವ ಮೂಲಕ ಕ್ಷೇತ್ರದ ಜನರ ಋಣ ತೀರಿಸಬೇಕು ಎಂದು ಹೇಳಿದರು.


Downloaded From:www.kpscvaani.com












## ಅದ್ದೂರಿಯಾಗಿ ಜರುಗಿದ

# 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

**ಏಲಕ್ಕಿ ಕಂಪಿನ ನಾಡು ಹಾವೇರಿಯಲ್ಲಿ ನುಡಿ ತೇರನ್ನೆಳೆದು ಸಂಭ್ರಮಿಸಿದ ಕನ್ನಡಾಂಬೆಯ ಮಕ್ಕಳು.**

ಬಿ.ವಿ.ತುಕಾರಾಂರಾವ್

"ಕನ್ನಡದಾ ಮಕ್ಕಳೆಲ್ಲಾ ಒಂದಾಗಿ ಬನ್ನಿ, ತಾಯಿ ನುಡಿಯ ಹಬ್ಬ ನಾವಾದೆವೆನ್ನಿ" ಇದು ಏಲಕ್ಕಿ ಕಂಪನಿ ನಾಡು, ಕನಕದಾಸರು, ಶಿಶುನಾಳ ಶರೀಫರು ಮತ್ತು ಸರ್ವಜ್ಞರಂತಹವರು ಜನ್ಮತಳೆದು ತಪೋಭೂಮಿ ಎನಿಸಿರುವ ಹಾವೇರಿಯಲ್ಲಿ ಕಳೆದ ಜ. 06 ರಿಂದ 08 ರವರೆಗೆ ಮೂರು ದಿನಗಳ ಕಾಲ ಹಿರಿಯ ಸಾಹಿತಿ ಡಾ. ದೊಡ್ಡರಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆದ 86 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡ ಕನ್ನಡಾಂಬೆಯ ಮಕ್ಕಳು ನುಡಿ ತೇರನ್ನೆಳೆದು, ಅಕ್ಷರ ಜಾತ್ರೆಯ ಕನ್ನಡಂಗಳದಲ್ಲಿ ಮಿಂದೆದ್ದ ಕನ್ನಡಿಗರ ಉವಾಚ.

ಮುಖ್ಯಮಂತ್ರಿಗಳ ತವರು ಜಿಲ್ಲೆಯಾಗಿರುವ ಹಾವೇರಿ ಸಣ್ಣ ನಗರವಾದರೂ, ವ್ಯವಸ್ಥಿತವಾಗಿ, ಅದ್ದೂರಿಯಾಗಿ ಅಖಿಲ ಭಾರತ ಮಟ್ಟದ ಸಮ್ಮೇಳನವನ್ನು ಕೂಡ ಆಯೋಜಿಸಬಹುದು ಎಂಬುದಕ್ಕೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಾಕ್ಷಿಯಾಯಿತು. ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಮಹೇಶ್ ಜೋಶಿ ಅವರ ಇಚ್ಛಾಶಕ್ತಿಗೆ ಸಾಥ್ ನೀಡಿದ್ದು, ಹಾವೇರಿ ಜಿಲ್ಲಾಡಳಿತ ಮತ್ತು ಸಾಹಿತ್ಯಾಸಕ್ತರ ಆಸಕ್ತಿ ಎಂದರೆ ತಪ್ಪಾಗಲಾರದು.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ನಿರ್ಧಾರವಾದ ಬಳಿಕ, ಸಮ್ಮೇಳನ ಆಯೋಜಿಸಲು ಮೊದಲು ಅಡ್ಡಿಯುಂಟು ಮಾಡಿದ್ದೇ ಕೋವಿಡ್ ಎಂಬ ಮಹಾಮಾರಿ. ಈ ಎರಡು ವರ್ಷ ಸಾಹಿತ್ಯ ಸಮ್ಮೇಳನ ಆಯೋಜನೆಗೂ ಹಿಂದಡಿ ಇಡುವಂತೆ ಮಾಡಿತು. ಕೋವಿಡ್ ಆತಂಕದ ಕಾರ್ಮೋಡ ಸರಿದ ಬಳಿಕ, ಸರ್ಕಾರ, ಕಸಾಪ ಹಾಗೂ ಸಾಹಿತ್ಯಾಸಕ್ತರು ಅತ್ಯುತ್ಸಾಹದಿಂದ ಸಮ್ಮೇಳನ ನಡೆಸಲು ದೃಢ ನಿರ್ಧಾರ ಕೈಗೊಳ್ಳಲಾಗಿ, ಅತ್ಯಂತ ಅದ್ದೂರಿ ಹಾಗೂ ಅರ್ಥಪೂರ್ಣ ಸಮ್ಮೇಳನ ಅನಾವರಣಗೊಳ್ಳಲು ಸಾಧ್ಯವಾಯಿತು.

ಸಾಹಿತ್ಯ ಸಮ್ಮೇಳನ ಸಮಾರಂಭ ನಡೆಸಲು ಹಾವೇರಿ ನಗರದ ಹೊರವಲಯದಲ್ಲಿನ 128 ಎಕರೆ ಜೋಳದ ಹೊಲವನ್ನು ಆಯ್ಕೆ ಮಾಡಿ, ವಿಶಾಲವಾದ ಜಮೀನನ್ನೇ ಸಮ್ಮೇಳನದ ವೇದಿಕೆ ನಿರ್ಮಾಣಕ್ಕೆ ಸಜ್ಜುಗೊಳಿಸಲಾಯಿತು. ಒಂದೇ ಸ್ಥಳದಲ್ಲಿ ಪ್ರಧಾನ ವೇದಿಕೆ, ಉಳಿದೆರಡು ಸಮಾನಾಂತರ ವೇದಿಕೆಗಳು, ಪುಸ್ತಕ ಮಳಿಗೆ, ಫಲಪುಷ್ಪ ಪ್ರದರ್ಶನ ಮಳಿಗೆ, ಸಾರ್ವಜನಿಕರಿಗೆ ಊಟದ ವ್ಯವಸ್ಥೆಗಾಗಿ ಬೃಹತ್ ಪೆಂಡಾಲ್, ಸುಸಜ್ಜಿತ ಮಾಧ್ಯಮ ಕೇಂದ್ರ, ಗಣ್ಯರು, ಅತಿ ಗಣ್ಯರಿಗೆ ಹಾಗೂ ಮಾಧ್ಯಮದವರಿಗೆ ಪ್ರತ್ಯೇಕ


Downloaded From:www.kpscvaani.com

ಊಟದ ವ್ಯವಸ್ಥೆ ಸೇರಿದಂತೆ ಸಮ್ಮೇಳನದ ಎಲ್ಲ ಕಾರ್ಯಕ್ರಮಗಳ ವ್ಯವಸ್ಥೆಗೆ ಒಂದೇ ಪ್ರಾಂಗಣದಲ್ಲಿ ಆಯೋಜಿಸಿದ್ದು, ಬಹುಶಃ ಇದೇ ಸಮ್ಮೇಳನದಲ್ಲಿ ಎನ್ನಬಹುದು. ಇದರಿಂದಾಗಿ ಜನರಿಗೆ, ಸಾಹಿತ್ಯಾಸಕ್ತರಿಗೆ ವೇದಿಕೆಗಳನ್ನು ಹುಡುಕಾಡುವ ಸಮಸ್ಯೆ ಉದ್ಭವಿಸಲಿಲ್ಲ. ಊಟದ ಕೌಂಟರ್‌ಗಳಿಗೆ ಬಹುದೂರ ಹುಡುಕಿಕೊಂಡು ಹೋಗುವಂತಹ ಪ್ರಮೇಯವೇ ಬರಲಿಲ್ಲ.

ಸಮ್ಮೇಳನದ ಇನ್ನೊಂದು ಬಹುಮುಖ್ಯ ವಿಶೇಷವೆಂದರೆ, ಇಡೀ ಸಮ್ಮೇಳನದ ಪ್ರಾಂಗಣದ ನೆಲವನ್ನು ನೆಲಹಾಸು ಹೊದಿಕೆ ಹೊದಿಸಿದ್ದು, ಇದರಿಂದಾಗಿ ಲಕ್ಷಾಂತರ ಜನರು ಸಮ್ಮೇಳನದ ಆವರಣದಲ್ಲಿ ಓಡಾಡಿದರೂ, ಧೂಳಿನ ಕಿರಿಕಿರಿ ಉಂಟಾಗಲಿಲ್ಲ. ಸಮ್ಮೇಳನದಲ್ಲಿ ಕನಕ–ಶರೀಫ–ಸರ್ವಜ್ಞರ ಹೆಸರಿನಲ್ಲಿ ಪ್ರಧಾನ ವೇದಿಕೆ ನಿರ್ಮಿಸಿದರೆ, ಉಳಿದಂತೆ ಪಾಪು–ಚಂಪಾ ವೇದಿಕೆ ಹಾಗೂ ಶ್ರೀ ಹಾನಗಲ್ ಕುಮಾರ ಶಿವಯೋಗಿಗಳ ಹೆಸರಿನಲ್ಲಿ ಸಮಾನಾಂತರ ವೇದಿಕೆಗಳನ್ನು ನಿರ್ಮಿಸಿ, ಹಲವು ಅರ್ಥಪೂರ್ಣ ಗೋಷ್ಠಿಗಳನ್ನು ನಡೆಸಲಾಯಿತು. ಸಾಮಾನ್ಯವಾಗಿ ಸಮ್ಮೇಳನ ಎಂದರೆ ಉದ್ದುದ್ದ ಭಾಷಣಗಳು, ವಿಷಯಾಂತರಗೊಳಿಸಿ ಸಮಯ ವ್ಯರ್ಥ ಮಾಡುತ್ತಾರೆ ಎಂಬ ಆರೋಪಗಳು ಕೇಳಿಬರುತ್ತಿದ್ದವು. ಆದರೆ ಹಾವೇರಿಯಲ್ಲಿ ಸಮ್ಮೇಳನದುದ್ದಕ್ಕೂ ಸಮಯಕ್ಕೆ ಪ್ರಾಮುಖ್ಯತೆ ನೀಡಿದ್ದು ವಿಶೇಷ, ಎಲ್ಲ ಗಣ್ಯರು, ಸಾಹಿತಿಗಳು, ಗೋಷ್ಠಿಯಲ್ಲಿ ವಿಷಯ ಮಂಡಿಸುವವರು ಹೀಗೆ ಪ್ರತಿಯೊಬ್ಬರಿಗೂ ನಿಮಿಷಗಳ ಲೆಕ್ಕದಲ್ಲಿ ಸಮಯಾವಕಾಶವನ್ನು ಮೊದಲೇ ನಿರ್ಧರಿಸಿದ್ದರಿಂದ, ಯಾವುದೇ ಭಾಷಣಗಳು, ಗೋಷ್ಠಿಗಳಲ್ಲಿ ಬೇಸರವೆನಿಸುವಷ್ಟರ ಮಟ್ಟಿಗೆ ವಿಷಯ ಮಂಡನೆಗಳು ಕಂಡುಬರಲಿಲ್ಲ. ಗೋಷ್ಠಿಗಳಲ್ಲಿ ನಿಖರತೆ ಹಾಗೂ ಸಮಯಕ್ಕೆ ಬಹಳಷ್ಟು ಮಹತ್ವ ನೀಡಿದ್ದು, ಇಡೀ ಸಮ್ಮೇಳನದಲ್ಲಿ ಕಂಡುಬಂದು ಇತರೆ ಕಾರ್ಯಕ್ರಮಗಳಿಗೆ ಮಾದರಿಯೆನಿಸಿತು.

**ಭವ್ಯ ಮೆರವಣಿಗೆ:** ಜನವರಿ 6 ರಂದು ಅತ್ತ ಮೂಡಣದಲ್ಲಿ ದಿನಕರ ಎಂದಿನಂತೆ ತನ್ನ ಕಿರಣಗಳನ್ನು ಭುವಿಗೆ ಹರಿಸಲು ಆರಂಭಿಸುತ್ತಿದ್ದರೆ, ಇತ್ತ ಹಾವೇರಿ ನಗರದಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸಂಪ್ರದಾಯದಂತೆ ಬೆಳಿಗ್ಗೆ 7.30 ಗಂಟೆಗೆ ಕನಕ–ಶರೀಫ–ಸರ್ವಜ್ಞ ಪ್ರಧಾನ ವೇದಿಕೆ ಬಳಿ ರಾಜ್ಯ ಕಾರ್ಮಿಕ ಸಚಿವರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಅರೆಬೈಲು ಶಿವರಾಮ ಹೆಬ್ಬಾರ್ ಅವರಿಂದ ರಾಷ್ಟ್ರಧ್ವಜ, ಕಸಾಪ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಶಿ ಅವರಿಂದ ಪರಿಷತ್ತಿನ ಧ್ವಜ ಹಾಗೂ ಜಿಲ್ಲಾಧ್ಯಕ್ಷರಾದ ಲಿಂಗಯ್ಯ ಹಿರೇಮಠ್‌ರಿಂದ ನಾಡಧ್ವಜಾರೋಹಣ ನೆರವೇರಿಸುವ ಮೂಲಕ ಸಮ್ಮೇಳನದ ಕಾರ್ಯಕ್ರಮಗಳಿಗೆ ವಿಧ್ಯುಕ್ತ ಚಾಲನೆ ನೀಡಲಾಯಿತು. ನಗರದ ಶ್ರೀ ಪುರಸಿದ್ದೇಶ್ವರ ದೇವಸ್ಥಾನ ಬಳಿಯಿಂದ ಮೆರವಣಿಗೆಯು ಅದ್ಧೂರಿಯಾಗಿ ಆರಂಭವಾಯಿತು. ತಾಯಿ ಭುವನೇಶ್ವರಿ ಭಾವಚಿತ್ರ ಹೊತ್ತ ರಥವು ಮೆರವಣಿಗೆಯ ಮುಂಚೂಣಿ ಸ್ಥಳವನ್ನು ಅಲಂಕರಿಸಿತು. ಕನ್ನಡದ ಮೇರು ಸಾಹಿತಿ ಡಾ. ದೊಡ್ಡರಂಗೇಗೌಡರು ಪುಷ್ಪಾಲಂಕೃತ ಸಾರೋಟಿನಲ್ಲಿ ವಿರಾಜಮಾನರಾಗಿ, ಮೆರವಣಿಗೆಯುದ್ದಕ್ಕೂ ಜನಸಮೂಹದತ್ತ ಕೈಬೀಸಿ, ಕನ್ನಡಾಭಿಮಾನಿಗಳಿಗೆ ಗೌರವ ಸಲ್ಲಿಸುತ್ತಾ ಸಾಗಿದರು.

ಮೆರವಣಿಗೆಯಲ್ಲಿ ಕೀಲುಕುದುರೆ, ಚಿಲಿಪಿಲಿ ಗೊಂಬೆ, ವೀರಗಾಸೆ ಸೇರಿದಂತೆ ಈ ನಾಡಿನ ಸೊಗಡು ಸೂಸುವ ಸಾಂಸ್ಕೃತಿಕ ಕಲಾತಂಡಗಳು ಭಾಗಿಯಾಗಿ ರಾಜ್ಯದ ಸಾಂಸ್ಕೃತಿಕ ಪರಂಪರೆಯ ವೈವಿಧ್ಯತೆಯನ್ನು ಬಿಂಬಿಸಿದವು. ಕೊಂಬು ಕಹಳೆ, ತಮಟೆ, ಡೊಳ್ಳು, ಖಣಿ ಹಲಿಗೆಯ ಸದ್ದು, ಅಕ್ಷರ ಜಾತ್ರೆ ಮೆರವಣಿಗೆಗೆ ಮೆರಗು ನೀಡಿತು. ಪುರವಂತಿಕೆ, ಝಾಂಜ್ ಮೇಳ ಸೇರಿದಂತೆ ನೂರಾರು ಕಲಾತಂಡಗಳು ಮೆರವಣಿಗೆಯನ್ನು ಆಕರ್ಷಕಗೊಳಿಸಿದವು. ಮೆರವಣಿಗೆಯ ರಸ್ತೆ ಇಕ್ಕೆಲದಲ್ಲೂ ನಿಂತು




## ಗಮನ ಸೆಳೆದ ವಾರ್ತಾ ಇಲಾಖೆ ವಸ್ತು ಪ್ರದರ್ಶನ

ಸಾಹಿತ್ಯ ಸಮ್ಮೇಳನದ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಆಯೋಜಿಸಿದ್ದ ಸರ್ಕಾರದ ವಿವಿಧ ಯೋಜನೆಗಳ ಪ್ರಚಾರದ ವಸ್ತು ಪ್ರದರ್ಶನ ಮಳಿಗೆಯು ವಿಶೇಷ ಆಕರ್ಷಣೆಯ ಕೇಂದ್ರವಾಯಿತು. ಜನರು ಕಿಕ್ಕಿರಿದು ಸೇರಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಜನಪರ ಯೋಜನೆಗಳ ಮಾಹಿತಿಯನ್ನು ಫಲಕಗಳ ವೀಕ್ಷಣೆ ಮೂಲಕ ಪಡೆದುಕೊಂಡರು. ವಸ್ತು ಪ್ರದರ್ಶನ ಮಳಿಗೆ ಮುಂದೆ ಕಲಾತ್ಮಕವಾಗಿ ರೂಪಿಸಿದ್ದ ಸಾಹಿತಿ ದಿಗ್ಗಜರಾದ ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತ ಸೇರಿದಂತೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪುತ್ಥಳಿ ಮುಂದೆ ನಿಂತು ಸೆಲ್ಫಿ ತೆಗೆಸಿಕೊಂಡು ಕನ್ನಡಾಭಿಮಾನಿಗಳು ಸಂಭ್ರಮಿಸಿದರು. ಇದು ಸಮ್ಮೇಳನ ಮುಗಿಯುವವರೆಗೂ ಸೆಲ್ಫಿ ತಾಣವಾಗಿದ್ದು ವಿಶೇಷ.




Downloaded From:www.kpscvaani.com

ಸಾವಿರಾರು ಜನ ಮೆರವಣಿಗೆಯ ವೈಭವವನ್ನು ಕಣ್ತುಂಬಿಕೊಂಡರು.

ತಮ್ಮ ತವರು ಕ್ಷೇತ್ರದಲ್ಲಿಯೇ ನಡೆದ ಸಮ್ಮೇಳನದ ಯಶಸ್ಸಿಗೆ ಅಗತ್ಯ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡುವ ಮೂಲಕ ಸರ್ವ ರೀತಿಯಲ್ಲಿಯಲ್ಲೂ ಮುತುವರ್ಜಿ ವಹಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮ್ಮೇಳನದ ಉದ್ಘಾಟನೆ ನೆರವೇರಿಸಿ, "ಸಮಗ್ರ ಭಾಷಾ ಅಭಿವೃದ್ಧಿಗೆ ಕಾನೂನಿನ ಸ್ವರೂಪ ನೀಡುವುದು, ಕನ್ನಡಿಗರಿಗೆ ಕೈಗಾರಿಕೆಗಳ ಉದ್ಯೋಗದಲ್ಲಿ ಶೇ. 80 ರಷ್ಟು ಪ್ರಾಶಸ್ತ್ಯ, ಗಡಿ ಭಾಗದ ಹಾಗೂ ಗಡಿ ಆಚೆಗಿನ ಕನ್ನಡಿಗರ ಹಿತ ಕಾಯಲು ನಮ್ಮ ಸರ್ಕಾರ ಬದ್ಧವಾಗಿದೆ. ಗಡಿ ಅಭಿವೃದ್ಧಿಗೆ 100 ಕೋಟಿ ರೂ. ವಿಶೇಷ ಅನುದಾನ ಒದಗಿಸುವುದಾಗಿ ತಿಳಿಸಿದರು, ಕನ್ನಡಿಗರ ಸಂಸ್ಕೃತಿಯು ಶ್ರೇಷ್ಠವಾಗಿದ್ದು, ಕನ್ನಡ ಹೆಮ್ಮರವಾಗಿ ಬೆಳೆಯಲು ಕನ್ನಡದ ಕಂಪನ್ನು ಬಿತ್ತಿ, ಬೆಳೆಯಲು ಇಂತಹ ಸಮ್ಮೇಳನಗಳು ಬೇಕು. ಕನ್ನಡ ಭಾಷೆ ಎಂದಿಗೂ ಬಡವಾಗಿಲ್ಲ, ಸೂರ್ಯ ಚಂದ್ರರು ಇರುವವರೆಗೂ ಕನ್ನಡ ಶ್ರೀಮಂತವಾಗಿ ಬೆಳೆಯುತ್ತಲೇ ಇರುತ್ತದೆ. ಕನ್ನಡಕ್ಕೆ ಆಪತ್ತು ತರುವ ಯಾವುದೇ ಶಕ್ತಿ ಹುಟ್ಟಿಲ್ಲ, ಹುಟ್ಟುವುದೂ ಇಲ್ಲ. ವಚನ ಮತ್ತು ದಾಸ ಸಾಹಿತ್ಯ ಪ್ರಕಾರಗಳು ಕನ್ನಡದ ಅಂತಃಸತ್ವವನ್ನು ಗಟ್ಟಿಗೊಳಿಸಿವೆ ಎಂದು ಕನ್ನಡಾಭಿಮಾನದ ನುಡಿಗಳನ್ನಾಡಿದರು.



ನಿಕಟಪೂರ್ವ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಅವರು ಸಮ್ಮೇಳನದ ಅಂಗವಾಗಿ ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಿದರು. ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ಹಾವೇರಿಯಲ್ಲಿ ಕಸಾಪ ಭವನಕ್ಕೆ 3 ಕೋಟಿ ರೂ. ಅನುದಾನ ಘೋಷಣೆ ಮಾಡಿ, ಭಾಷಾ ಸಂಶೋಧನೆಗೆ ತೊಡಗಿಸಿಕೊಳ್ಳಲು ಉನ್ನತ ಸಮಿತಿಯನ್ನು ರಚಿಸುವುದಾಗಿಯೂ ತಿಳಿಸಿದರು.

**ಒಂದಂಗುಲ ನೆಲವನ್ನೂ ಬಿಡಲ್ಲ:** ಸಮ್ಮೇಳನಾಧ್ಯಕ್ಷರಾಗಿ ಭಾಷಣ ಮಾಡಿದ ಡಾ. ದೊಡ್ಡರಂಗೇಗೌಡರು "ಬೆಳಗಾವಿ ನಮ್ಮದು, ಕನ್ನಡದ ಒಂದಂಗುಲ ನೆಲವನ್ನೂ ಬೇರೆಯವರಿಗೆ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಕ್ಯಾತೆ ತೆಗೆದು ಬಂದವರ ಖಾತೆಗಳೇ ಇಲ್ಲವಾಗಿಸಬಲ್ಲರು ಕನ್ನಡಿಗರು" ಎಂದು ಸಿಡಿಲ ನುಡಿಗಳನ್ನಾಡಿದರು. ನಾಡಿಗೆ ಅವಮಾನವಾದರೆ ಕೆರಳುತ್ತದೆ ನಮ್ಮಭಿಮಾನ. ನಾಡು ನುಡಿಗೆ ಅನ್ಯಾಯವಾಗಲು ನಾವು ಕನ್ನಡಿಗರು ಬಿಡುವುದಿಲ್ಲ. ನಮಗೆ ಎದುರಿಸುವ ಕೆಚ್ಚೂ, ನೆಚ್ಚೂ, ಆತ್ಮ ವಿಶ್ವಾಸ ಇದ್ದೇ ಇದೆ. ಬೆಳಗಾವಿಯನ್ನು ನಾವು ಕನ್ನಡಿಗರು ಯಾವ ಕಾರಣಕ್ಕೂ ಬಿಟ್ಟುಕೊಡುವುದಿಲ್ಲ. ಇದು ನಮ್ಮ ಹೃದಯಾಂತರಾಳದ ವಾಂಛೆ. ನಮ್ಮದಲ್ಲದ ನೆಲವನ್ನು ನಾವು ಅಪೇಕ್ಷಿಸುವುದೂ ಇಲ್ಲ, ನಮ್ಮ ರಾಜ್ಯದ ಸ್ವತ್ತನ್ನು ನಮ್ಮ ಸರ್ಕಾರ ಕೂಡ ಬಿಟ್ಟುಕೊಡುವುದಿಲ್ಲ. ಇದು ಸತ್ಯದ ಮಾತು ಎಂದು ಖಂಡತುಂಡವಾಗಿ ಹೇಳಿದರು.

**ಅರ್ಥಪೂರ್ಣ ಗೋಷ್ಠಿಗಳು:** ಸಾಹಿತ್ಯ ಸಮ್ಮೇಳನ ಆರಂಭದ ದಿನದ ಬೆಳಿಗ್ಗೆ ನಡೆದ ಕನ್ನಡತಾಯಿ ಭುವನೇಶ್ವರಿ ದೇವಿ ಹಾಗೂ ಸಮ್ಮೇಳನಾಧ್ಯಕ್ಷರ ಮೆರವಣಿಗೆಯು ಸಾಂಸ್ಕೃತಿಕ ಕಲಾತಂಡಗಳು, ಕಲಾ ಮೇಳ ಸಮ್ಮೇಳನಕ್ಕೆ ರಂಗು ತಂದರೆ, ಸಮ್ಮೇಳನದ ಅಂಗವಾಗಿ ಮೂರು ದಿನಗಳ ಕಾಲ ಮೂರು ವೇದಿಕೆಯಲ್ಲಿ ಜರುಗಿದ ಅರ್ಥಪೂರ್ಣ ವಿಷಯಗಳ ಗೋಷ್ಠಿಗಳು, ಕವಿಗೋಷ್ಠಿಗಳು ಸಾಹಿತ್ಯಾಸಕ್ತರ ಮನತಣಿಸಿದವು. ಪ್ರಧಾನ ವೇದಿಕೆಯಲ್ಲಿ ಕನ್ನಡದಲ್ಲಿ ಕಾನೂನು ಸಾಹಿತ್ಯ, ಮಾಧ್ಯಮದಲ್ಲಿ ಹೊಸತನ ಮತ್ತು ಆವಿಷ್ಕಾರಗಳು, ಶಿಕ್ಷಣದಲ್ಲಿ ಕನ್ನಡದ ಅಸ್ಮಿತೆ, ಅನ್ನದಾತರ ಅಳಲು-ಅಪೇಕ್ಷೆಗಳು, ವರ್ತಮಾನದಲ್ಲಿ ಮಹಿಳೆ, ದಮನಿತ ಲೋಕದ ಸಬಲೀಕರಣ ಮುಂತಾದ ಗೋಷ್ಠಿಗಳಲ್ಲಿ ಅರ್ಥಪೂರ್ಣ ವಿಷಯಗಳು ಮಂಡನೆಯಾಗಿ ಚಿಂತಕರ ಚಾವಡಿಯಲ್ಲಿ ಚರ್ಚೆಗಳು ಅನುರಣನಗೊಂಡವು. ಸಮಾನಾಂತರ ವೇದಿಕೆಗಳಲ್ಲಿ ಕನ್ನಡ ದಿಗ್ಗಜರು, ವಚನ ಪರಂಪರೆ, ವಿದೇಶದಲ್ಲಿ ಕನ್ನಡ ಡಿಂಡಿಮ, ವಿಜ್ಞಾನ ಮಾಹಿತಿ ತಂತ್ರಜ್ಞಾನದೊಂದಿಗೆ ಕನ್ನಡ, ಮರೆಯಲಾಗದ ಮಹನೀಯರು, ಬೆಳ್ಳಿತೆರೆ-ಕಿರುತೆರೆ ಮುಂತಾದ ಗೋಷ್ಠಿಗಳು ಕನ್ನಡ ಭಾಷಾ ಸಾಹಿತ್ಯ ಆಳಗಲದ ಪರಿಚಯ ಮಾಡಿಸಿದವು.

**ಉತ್ತರ ಕರ್ನಾಟಕ ಶೈಲಿಯ ಭೂರಿ ಭೋಜನ:** ಸಾಹಿತ್ಯದೌತಣ ಪಡೆಯಲು ಆಗಮಿಸಿದ ಸಾಹಿತ್ಯಾಸಕ್ತರಿಗೆ ಸಮ್ಮೇಳನದಲ್ಲಿ ಮೂರು ದಿನಗಳ ಕಾಲವೂ ಉತ್ತರ ಕರ್ನಾಟಕ ಶೈಲಿಯ ಭೂರಿ ಭೋಜನದ ರಸದೌತಣ ಸವಿಯಲು ದೊರೆಯಿತು. ಸಮ್ಮೇಳನದಲ್ಲಿ ದಿನಕ್ಕೊಂದು ವಿಶೇಷದಂತೆ ಅಚ್ಚುಕಟ್ಟಾದ ಊಟದ ವ್ಯವಸ್ಥೆ ಮಾಡಲಾಯಿತು. ಮೊದಲ ದಿನ ಬೆಳಗಿನ ಉಪಹಾರಕ್ಕೆ ಸಿರಾ ಉಪ್ಪಿಟ್ಟು. ಮಧ್ಯಾಹ್ನ ಶೇಂಗಾ ಹೋಳಿಗೆ, ಬದನೆಕಾಯಿ ಪಲ್ಯ, ಚಪಾತಿ, ಶೇಂಗಾ ಚಟ್ನಿ. ರಾತ್ರಿ ಊಟಕ್ಕೆ ಹೆಸರುಬೇಳೆ ಪಾಯಸ, ಪುಳಿಯೋಗರೆ ಉಣಬಡಿಸಲಾಯಿತು. ಮೂರು ದಿನಗಳು ಬೆಳಗಿನ ಉಪಹಾರದೊಂದಿಗೆ ಬೆಲ್ಲದ ಚಹಾ ನೀಡಿದರೆ, ಮಧ್ಯಾಹ್ನ ಮತ್ತು ರಾತ್ರಿಗೆ ಅನ್ನ ಸಾಂಬಾರ್ ಮತ್ತು ಮೊಸರು ಖಾಯಂ ಸ್ಥಾನ ಪಡೆದಿತ್ತು. ಸಾರ್ವಜನಿಕರು, ಗಣ್ಯರು, ಅತಿ ಗಣ್ಯರು, ಮಾಧ್ಯಮದವರಿಗೆ ಪ್ರತ್ಯೇಕವಾಗಿ ಊಟದ

## ಮುಂದಿನ ಸಮ್ಮೇಳನ ಮಂಡ್ಯದಲ್ಲಿ

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಯೋಜನೆಗೆ ಹಲವು ಜಿಲ್ಲೆಗಳಿಂದ ಭಾರೀ ಪೈಪೋಟಿ ನಡೆಯಿತು. ಇದರ ನಡುವೆ ಸಕ್ಕರೆ ನಾಡು ಮಂಡ್ಯ ಜಿಲ್ಲೆಗೆ ಮುಂದಿನ ಸಾಹಿತ್ಯ ಸಮ್ಮೇಳನದ ಆತಿಥ್ಯ ವಹಿಸುವ ಭಾಗ್ಯ ದೊರೆಯಿತು. ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ವಿವಿಧ ಜಿಲ್ಲೆಗಳು ಮುಂದಿನ ಸಮ್ಮೇಳನದ ಆತಿಥ್ಯಕ್ಕೆ ಹಕ್ಕೊತ್ತಾಯ ಮಂಡಿಸಿದ್ದವು. ಸಂಪ್ರದಾಯದಂತೆ ನಡೆದ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿಣಿ ಸಭೆಯಲ್ಲಿ ಹಲವು ಸುತ್ತಿನ ಚರ್ಚೆಯ ಬಳಿಕ, ಮತದಾನದ ನಿರ್ಧಾರವಾಗಿ, ಅಂತಿಮವಾಗಿ ಮಂಡ್ಯ ಜಿಲ್ಲೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆತಿಥ್ಯ ಪಡೆದುಕೊಳ್ಳುವಲ್ಲಿ ಯಶಸ್ವಿಯಾಯಿತು.



Downloaded From:www.kpscvaani.com

ಕೇಂದ್ರದ ವ್ಯವಸ್ಥೆ ಮಾಡಲಾಗಿತ್ತು. ಮೂರು ದಿನಗಳ ಕಾಲ ನಿತ್ಯವೂ ಸುಮಾರು 5 ರಿಂದ 6 ಲಕ್ಷ ಜನರಿಗೆ ಅಚ್ಚುಕಟ್ಟಾದ, ವ್ಯವಸ್ಥಿತ ರೀತಿಯಲ್ಲಿ ಊಟದ ವ್ಯವಸ್ಥೆ ಮಾಡಲಾಯಿತು.

**ಪುಸ್ತಕ ವ್ಯಾಪಾರ ಬಲು ಜೋರು:** ಸಮ್ಮೇಳನದಲ್ಲಿನ ಗೋಷ್ಠಿಗಳ ಅರ್ಥಪೂರ್ಣ ವಿಷಯ ಮಂಡನೆಯಲ್ಲಿ ಜ್ಞಾನ ಪಡೆದ ಜನರಿಗೆ, ವೇದಿಕೆಯ ಪಕ್ಕದಲ್ಲಿಯೇ ಪುಸ್ತಕಗಳನ್ನು ಖರೀದಿಸಿ, ಇನ್ನಷ್ಟು ಜ್ಞಾನ ಹೆಚ್ಚಿಸಿಕೊಳ್ಳಲು ವ್ಯವಸ್ಥಿತವಾಗಿ 200ಕ್ಕೂ ಹೆಚ್ಚು ಪುಸ್ತಕ ಮಳಿಗೆ ನಿರ್ಮಿಸಲಾಗಿತ್ತು. ನಾಡಿನ ಮೂಲೆ ಮೂಲೆಗಳಿಂದ ಬಂದಿದ್ದ ಪ್ರಕಾಶಕರು, ಪುಸ್ತಕ ವಿತರಕರಿಂದ ಪುಸ್ತಕ ಮಾರಾಟದ ವ್ಯವಹಾರವು ಸರಿಸುಮಾರು ಒಂದು ಕೋಟಿ ರೂ.ಗಳ ಗಡಿ ದಾಟಿ ಜೋರಾಗಿಯೇ ನಡೆಯಿತು. ಪುಸ್ತಕ ವ್ಯಾಪಾರ ಜನರಲ್ಲಿನ ಜ್ಞಾನದ ಹಸಿವು ನೀಗಿಸಿಕೊಳ್ಳಲು ನೆರವಾಯಿತು.

**ಸುನಾಮಿಯಂತೆ ಹರಿದು ಬಂದ ಜನ:** ಮೂರು ದಿನಗಳ ಕಾಲ ನಡೆದ ಅದ್ದೂರಿ ಅಕ್ಷರ ಜಾತ್ರೆಯಲ್ಲಿ ಮೂರು ದಿನವೂ ಸಾಗರೋಪಾದಿಯಲ್ಲಿ ಜನರು ಹಾವೇರಿಯ ಸಮ್ಮೇಳನದಲ್ಲಿ ಲಕ್ಷಾಂತರ ಜನ ಕುಟುಂಬ ಸಮೇತರಾಗಿ ಬಂದರೆ, ಇನ್ನು ಪರ ಊರಿನಲ್ಲಿನ ನೆಂಟರಿಷ್ಟರನ್ನೂ ಹಾವೇರಿಗೆ ಕರೆಯಿಸಿಕೊಂಡು ಸಮ್ಮೇಳನದ ಸವಿ ಸವಿಯಲು ಸಾವಿರಾರು ಕುಟುಂಬಗಳು ಪಾಲ್ಗೊಂಡವು. ನಾಡಿನ ಮೂಲೆ ಮೂಲೆಯಿಂದಲೂ ಮಾತ್ರವಲ್ಲದೆ, ವಿದೇಶದಲ್ಲಿ ನೆಲೆಸಿರುವ ಕನ್ನಡಾಭಿಮಾನಿಗಳು, ಎಲ್ಲ ಧರ್ಮ, ಭಾಷೆಗಳ ಎಲ್ಲೆ ಮೀರಿ ಸಮ್ಮೇಳನಕ್ಕಾಗಿ ಆಸಕ್ತಿಯಿಂದ ಸಾಗರೋಪಾದಿಯಾಗಿ ಬಂದು ಪಾಲ್ಗೊಂಡರು. ಸಮ್ಮೇಳನದಲ್ಲಿ ಪ್ರತಿ ದಿನವೂ ಅಂದಾಜು 5 ರಿಂದ 6 ಲಕ್ಷ ಜನ ಸೇರಿದ್ದು, ಎಲ್ಲಿಯೂ ಯಾವುದೇ ಗೊಂದಲ, ಗಲಾಟೆ ನಡೆದಿದ್ದು ಕಂಡು ಬರಲಿಲ್ಲ. ಇದು ಅಚ್ಚುಕಟ್ಟುತನದ ಸಮ್ಮೇಳನಕ್ಕೆ ಹಿಡಿದ ಕನ್ನಡಿಯಾಗಿದೆ. ಬೆಳಿಗ್ಗೆಯಿಂದ ರಾತ್ರಿಯವರೆಗೂ ತಂಡೋಪತಂಡವಾಗಿ ಜನ ನುಡಿಜಾತ್ರೆಗೆ ಬರುತ್ತಲೇ ಇದ್ದುದನ್ನು ಕಂಡ ಕನ್ನಡ ಮನ ಪುಳಕಿತಗೊಳ್ಳದೇ ಇರಲಿಲ್ಲ. ಕಣ್ಣು ಹಾಯಿಸಿದೆಡೆಯೆಲ್ಲಾ ಜನವೋ ಜನ. ತಿಂಡಿ, ತಿನಿಸು, ಬಟ್ಟೆ ಅಂಗಡಿಗಳು ಸೇರಿದಂತೆ ಎಲ್ಲೆಡೆ ವ್ಯವಹಾರ ಜೋರಾಗಿತ್ತು. ಸಾಹಿತ್ಯ, ಚರ್ಚೆ ಸಂವಾದ, ಪುಸ್ತಕ ಖರೀದಿಗಾಗಿ ಸುತ್ತಾಡಿ ಸುಸ್ತಾದ ಕನ್ನಡದ ಮನಸುಗಳಿಗೆ ಪ್ರತಿ ದಿನ ಸಂಜೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು, ನಗೆ ಹಬ್ಬಗಳು ಉಲ್ಲಾಸ ತುಂಬುವಲ್ಲಿ ಯಶಸ್ವಿಯಾದವು.

ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿಸುವಲ್ಲಿ ಜಿಲ್ಲಾಡಳಿತದ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ಕಸಾಪ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಶಿ, ಜಿಲ್ಲಾಧಿಕಾರಿಗಳಾದ ರಘುನಂದನ್ ಮೂರ್ತಿ, ಜಿ.ಪಂ. ಸಿಇಒಗಳಾದ ಮೊಹಮ್ಮದ್ ರೋಷನ್, ಎಸ್‌ಪಿ ಹನುಮಂತರಾಯ ಅವರ ಪರಿಶ್ರಮ ಸಮ್ಮೇಳನದ ಪ್ರತಿಯೊಂದು ಹಂತದಲ್ಲಿನ ಅಚ್ಚುಕಟ್ಟುತನಕ್ಕೆ ಸಾಕ್ಷಿಯಾಯಿತು. ಕನ್ನಡ ಮತ್ತು ಸಂಸ್ಕೃತಿ ಹಾಗೂ ಇಂಧನ ಸಚಿವರಾದ ವಿ. ಸುನಿಲ್ ಕುಮಾರ್, ಕೃಷಿ ಸಚಿವರಾದ ಬಿ.ಸಿ. ಪಾಟೀಲ್, ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರು ಹಾಗೂ ಶಾಸಕರಾದ ನೆಹರು ಓಲೇಕಾರ ಸೇರಿದಂತೆ ಹಾವೇರಿ ಜಿಲ್ಲಾ ಕ್ಷೇತ್ರದಲ್ಲಿನ ಎಲ್ಲ ಶಾಸಕರುಗಳು, ವಿಧಾನಪರಿಷತ್ ಸದಸ್ಯರು, ಸಂಸದರು, ಸಚಿವರುಗಳು ಕೂಡ ಸಮ್ಮೇಳನದ ಯಶಸ್ವಿಗೆ ತಮ್ಮದೇ ಆದ ಕೊಡುಗೆ ನೀಡಿದ್ದರು. ■


## STATEMENT ABOUT OWNERSHIP AND OTHER PARTICULARS ABOUT VARTHA JANAPADA

### FORM IV Rule 8

1. Place of Publication : Bengaluru
2. Periodicity of Publication : Monthly
3. Printer Name : G. Gopalakrishna
   Nationality : Indian
   Address : Lavanya Mudrana, Banashankari 1st Stage, Vidyapeeta Circle, Benglauru - 560 050
4. Publishers Name : Dr. P.S. Harsha
   Nationality : Indian
   Address : Dept. of Information & Public Relations, #17, Mahaveer Road, (Infantry Rd) Bengaluru - 560 001.
5. Editor's Name : Dr. P.S. Harsha
   Nationality : Indian
   Address : Dept. of Information & Public Relations, #17, Mahaveer Road, (Infantry Rd) Bengaluru - 560 001.
6. License No. - Regd. No. **PMG/BG/WPP/365/2021-23**

I, **Dr P S Harsha** hereby declare that the particulars given above are true to the best of my knowledge and belief.


Bengaluru
01.02.2023

Sd.
Commissioner
Signature of the Publisher




Downloaded From:www.kpscvaani.com

# ಪದಬಂಧ-39



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಮರುನಾಮಕರಣಗೊಂಡ ದೆಹಲಿಯ ರಾಜಪಥ್ ರಸ್ತೆಯ ಹೆಸರು (5)
2. ಓದು ಬರಹ ಬಲ್ಲವನು (3)
4. ಕಮ್ಮಾರನ ಕೈ (2)
5. ಕುಮಾರವ್ಯಾಸ ಪಂಪ ಲಕ್ಷೀಶ ಕವಿಗಳ ಊರು (3)
7. ಆಸ್ಥಾನದಲ್ಲಿರುವ ಜಾಗ ಕಾಣುತ್ತಿದೆಯೇ? (2)
8. ಹುಬ್ಬಳ್ಳಿಧಾರವಾಡದಲ್ಲಿ ಜನವರಿ 12ರಂದು ಜರುಗಿದರಾಷ್ಟ್ರೀಯ ಉತ್ಸವ (6)
10. ಹಂತಕನು ಏರಿದ ಮೆಟ್ಟಿಲು (2)
12. ಸೂರ್ಯನ ಇನ್ನೊಂದು ಹೆಸರು (2)
13. ಹನ್ನೆರಡನೇ ಶತಮಾನದಲ್ಲಿ ನಡೆದ ಕಲ್ಯಾಣಕ್ರಾಂತಿಯಪಟ್ಟಣ ಇಂದು ಬೀದರ ಜಿಲ್ಲೆಯ ತಾಲೂಕು (6)
16. ಕುಟಿಲನ ವಂಶ! (2)
17. ಈತ ಹಾಡುಗಾರ (3)
19. ಯವಜನ ನೋಡಿರುವ ಕಾಡು (2)
20. ಕನ್ನಡಿಗನ ಲೆನ್ಸ್ (3)
21. ಹಳೆಯದನ್ನು ಹೊಸದು ಮಾಡುವಿಕೆ (5)

## ಮೇಲಿಂದ ಕೆಳಕ್ಕೆ

1. ಭಕ್ತರು ತಲೆಯ ಮೇಲೆ ಕಲಶವನ್ನು ಹೊತ್ತು ನಡೆಸುವ ಉತ್ಸವ(3)
2. ಸಾಕ್ಷರನಲ್ಲಿರುವ ತಿರುಳು!(2)
3. ರಸ ಒಸರುವ ಜಿಹ್ವೆ (3)
4. ನೋಡುವವನು ತಿರುಗಿದ್ದಾನಲ್ಲಾ (3)
6. ಯುಗಳದಲ್ಲಿರುವ ದೀರ್ಘಕಾಲಾವಧಿ ಉಲ್ಟಾ ಆಗಿದೆ (2)
7. ಕೊನೆಗೆ ವರನಿದ್ದಾಗ ಚರವಲ್ಲದುದು ಕಾಣುತ್ತಿದೆ (3)
9. ಜನರ ಹತ್ತಿರವಿರುವ ತಂದೆ (3)
11. ಇದೊಂದು ಚರ್ಮವಾದ್ಯ (3)
14. ವನದಲ್ಲಿರುವ ಉಡುಗೆ ಕಾಣುತ್ತಿದೆಯೇ (3)
15. ಎಣ್ಣೆ ಅಥವಾ ಕಬ್ಬಿನ ರಸವನ್ನು ತೆಗೆಯುವ ಯಂತ್ರತಿರುವುಮುರುವಾಗಿದೆ (2)
16. ಯಾವ ವಸ್ತುವೂ ಸಿಗದ ಹಳ್ಳಿ (3)
18. ಕಣದಲ್ಲಿ ನಡೆದ ಮದುವೆ (3)
19. ವಠಾರದಲ್ಲಿರುವ ಮದುವೆ ಗಂಡು (2)

## ಉತ್ತರ

**ಎಡದಿಂದ ಬಲಕ್ಕೆ**

1. ಕರ್ತವ್ಯಪಥ್ 2. ಸಾಕ್ಷರ 4. ಕರ 5. ಗದಗ 7. ಸ್ಥಾನ
8. ಯುವಜನೋತ್ಸವ 10. ಹಂತ 12. ರವಿ 13. ಬಸವಕಲ್ಯಾಣ
16. ಕುಲ 17.ಗಾಯಕ 19.ವನ 20.ಮಸೂರ
21. ನವೀಕರಣ

**ಮೇಲಿಂದ ಕೆಳಕ್ಕೆ**

1. ಕರಗ 2. ಸಾರ 3. ರಸನ 4. ಕಟನೋ 6. ಗಯು
7. ಸ್ಥಾವರ 9. ಜನಕ 11. ತಬಲ 14. ವಸನ 15.ಣಗಾ
16. ಕುಗ್ರಾಮ 18. ಕಲ್ಯಾಣ 19.ವರ

### -: ಸೂಚನೆ :-

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಬೆಳಗಾವಿಯ ಸುವರ್ಣಸೌಧದಲ್ಲಿ ರಾಷ್ಟ್ರೀಯ ನಾಯಕರ ಭಾವಚಿತ್ರಗಳನ್ನು ವಿಧಾನಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೊಂದಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಜೆ.ಸಿ.ಮಾಧುಸ್ವಾಮಿ, ಗೋವಿಂದ ಕಾರಜೋಳ, ಸಿ.ಸಿ.ಪಾಟೀಲ್, ಉಪಸ್ಥಿತರಿದ್ದಾರೆ.





ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗಣರಾಜ್ಯೋತ್ಸವದ ನಿಮಿತ್ತ ಜನವರಿ 19 ರಂದು ಬೆಂಗಳೂರಿನ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಲಾಗಿದ್ದ ಫಲಪುಷ್ಪ ಪ್ರದರ್ಶನವನ್ನು ಉದ್ಘಾಟಿಸಿ, ವೀಕ್ಷಣೆ ಮಾಡುತ್ತಿರುವುದು.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




ಈ ಬಾರಿ ಗಣರಾಜ್ಯೋತ್ಸವದಂದು ದೆಹಲಿಯ ಕರ್ತವ್ಯಪಥ್‌ನಲ್ಲಿ ಸಾಗಿದ ನಾರಿ ಶಕ್ತಿ ಬಿಂಬಿಸುವ ಕರ್ನಾಟಕದ ಸ್ತಬ್ಧಚಿತ್ರ

Downloaded From:www.kpscvaani.com